ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 21 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 244 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com,
website: www.mysurumithra.com

₹4

ಮೈಸೂರು ನಗರದಾದ್ಯಂತ ಅನಧಿಕೃತ ಜಾಹೀರಾತು ಫಲಕಗಳ ತೆರವು ಕಾರ್ಯಾಚರಣೆ ಆರಂಭ



ಅನಧಿಕೃತ ಜಾಹೀರಾತು ಫಲಕಗಳನ್ನು ಮೈಸೂರು ನಗರಪಾಲಿಕೆ ಅಧಿಕಾರಿಗಳು ತೆರವುಗೊಳಿಸುತ್ತಿರುವುದನ್ನು ಕಾಣಬಹುದು.

'ಮೈಸೂರು ಮಿತ್ರ' ವರದಿಗೆ ಪಾಲಿಕೆ ಅಧಿಕಾರಿಗಳ ಸ್ಪಂದನೆ

ಮೈಸೂರು, ಡಿ.20(ಆರ್‌ಕೆ)– ಮೈಸೂರು ನಗರದಾದ್ಯಂತ ಅಳವಡಿಸಿದ್ದ ಅನಧಿಕೃತ ಜಾಹೀರಾತು ಫಲಕಗಳನ್ನು ಮೈಸೂರು ನಗರಪಾಲಿಕೆ ಅಧಿಕಾರಿಗಳು ತೆರವುಗೊಳಿಸುತ್ತಿದ್ದಾರೆ.

ಡಿ.18ರಿಂದ ತೆರವು ಕಾರ್ಯಾಚರಣೆ ಆರಂಭಿಸಿರುವ ಮೈಸೂರು ಮಹಾನಗರ ಪಾಲಿಕೆ, ಕಂದಾಯ ವಿಭಾಗದ ಅಧಿಕಾರಿಗಳು, ಅಭಯ ತಂಡ ಹಾಗೂ ಗ್ಯಾಂಗ್ ಮನೆಗಳ ನೆರವಿನಿಂದ ಅನುಮತಿ ಪಡೆಯದೆ ಅನಧಿಕೃತವಾಗಿ ಅಳವಡಿಸಿರುವ ವಿವಿಧ ಖಾಸಗಿ ಕಂಪನಿಗಳ ಜಾಹೀರಾತು ಫಲಕಗಳನ್ನು ತೆರವುಗೊಳಿಸುತ್ತಿದ್ದಾರೆ.



'ಮೈಸೂರು ನಗರದಾದ್ಯಂತ 500ಕ್ಕೂ ಅನಧಿಕೃತ ಜಾಹೀರಾತು ಫಲಕಗಳು ರಾರಾಜಿಸುತ್ತಿವೆ' ತಲೆಬರಹದಡಿ 'ಮೈಸೂರು ಮಿತ್ರ'ನಲ್ಲಿ ಡಿ.15ರಂದು ಸುದ್ದಿ ಪ್ರಕಟವಾಗಿತ್ತು. ಅದರ ಬೆನ್ನಲ್ಲೇ ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ಅವರ ನಿರ್ದೇಶನದಂತೆ ಉಪ ಆಯುಕ್ತ (ಕಂದಾಯ) ಸೋಮಶೇಖರ್, ಸಿಬ್ಬಂದಿ ಸಭೆ ನಡೆಸಿ ಅನಧಿಕೃತ ಫಲಕಗಳ ಪಟ್ಟಿ ಮಾಡಿಸಿದ್ದರು.

ಪಾಲಿಕೆಯಿಂದ ನಿಗದಿತ ಶುಲ್ಕ ಪಾವತಿಸಿ ನಿಯಮಾನುಸಾರ ಅನುಮತಿ ಪಡೆದಿರುವುದು ಕೇವಲ 210ಕ್ಕೆ ಮಾತ್ರ. ಅನಧಿಕೃತವಾಗಿ 500ಕ್ಕೂ ಹೆಚ್ಚು ಜಾಹೀರಾತು ಫಲಕಗಳನ್ನು ಅಳವಡಿಸಲಾಗಿದೆ ಎಂಬುದು ಪರಿಶೀಲನೆ ವೇಳೆ ತಿಳಿದು ಬಂದಿತ್ತು. ಫೋಟೋ, ವೀಡಿಯೋ ತೆಗೆದು ಕಂದಾಯಾಧಿಕಾರಿಗಳು, ಉಪ ಆಯುಕ್ತರಿಗೆ ಅನಧಿಕೃತ ಫಲಕಗಳ ಪಟ್ಟಿಯೊಂದಿಗೆ ವರದಿ ನೀಡಿದ್ದರು. ಬುಧವಾರ ಮುಂಜಾನೆಯಿಂದಲೇ ಜೆಸಿಬಿ, ಅಭಯ ತಂಡ, ಟ್ರ್ಯಾಕ್ಟರ್ ಬಳಸಿ ಜಾಹೀರಾತು ಫಲಕಗಳ ತೆರವು ಕಾರ್ಯಾಚರಣೆ ಆರಂಭಿಸಿದ ಅಧಿಕಾರಿಗಳು ಈಗಾಗಲೇ ಶೇ.50ರಷ್ಟು ಪೂರ್ಣಗೊಳಿಸಿದ್ದು, ನಾಳೆ (ಡಿ.21) ಸಂಜೆಯೊಳಗಾಗಿ ಮೈಸೂರು ನಗರದಾದ್ಯಂತ ಅಳವಡಿಸಿರುವ ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಲಾಗುವುದು ಎಂದು ಉಪ ಆಯುಕ್ತ (ಕಂದಾಯ) ಸೋಮಶೇಖರ್ ಮೈಸೂರು ಮಿತ್ರನಿಗೆ ತಿಳಿಸಿದರು. ಮೆಟ್ರೋಪೋಲ್ ಸರ್ಕಲ್‌ನಿಂದ ಹಿನಕಲ್ ರಿಂಗ್ ರಸ್ತೆ ಜಂಕ್ಷನ್‌ವರೆಗೆ 25, ರಾಯಲ್ ಇನ್ ಜಂಕ್ಷನ್‌ನಿಂದ ದಾಸಪ್ಪ ಸರ್ಕಲ್‌ವರೆಗೆ ಕೆಆರ್‌ಎಸ್ ರಸ್ತೆಯಲ್ಲಿ 10, ರೈಲ್ವೆ ನಿಲ್ದಾಣದಿಂದ ನಂಜನಗೂಡು ರಸ್ತೆ ಜಂಕ್ಷನ್‌ವರೆಗೆ ಜೆಎಲ್‌ಬಿ ರಸ್ತೆಯಲ್ಲಿ 30 ಸೇರಿದಂತೆ ಬೆಂಗಳೂರು–ನೀಲಗಿರಿ ರಸ್ತೆ, ಚಾಮರಾಜ ಜೋಡಿ ರಸ್ತೆ, ಮಹಾತ್ಮ ಗಾಂಧಿ ಜೋಡಿ ರಸ್ತೆ ಸೇರಿದಂತೆ 750ಕ್ಕೂ ಹೆಚ್ಚು ವಿವಿಧ ಅಳತೆಯ ಜಾಹೀರಾತು ಫಲಕಗಳನ್ನು ಅಳವಡಿಸಿದ್ದರಿಂದ ಮೈಸೂರಿನ ಸೌಂದರ್ಯಕ್ಕೆ ಧಕ್ಕೆ ಉಂಟಾಗಿ ರುವುದರ ಜೊತೆಗೆ ಪರಿಸರಕ್ಕೂ ಹಾನಿಯಾಗುತ್ತಿತ್ತು.

ಮತ್ತೆ ಫಲಕ ಅಳವಡಿಸಲು ಬಿಡಬಾರದು



ನಾರಾಯಣಗೌಡ

ಮೈಸೂರು, ಡಿ. 20(ಆರ್‌ಕೆ)– ಮೈಸೂರಲ್ಲಿ ಅನಧಿಕೃತವಾಗಿ ಜಾಹೀರಾತು ಫಲಕ ಅಳವಡಿಸಲು ಪಾಲಿಕೆ ಅಧಿಕಾರಿಗಳು ಅವಕಾಶ ನೀಡಬಾರದು ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ ಆಗ್ರಹಿಸಿದ್ದಾರೆ.

ಕಳೆದ 5 ದಿನಗಳ ಹಿಂದಷ್ಟೇ ಅನಧಿಕೃತ ಜಾಹೀರಾತು ಫಲಕಗಳು ರಾರಾ ಜಿಸುತ್ತಿವೆ ಎಂದು 'ಮೈಸೂರು ಮಿತ್ರ' ಸಚಿತ್ರ ವರದಿ ಮಾಡುತ್ತಿದ್ದಂತೆ ಎಚ್ಚೆತ್ತ ಮೈಸೂರು ಮಹಾನಗರ ಪಾಲಿಕೆ ಕಂದಾಯ ವಿಭಾಗದ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿರುವುದು ಒಳ್ಳೆಯ ಕ್ರಮ ಎಂದು ತಿಳಿಸಿದ್ದಾರೆ. ಅನುಮತಿ ಪಡೆಯದೇ ಅಳವಡಿಸುವ ಫಲಕಗಳನ್ನು ತೆಗೆದು ಹಾಕಲು ಪಾಲಿಕೆಗೆ ಲಕ್ಷಾಂತರ ರೂ. ಖರ್ಚಾಗುತ್ತದೆ. ಯಾರೋ ಮಾಡಿದ ತಪ್ಪಿಗೆ ಸರ್ಕಾರಿ ಹಣವನ್ನು ಏಕೆ ವ್ಯಯಿಸಬೇಕು. ಅದರ ಬದಲಾಗಿ ಫಲಕ ಹಾಕುವಾಗಲೇ ತಡೆಯಬಹುದಲ್ಲವೆ? ಮುಂದೆಯಾದರೂ ಮತ್ತೆ ಅನಧಿಕೃತವಾಗಿ ಎಲ್ಲೆಂದರಲ್ಲಿ ಜಾಹೀರಾತು ಫಲಕ ಅಳವಡಿಸದಂತೆ ಎಚ್ಚರ ವಹಿಸಬೇಕು. ಇಲ್ಲದಿದ್ದರೆ ಮೈಸೂರಿನ ಸೌಂದರ್ಯ ಹಾಳಾಗುತ್ತದೆ ಎಂದು ನಾರಾಯಣಗೌಡ ಅಭಿಪ್ರಾಯಪಟ್ಟಿದ್ದಾರೆ.



ಚಾಮುಂಡಿಬೆಟ್ಟದ ತಪ್ಪಲಿನ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಪೂಜಾ ಕಾರ್ಯಕ್ರಮ

ಮೈಸೂರು, ಡಿ.20(ಜಿಎ)– ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶಬರಿಮಲೆ ಅಯ್ಯಪ್ಪ ಸ್ವಾಮಿ ಪೂಜಾ ಸಮಿತಿ ವತಿಯಿಂದ ದೇವಸ್ಥಾನದಲ್ಲಿ ಡಿ.21 ರಿಂದ 64ನೇ ವರ್ಷದ ಪೂಜಾ ಆಚರಣಾ ಕಾರ್ಯಕ್ರಮಗಳು ನಡೆಯಲಿವೆ ಎಂದು ಅಧ್ಯಕ್ಷ ಜಿ. ಶ್ರೀನಿವಾಸ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.21ರಂದು ವಾರ್ಷಿಕ ಪೂಜಾ ಮಹೋತ್ಸವ ಸೇರಿದಂತೆ ಐದು ದಿನಗಳ ಕಾರ್ಯಕ್ರಮ ಇದಾಗಿದ್ದು, ಡಿ.25ರವರೆಗೆ ನಡೆಯುವ ಈ ಕಾರ್ಯ ಕ್ರಮದಲ್ಲಿ ಗುರುವಾಯೂರು ತಂತ್ರಿ ಗಳಾದ ಡಾ.ಚೆನ್ನಾಸ್ ದಿನೇಶನ್ ನಂಬೂದಿರಿ ಪಾಡ್ ಅವರ ನೇತೃತ್ವ ವಹಿಸಲಿದ್ದಾರೆ. ಈ ಐದೂ ದಿನ ಸಾವಿರಾರು ಮಂದಿಗೆ ಅನ್ನದಾನ ಇರಲಿದೆ. ಹೀಗಾಗಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಆರ್. ಹರಿದಾಸ್, ಆರ್.ಕೃಷ್ಣೋಜಿ ರಾವ್, ಬಸವಾರಾಧ್ಯ, ಸುರೇಂದ್ರನ್, ಸುನಿಲ್‌ಕುಮಾರ್ ಉಪಸ್ಥಿತರಿದ್ದರು.

ಸಿ.ಟಿ.ರವಿ ವರ್ತನೆಗೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಕಿಡಿ

ನನ್ನ ವಿರುದ್ಧ ಬಳಸಬಾರದ ಪದವನ್ನು ಬಳಸಿದರು; ಬೇಸರ



ಬೆಂಗಳೂರು, ಡಿ. 20(ಕೆಎಂಶಿ)– ಬಿಜೆಪಿ ಶಾಸಕ ಸಿ.ಟಿ.ರವಿ ಅವರ ವರ್ತನೆ ಬಗ್ಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಕಿಡಿಕಾರಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿಂತಕರ ಚಾವಡಿಯಲ್ಲಿ ರವಿ ಅವರು ನನ್ನ ವಿರುದ್ಧ ಹೇಯವಾಗಿ ವರ್ತಿಸಿದ್ದಾರೆ. ಬಳಸಬಾರದ ಪದ ಬಳಸಿದ್ದಾರೆ. ಅವರ ವರ್ತನೆ ಮತ್ತು ಪದಗಳ ಬಳಕೆ ಎಲ್ಲರ ಸಮ್ಮುಖದಲ್ಲೇ ನಡೆದಿದೆ. ನಾನು ಏತಕ್ಕೆ ಸುಳ್ಳು ಹೇಳಲಿ ಎಂದು ಸಮರ್ಥಿಸಿಕೊಂಡರು.

ರಾಜಕಾರಣದಲ್ಲಿ ಬಹಳಷ್ಟು ಧೈರ್ಯದಿಂದ ನಾನು ಈ ಮಟ್ಟಕ್ಕೆ ಬೆಳೆದಿದ್ದೇನೆ. ನನ್ನನ್ನು ನೋಡಿ ಸಾವಿರಾರು ಮಹಿಳೆಯರು ರಾಜಕಾರಣಕ್ಕೆ ಬಂದಿದ್ದಾರೆ.

ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಅವರನ್ನು ಡ್ರಗ್ಗಿಸ್ಟ್ ಎಂದು ಪದೇ ಪದೆ ರವಿ ಅವರು ಹೇಳುತ್ತಿದ್ದಾಗ, ನೀವೊಬ್ಬ ಕೊಲೆಗಾರ ಎಂದು ಹೇಳಿದ್ದು ನಿಜ.

ಈ ಸಂದರ್ಭದಲ್ಲಿ ನನ್ನ ವಿರುದ್ಧ ಹೇಯ ಪದವನ್ನು ಬಳಸಿದ್ದಾರೆ. ನಾನು ಇಂತಹದ್ದಕ್ಕೆಲ್ಲಾ ಹೆದರುವುದಿಲ್ಲ, ಆದರೆ ಮಾತಿನ ಮನೆಯಲ್ಲಿ ಇಂತಹ ಘಟನೆ ನಡೆದಿದ್ದು ನನಗೆ ಬೇಸರ ತಂದಿದೆ ಎಂದರು.

ನಿಧನ



ನಿವೃತ್ತ ಶಿಕ್ಷಕ ಮೋಹನ್ ಜೋಶಿ

ಮೈಸೂರು, ಡಿ.20– ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆಯ ನಿವೃತ್ತ ಶಿಕ್ಷಕ ಹಾಗೂ ಲೇಖಕ ಮೋಹನ್ ಜೋಶಿ ಡಿ.19ರಂದು ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ಮೃತರಿಗೆ 80 ವರ್ಷ ವಯಸ್ಸಾಗಿತ್ತು. ಮೂಲತಃ ಹೊನ್ನಾವರದವರಾಗಿದ್ದು, ಇವರ ಅನೇಕ ಲೇಖನಗಳು ಸುಧಾ ವಾರಪತ್ರಿಕೆಯಲ್ಲಿ ಐದಾರು ವರ್ಷ ಸತತವಾಗಿ ಪ್ರಕಟಗೊಂಡಿವೆ. ಆಕಾಶವಾಣಿಯಲ್ಲೂ ಅವರ ಚಿಂತನ, ಭಾಷಣಗಳು ಪ್ರಸಾರವಾಗಿವೆ. ಮೃತರು ಪತ್ನಿ, ಪುತ್ರಿ, ಪುತ್ರ, ಮೊಮ್ಮಕ್ಕಳು ಹಾಗೂ ಅಪಾರ ಶಿಷ್ಯ ವರ್ಗವನ್ನು ಅಗಲಿದ್ದಾರೆ. ಇಂದು ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಎಸ್.ನಾಗರಾಜ್



ಮೈಸೂರು, ಡಿ.20–ಮೈಸೂರಿನ ಸರಸ್ವತಿಪುರಂ ನಿವಾಸಿ ಕೆ.ಎಸ್. ನಾಗರಾಜ್(72) ಅವರು ಇಂದು (ಶುಕ್ರವಾರ) ನಿಧನರಾದರು. ಮೃತರು ಪತ್ನಿ, ಪುತ್ರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರ ಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪೈಲ್ವಾನ್ ಕೆಂಪೇಗೌಡ



ಮೈಸೂರು: ಮೈಸೂರಿನ ಪಡುವಾರಹಳ್ಳಿ ನಿವಾಸಿ ದಿವಂಗತ ಕೆಲ್ಲಳ್ಳಿ ಕೆಂಪಯ್ಯನವರ ಪುತ್ರ ಪೈಲ್ವಾನ್ ಕೆಂಪೇಗೌಡ(87) ಅವರು ಇಂದು ನಿಧನರಾದರು. ಮೃತರು ಮೂವರು ಪುತ್ರರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಡಿ.21) ಬೆಳಗ್ಗೆ 11 ಗಂಟೆಗೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಿಸಲಾಗು ವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಸವರಾಜು



ಮೈಸೂರು: ಮೈಸೂರಿನ ಪಡುವಾರಹಳ್ಳಿ ನಿವಾಸಿ ಬಸವರಾಜು (40) ಅವರು ಇಂದು ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಮಾಜಿ ಕಾರ್ಪೊರೇಟರ್ ಚಿಕ್ಕವೆಂಕಟು, ಯುವ ಸಾಹಿತಿ ಶಂಕರ್ ಸಂತಾಪ ಸೂಚಿಸಿದ್ದಾರೆ.

ಬೋರಮ್ಮ



ಮೈಸೂರು : ಮೈಸೂರಿನ ಗಾಂಧಿನಗರದ ನಿವಾಸಿ ದಿವಂಗತ ರಾಮು ಅವರ ಪತ್ನಿ ಬೋರಮ್ಮ(94) ಅವರು ನಿನ್ನೆ (ಡಿ.19) ನಿಧನರಾದರು. ಮೃತರು ಇಬ್ಬರು ಪುತ್ರರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗಾಂಧಿನಗರ ರುದ್ರಭೂಮಿಯಲ್ಲಿ ಇಂದು (ಡಿ.20) ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ

ನಿಂಗಮ್ಮ



ಕೆ.ಆರ್.ಪೇಟೆ, ಡಿ.20– ತಾಲೂಕಿನ ನಾರ್ಗೋನಹಳ್ಳಿ ಗ್ರಾಮದ ಹಿರಿಯ ಮುಖಂಡ ಚಿಕ್ಕಣ್ಣಗೌಡರ ಧರ್ಮಪತ್ನಿ ನಿಂಗಮ್ಮ (85) ಶುಕ್ರವಾರ ನಿಧನ ಹೊಂದಿದ್ದಾರೆ. ಮೃತರು ಶಿಕ್ಷಕ ಎನ್.ಸಿ. ಲಿಂಗೇಗೌಡ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ ಮೃತರ ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ 10.30ಕ್ಕೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.12.2024 ಶನಿವಾರ, ಮಳೆ ನಕ್ಷತ್ರ: ಮೂಲ, 16.12.2024 ರಿಂದ 28.12.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಧನುರ್ಮಾಸ, ಕೃಷ್ಣ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಪುಬ್ಬ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾಪೀಠ, ಅಭಯದಾಯಕ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಬಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಪ್ರಾಂಗಣ, ರಾಘವೇಂದ್ರನಗರ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಮೈಸೂರು ಉಪ ವಲಯ :** ವಿಶ್ವ ಧ್ಯಾನ ದಿನ, ಸಾನ್ನಿಧ್ಯ : ರಾಜಯೋಗಿನಿ ಬಿ.ಕೆ. ಲಕ್ಷ್ಮೀಜಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಉಪಸ್ಥಿತರು : ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ, ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕರಾದ ಶ್ರೀಮತಿ ಎಂ.ಕೆ. ಸವಿತಾ, ಜಿಲ್ಲಾ ಆಯುಷ್ ಅಧಿಕಾರಿ ಶ್ರೀಮತಿ ಡಾ.ಪುಷ್ಪ, ಸ್ಥಳ: ಬಯಲು ರಂಗ ಮಂದಿರ, ಮಾನಸಗಂಗೋತ್ರಿ, ಬೆಳಗ್ಗೆ 5.30 ರಿಂದ.

■ **ಶಾರದಾ ವಿಲಾಸ ಪದವಿ ಪೂರ್ವ ಕಾಲೇಜು:** 'ಸಮಷ್ಟಿ' ವಾರ್ಷಿಕ ಕ್ರೀಡಾಕೂಟ 2024, ಕ್ರೀಡಾಕೂಟಕ್ಕೆ ಚಾಲನೆ : ಲಕ್ಷ್ಮೀಪುರಂ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ಬಿ.ಎಸ್. ರವಿಶಂಕರ್, ವಿಶೇಷ ಆಹ್ವಾನಿತರು: ಸಂಸ್ಥೆ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್, ಆಡಳಿತ ಮಂಡಳಿ ಹಿರಿಯ ಸದಸ್ಯ ಎಸ್.ಎಲ್.ರಾಮಚಂದ್ರ, ಅಧ್ಯಕ್ಷತೆ: ಪ್ರಾಂಶುಪಾಲ ಸಿ.ಕೆ.ಅಶೋಕಕುಮಾರ್, ಉಪಸ್ಥಿತರು: ದೈಹಿಕ ಶಿಕ್ಷಣ ವಿಭಾಗದ ಉಪನ್ಯಾಸಕ ಡಿ. ಶಿವಶಂಕರ್, ಸ್ಥಳ: ಕಾಲೇಜು ಆವರಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 9ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ವಿವೇಕಾನಂದ ಇನ್‌ಸ್ಟಿಟ್ಯೂಟ್ ಫಾರ್ ಲೀಡರ್‌ಶಿಪ್ ಡೆವಲಪ್‌ಮೆಂಟ್ ಸಂಸ್ಥೆ :** ಮಳೆ ನೀರು ಕೊಯ್ಲು ವ್ಯವಸ್ಥೆಗಳ ಕಾರ್ಯಾಗಾರ, ಸ್ಥಳ: ವಿ–ಲೀಡ್ ಕ್ಯಾಂಪಸ್, ಹೆಬ್ಬಾಳು, ಬೆಳಗ್ಗೆ 10ಕ್ಕೆ.

■ **ಹಾರ್ಡ್ವಿಕ್ ಪ್ರೌಢಶಾಲೆ, ಕಾವೇರಿ ಬಳಗ ಮತ್ತು ಹಿರಣ್ಮಯಿ ಪ್ರತಿಷ್ಠಾನ :** ರಾಷ್ಟ್ರೀಯ ಗಣಿತ ದಿನಾಚರಣೆ, ಅಧ್ಯಕ್ಷತೆ : ಹಾರ್ಡ್ವಿಕ್ ಪ್ರೌಢಶಾಲೆ ಮುಖ್ಯ ಶಿಕ್ಷಕ ಗುರುಭಕ್ತಯ್ಯ, ಉದ್ಘಾಟನೆ : ಸಾಹಿತಿ ಬನ್ನೂರು ಕೆ. ರಾಜು, ಪ್ರಧಾನ ಭಾಷಣ : ಲೇಖಕ ಎಸ್.ಜಿ. ಸೀತಾರಾಂ, ಉಪಸ್ಥಿತರು : ಎಂ. ಮುತ್ತುಸ್ವಾಮಿ, ಶ್ರೀಮತಿ ಎನ್.ಕೆ. ಕಾವೇರಿಯಮ್ಮ, ಎ. ಸಂಗಪ್ಪ, ಸ್ಥಳ: ಹಾರ್ಡ್ವಿಕ್ ಪ್ರೌಢಶಾಲೆ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.

■ **ಶಬರಿ ಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ, ಶ್ರೀ ಅಯ್ಯಪ್ಪಸ್ವಾಮಿ ಮತ್ತು ಶ್ರೀ ಗುರುವಾಯೂರಪ್ಪನ್ ದೇವಾಲಯ:** 64ನೇ ವಾರ್ಷಿಕ ಪೂಜಾ ಮಹೋತ್ಸವ, ಬೆಳಗ್ಗೆ 4.50 ರಿಂದ ಪೂಜಾ ಕೈಂಕರ್ಯ, ಬೆಳಗ್ಗೆ 10.30 ರಿಂದ ಶ್ರೀ ಕೃಷ್ಣನ್ ಕುಟ್ಟಿ ಆಸಾನ್ ಮತ್ತು ವೃಂದದವರಿಂದ ಭಜನೆ, ಮಧ್ಯಾಹ್ನ 12.30ಕ್ಕೆ ಮಹಾಅನ್ನದಾನ, ಸಂಜೆ 6ಕ್ಕೆ ಶ್ರೀರಾಘವೇಂದ್ರ ರತ್ನಾಕರ ಮತ್ತು ತಂಡದಿಂದ ಭಕ್ತಿಗೀತೆಗಳು, ಸ್ಥಳ: ದೇವಸ್ಥಾನದ ಆವರಣ, ಚಾಮುಂಡಿಬೆಟ್ಟದ ಪಾದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಆಕ್ಯೂಪ್ರೆಶರ್, ಆಕ್ಯೂ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ಸಿದ್ಧಿವಿನಾಯಕ ಸ್ವಾಮಿ ದೇವಸ್ಥಾನದ ಆವರಣ, ರಾಮಕೃಷ್ಣನಗರ, ಬೆಳಗ್ಗೆ 10.30 ರಿಂದ.

■ **ಮೈಸೂರು ಯುವ ಒಕ್ಕೂಟ :** ಕನ್ನಡ ರಾಜ್ಯೋತ್ಸವ ಆಚರಣೆ, ಮುಖ್ಯ ಅತಿಥಿಗಳು : ಹೇಮಂತ್ ನಾಗರಾಜ್, ವಿ. ಪ್ರಶಾಂತ್, ಡಾ. ವೈ.ಡಿ. ರಾಜಣ್ಣ, ಡಾ. ಸುದರ್ಶನ್, ಶಂಭುಲಿಂಗಸ್ವಾಮಿ, ನಾಣಿ ಹೆಬ್ಬಾಳ್, ಸ್ಥಳ: ಮೈಸೂರು ರೈಲ್ವೆ ಮುಖ್ಯ ದ್ವಾರ, ಬೆಳಗ್ಗೆ 10.30 ರಿಂದ.

■ **ಮಹರ್ಷಿ ಧ್ಯಾನ ಕೇಂದ್ರ ಮತ್ತು ವ್ಯಕ್ತಿ ವಿಕಾಸ ಕೇಂದ್ರ :** ವಿಶ್ವ ಧ್ಯಾನ ದಿನ ಮತ್ತು ಪರಮಪೂಜ್ಯ ಭಗವಾನ್ ಬ್ರಹ್ಮಾನಂದ ಸರಸ್ವತಿಯವರ ಜನ್ಮ ದಿನೋತ್ಸವ, ಆಶೀರ್ವಚನ : ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಅಧ್ಯಕ್ಷತೆ : ಕೇಂದ್ರದ ಗೌರವ ಅಧ್ಯಕ್ಷ ಪ್ರೊ. ಕೆ.ಆರ್. ಜಗನ್ನಾಥಯ್ಯ ಶೆಟ್ಟಿ, ಮುಖ್ಯ ಅತಿಥಿಗಳು : ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಪ್ರಿನ್ಸಿಪಾಲ್ ಸದಾಶಿವೇಗೌಡ, ಡಾ. ವಿಕಾಸ್ ಮೋದಿ, ಶ್ರೀಮತಿ ಕಮಲಾದೇವಿ, ಸ್ಥಳ: ಅಗರಬತ್ತಿ ರಂಗರಾವ್ ಧ್ಯಾನ ಸಭಾಂಗಣ, ಶಾರದಾದೇವಿನಗರ, ಮಧ್ಯಾಹ್ನ 3.30 ರಿಂದ.

■ **ವಿದ್ಯಾವರ್ಧಕ ಸಂಯುಕ್ತ ಪದವಿಪೂರ್ವ ಕಾಲೇಜು :** ವಾರ್ಷಿಕೋತ್ಸವ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಬಿಇಓ ಎಸ್. ರೇವಣ್ಣ, ಶಾಸಕ ಕೆ. ಹರೀಶ್‌ಗೌಡ, ಸ್ಥಳ : ಕಾಲೇಜು ರಂಗ ಮಂಟಪ, ಸಂಜೆ 4ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ :** ವಿಶಿಖಾನುಪ್ರವೇಶ ಪದವಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ರಾಜೀವ್ ಗಾಂಧಿ ವಿವಿ ಕುಲಪತಿ ಡಾ. ಎಂ.ಕೆ. ರಮೇಶ್, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರಮಠ, ಉಪಸ್ಥಿತರು : ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಪ್ರಾಂಶುಪಾಲ ಡಾ. ಸರ್ಬೇಶ್ವರ್‌ಕರ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಸಂಜೆ 4ಕ್ಕೆ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 859, ಕಥೆ ಹೇಳುವವರು: ಡಾ. ಎಸ್. ಸುಧಾ, ನಿವೃತ್ತ ಪ್ರಾಂಶುಪಾಲರು ಹಾಗೂ ವಿಜ್ಞಾನ ಲೇಖಕರು, ಮಹಾರಾಣಿ ವಿಜ್ಞಾನ ಕಾಲೇಜು, ಮೈಸೂರು. ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ಮೈಸೂರು ಅರಮನೆ ಮಂಡಳಿ :** ಸಂಜೆ 5ಕ್ಕೆ ಅರಮನೆ ಫಲಪುಷ್ಪ ಪ್ರದರ್ಶನ, ಘನ ಉಪಸ್ಥಿತಿ : ಮುಖ್ಯಮಂತ್ರಿ ಸಿದ್ದರಾಮಯ್ಯ, ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉಪಸ್ಥಿತರು : ಪಶು ಸಂಗೋಪನೆ ಸಚಿವ ಕೆ. ವೆಂಕಟೇಶ್, ಶಾಸಕರಾದ ಸಿ. ಅನಿಲ್‌ಕುಮಾರ್, ಎ.ಬಿ. ರಮೇಶ್ ಬಂಡಿ ಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ಅಧ್ಯಕ್ಷತೆ: ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಸಂಜೆ 5.30 ರಿಂದ ಸಿ.ಆರ್. ರಾಘವೇಂದ್ರ ಪ್ರಸಾದ್ ಮತ್ತು ತಂಡದವರಿಂದ ವಾದ್ಯ ಸಂಗೀತ ಕಾರ್ಯಕ್ರಮ, ಸಂಜೆ 7ಕ್ಕೆ ಎ.ಆರ್. ಕಲಾ ತಂಡದವರಿಂದ ಕಾಯೌಶ್ರೀಗೌರಿ ಕರುಣಾಲಹರಿ ಗೀತೆ, ಸಂಜೆ 7 ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಂಜೆ 7.30 ರಿಂದ ಮಧುಬಾಲಕೃಷ್ಣನ್ ಮತ್ತು ತಂಡದವರಿಂದ ಸಂಗೀತ ರಸಸಂಜೆ, ಸ್ಥಳ: ಮೈಸೂರು ಅರಮನೆ ಆವರಣ.

■ **ಮಹಾರತ್ನ ಟ್ರಸ್ಟ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ :** ಕನ್ನಡ ಹಬ್ಬ, ಕನ್ನಡ ಗೀತಗಾಯನ, ಕನ್ನಡ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ :ಸಿ.ವಿ. ಪಾರ್ಥಸಾರಥಿ, ಮುಖ್ಯ ಅತಿಥಿಗಳು : ವಾಗ್ಮಿ ವಿದ್ವಾನ್ ಡಾ. ಆರ್.ಎಸ್. ನಂದಕುಮಾರ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಗಾಯಕರಾದ ಆರ್. ಮಹೇಂದ್ರ, ಪುರುಷೋತ್ತಮ ಕಿರಗಸೂರು, ಮೈಸೂರು ಎಂ. ಮಹಾಲಿಂಗ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ಶ್ರೀ ರಾಮಕೃಷ್ಣ ವಿದ್ಯಾಶಾಲಾ :** ಸಂಜೆ 5 ರಿಂದ ಹಿರಿಯ ವಿದ್ಯಾರ್ಥಿಗಳ ಸಂಘದ ಸುವರ್ಣ ಮಹೋತ್ಸವ, ಕಾಲೇಜು ವಾರ್ಷಿಕೋತ್ಸವದ ಅಂಗವಾಗಿ ಪಥ ಸಂಚಲನ, ಮುಖ್ಯ ಅತಿಥಿಗಳು : ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜಿ.ಆರ್. ಗೋಪಿನಾಥ್, ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ, ಸಂಜೆ 6.40 ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಶ್ರೀ ರಾಮಕೃಷ್ಣ ವಿದ್ಯಾಶಾಲೆ, ಯಾದವಗಿರಿ.

■ **ಅಹಂ ಬ್ರಹ್ಮಾಸ್ಮಿ ಫೌಂಡೇಷನ್ :** ವೇದಾಂತ ಶ್ರವಣ ಕಾರ್ಯಕ್ರಮ, ಸಂಜೆ 5 ರಿಂದ ವಿದ್ವಾನ್ ಮಣಿಕಂಠನ್ ಅವರಿಂದ ಶ್ರೀ ಶಿವಾನಂದ ಲಹರಿ, ಸಂಜೆ 6.30 ರಿಂದ ಶ್ರೀ ನಿರ್ಭಯಾನಂದ ಸರಸ್ವತಿ ಸ್ವಾಮಿಗಳಿಂದ ಸನಾತನ ಧರ್ಮ ಮತ್ತು ಶ್ರೀ ಶಂಕರ ಭಗವತ್ಪಾದರು ಕುರಿತು ಉಪನ್ಯಾಸ ಕಾರ್ಯಕ್ರಮ, ಸ್ಥಳ: ಶ್ರೀ ಶೃಂಗೇರಿ ಶಂಕರ ಮಠ, ಶ್ರೀ ಅಭಿನವ ಶಂಕರಾಲಯ.

■ **ಶ್ರೀ ಕೃಷ್ಣ ಗಾನಸಭಾ :** ಶ್ರೀಮತಿ ಎಸ್.ಆರ್. ಕುಮುದ ಅವರ ಸ್ಮರಣಾರ್ಥ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ಉದ್ಘಾಟನೆ: ಟ್ರಸ್ಟ್ ಅಧ್ಯಕ್ಷ ನಂದಕುಮಾರ್, ಡಾ. ಎಂ.ಜಿ. ವೀಣಾ ಅವರಿಂದ ಗಾಯನ, ಡಾ. ಎಂ.ಬಿ. ನರಹರಿ– ವಯೋಲಿನ್, ವಿದ್ವಾನ್ ಪಿ.ಎಸ್. ಶ್ರೀಧರ–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್ –ಮೋರ್ಚಿಂಗ್, ಸ್ಥಳ: ಆಳ್ವಾರ್ ಕಲಾಭವನ, ಸಂಜೆ 6ಕ್ಕೆ.

■ **ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಡಾ. ಉಷಾ ಹೆಗ್ಡೆ ಅವರಿಂದ ಎವರೆಸ್ಟ್ ಚಾರಣದ ಅನುಭವದ ಬಗ್ಗೆ ಭಾಷಣ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ ; ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ:** ತಿರುಪ್ಪಾವೈ ಪ್ರವಚನ, ಮಹಾರಾಣಿ ಕಾಲೇಜು (ಬೆಂಗಳೂರು) ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್.ಶ್ರೀಧರನ್, ಸ್ಥಳ: ಸನಾತನೀ ಸಭಾ, ಜಯನಗರ, ಸಂಜೆ 6.15ರಿಂದ

■ **ಆಯಾಮ ಅಕಾಡೆಮಿ ಆಫ್ ಫೈನ್ ಆರ್ಟ್ಸ್ :** ಆಯಾಮೋತ್ಸವ, ನೃತ್ಯ ನಾಟಕಗಳ ಉತ್ಸವ, ಆಯಾಮ ವಿದ್ಯಾರ್ಥಿಗಳಿಂದ ಸತ್ಯವೇ ಮಾರ್ಗ ತ್ಯಾಗವೇ ಧರ್ಮ ಗೋವಿನ ಹಾಡು ನೃತ್ಯ ರೂಪಕ, ನಿರ್ದೇಶನ : ವಿದುಷಿ ಡಾ. ಶಾಂಭವಿ ಸ್ವಾಮಿ ಎಸ್.ವಿ., ಉಪಸ್ಥಿತರು : ಶಾಸಕ ಜಿ.ಟಿ. ದೇವೇಗೌಡ, ಶ್ರೀಮತಿ ಲಲಿತಾ ದೇವೇಗೌಡ, ನೈಪುಣ್ಯ ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಆರ್. ರಘು, ರಂಗಕರ್ಮಿ ರಾಜಶೇಖರ ಕದಂಬ, ಕೆ. ರಾಮಮೂರ್ತಿ ರಆವ್, ಆಯಾಮ ನಿರ್ದೇಶಕರಾದ ಡಾ. ಶಾಂಭವಿ ಸ್ವಾಮಿ, ಸ್ಥಳ: ಕಿರುರಂಗಮಂದಿರ, ಸಂಜೆ 6.30 ರಿಂದ.

■ **ವೇಣು ಗೋಪಾಲಸ್ವಾಮಿ ದೇವಸ್ಥಾನ:** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ವಿದುಷಿ ಡಾ.ಕೆ.ಎಲ್.ಪ್ರಸನ್ನಾಕ್ಷಿ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ದೇವಸ್ಥಾನ, ತ್ಯಾಗರಾಜ ರಸ್ತೆ, ಶ್ರೀ ಚಿಕ್ಕಾಂಜನೇಯ ಸ್ವಾಮಿ ದೇವಸ್ಥಾನದ ಸಮೀಪ, ಸಂಜೆ 6.30ಕ್ಕೆ.

■ **ಆರ್ಟ್ ಆಫ್ ಲಿವಿಂಗ್‌ನ ವೇದ ವಿಜ್ಞಾನ ಮಹಾವಿದ್ಯಾಪೀಠಂ :** ವಿಶೇಷ ಧ್ಯಾನ ಕಾರ್ಯಕ್ರಮ, ಸ್ಥಳ : ಆರ್ಟ್ ಆಫ್ ಲಿವಿಂಗ್ ಆಶ್ರಮ, ಲಲಿತಾದ್ರಿಪುರ ರಸ್ತೆ, ಸಂಜೆ 7 ರಿಂದ.


ಹಲಗಯ್ಯನಹುಂಡಿ, ಮೈಸೂರು ತಾಲೂಕು.

■ **ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಷ್ಟ್ರೀಯ ಸೇವಾ ಯೋಜನೆ:** ವಾರ್ಷಿಕ ವಿಶೇಷ ಶಿಬಿರ 2024–25, ಬೆಳಗ್ಗೆ 10ಕ್ಕೆ ಉಚಿತ ಆರೋಗ್ಯ ತಪಾಸಣಾ ಶಿಬಿರ, ಸಂಜೆ 6ಕ್ಕೆ ಉಪನ್ಯಾಸ ಎನ್.ಎಂ. ಶಿವಪ್ರಕಾಶ್ ಅವರಿಂದ ಇಂದಿನ ದಿನಗಳಲ್ಲಿ ಮಾನವೀಯ ಮೌಲ್ಯಗಳ ಪ್ರಸ್ತುತತೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಡಾ. ಟಿ.ಆರ್. ಸಿದ್ದರಾಜು, ಸ್ಥಳ: ಹಲಗಯ್ಯನಹುಂಡಿ, ಮೈಸೂರು ತಾಲೂಕು, ಸಂಜೆ 6ಕ್ಕೆ.

ಬರಡನಪುರ ಗ್ರಾಮ, ಮೈಸೂರು ತಾಲೂಕು.

■ **ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್, ರಾಷ್ಟ್ರೀಯ ಸೇವಾ ಯೋಜನೆ:** ವಾರ್ಷಿಕ ವಿಶೇಷ ಶಿಬಿರ 2024–25, ಬೆಳಗ್ಗೆ 6.30ಕ್ಕೆ ಶಿವಣ್ಣ ಅವರಿಂದ ಧ್ವಜಾರೋಹಣ, ಬೆಳಗ್ಗೆ 10ಕ್ಕೆ ಗಿಡಗಳನ್ನು ನೆಡುವ ಕಾರ್ಯಕ್ರಮ, ಡಾ. ಎಸ್. ಮಧುಸೂದನ್ ಅವರಿಂದ ಮಾನಸಿಕ ಒಳನೋಟದ ಮೂಲಕ ಮಹಿಳೆಯರ ಸಬಲೀಕರಣ ಕುರಿತು ಉಪನ್ಯಾಸ, ಅಧ್ಯಕ್ಷತೆ : ಶ್ರೀಮತಿ ವಿ. ಮೀರಾ, ಮುಖ್ಯ ಅತಿಥಿಗಳು : ಶ್ರೀಮತಿ ಎಸ್.ಜೆ. ದೇವಿಕಾ, ಸ್ಥಳ: ಬರಡನಪುರ ಗ್ರಾಮ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI ಶೋಧ – ಅನುಶೋಧ– ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು: CSIR, CFTRI, Mysuru, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ.ಎಸ್. ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಜೀವನ ಜೋಪಾನ–ಹೆಚ್‌ಐವಿ–ಅಂದು ಇಂದು, ಪ್ರಾಯೋಜಕರು–ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಮಂಡಳಿ, 8.30ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಅರುಣಾ ಸಾಯಿರಾಂ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.35 ಆಯುಷ್‌ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ–ಪ್ರತಿಭಾ ಪಲ್ಲವ–ಬಹುಮುಖ ಪ್ರತಿಭೆಯ ಗಾಯಕಿ ಅವನಿ. ಎಸ್ ಪರಿಚಯ, ಪ್ರಸ್ತುತಿ : ಎಂ.ಎಸ್. ಭಾರತಿ, 4.00 ನಾಟಕ 'ಬಣ್ಣದ ಬೊಂಬೆ', ಚದುರಂಗ ಅವರ ಕಿರುಗತೆಯನ್ನು ಬಾನುಲಿಗೆ ಅಳವಡಿಸಿದವರು : ಡಾ. ಪ್ರಣತಾರ್ಥಿ ಹರನ್, ನಿರ್ಮಾಣ–ವಿ. ಮ. ಜಗದೀಶ್, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ರಂಗಕರ್ಮಿ ಹಾಗೂ ವಾಕ್ ಶ್ರವಣ ಶಿಕ್ಷಣ ತಜ್ಞ ಡಾ. ನ. ರತ್ನ ಅವರೊಂದಿಗೆ ಹೆಚ್. ಎಸ್. ಉಮೇಶ್ ಅವರು ನಡೆಸಿದ್ದ ಸಂವಾದದ ಎರಡನೇ ಭಾಗ, 6.50 ಕೃಷಿರಂಗ :ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ಸಮಗ್ರ ಕೃಷಿಯ ಪ್ರಾಮುಖ್ಯತೆ ಈ ಕುರಿತು ಕೆ.ಆರ್. ಪೇಟೆ ತಾಲೂಕು ಮಡುವಿನಕೋಡಿ ಅಂಚೆ ಕಂಚಹಳ್ಳಿ ಹೊಸಕೋಟೆ ಗ್ರಾಮದ ಹೆಚ್.ಕೆ.ಲಕ್ಷ್ಮೀದೇವಮ್ಮ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್. ಕೇಶವಮೂರ್ತಿ, 8.15 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಎಸ್.ನವೀನ್– ಹಾಡುಗಾರಿಕೆ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 21 ಶನಿವಾರ 2024

ಸಂಪುಟ: 45 | ಸಂಚಿಕೆ: 244 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮಂಡ್ಯದಲ್ಲಿ ಶುಕ್ರವಾರ ಸಮ್ಮೇಳನದ ಸರ್ವಾಧ್ಯಕ್ಷ ಗೊ.ರು.ಚನ್ನಬಸಪ್ಪ ಅವರನ್ನು ಅದ್ದೂರಿ ಮೆರವಣಿಗೆ ಮೂಲಕ ವೇದಿಕೆಗೆ ಕರೆತರಲಾಯಿತು.

ಕನ್ನಡ ಉಳಿವಿಗೆ ಶಿಕ್ಷಣ ವ್ಯವಸ್ಥೆಯಲ್ಲಿ

ಬದಲಾವಣೆ ಅಗತ್ಯ

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ



ಮಂಡ್ಯದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸಮ್ಮೇಳನಾಧ್ಯಕ್ಷರಾದ ನಾಡೋಜ ಡಾ.ಗೊ.ರು.ಚನ್ನಬಸಪ್ಪ ಇನ್ನಿತರರಿದ್ದಾರೆ.

ಮಂಡ್ಯ, ಡಿ.20(ಮೋಹನ್‌ರಾಜ್)– ಕನ್ನಡ ಭಾಷೆ ಉಳಿಯಬೇಕಾದರೆ ಶಿಕ್ಷಣ ವ್ಯವಸ್ಥೆಯಲ್ಲೂ ಅಮೂಲಾಗ್ರ ಬದಲಾವಣೆ ಅವಶ್ಯಕತೆ ಇದ್ದು, ಇದಕ್ಕೆ ರಾಜ್ಯ ಸರ್ಕಾರ ಬದ್ಧವಾಗಿದೆ. ಜೊತೆಗೆ ಕನ್ನಡ ಕಟ್ಟಲು ನಮ್ಮ ಸರ್ಕಾರ ಸದಾ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಶುಕ್ರವಾರ ನಗರದ ಸ್ಯಾಂಜೋ ಆಸ್ಪತ್ರೆ ಹಿಂಭಾಗ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿರುವ ಮೂರು ದಿನಗಳ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿದರೆ ಮಾತ್ರ ಕನ್ನಡದಲ್ಲಿ ಯೋಚಿಸುವ, ಸಂಶೋಧನೆ ಉತ್ಪಾದನೆ ಮತ್ತು ಮಾರುಕಟ್ಟೆ ಮಾಡುವ ಭಾಷೆಯಾಗಿ ಕನ್ನಡವು ಬೆಳೆಯುತ್ತದೆ ಎಂದು ಹೇಳಿದರು. ಸಂಕಷ್ಟದಲ್ಲಿರುವ ಭಾಷೆಗಳಲ್ಲಿ ■ 6ನೇ ಪುಟಕ್ಕೆ

ಓದು–ಬರಹ ಭಾಷೆ ಬರವಣಿಗೆ ಎಲ್ಲವೂ ಪರಕೀಯವಾದರೆ ನಮ್ಮ ಮಾತೃಭಾಷೆಗೆ ಅಪಾಯ ತಪ್ಪಿದ್ದಲ್ಲ. ಯಾವುದೇ ಭಾಷೆಯ ಅಳಿವು ಆ ಭಾಷೆ ಸಮುದಾಯದ ಅಳಿವೂ ಆಗಿರುತ್ತದೆ. ಭಾಷೆ ಬೆಳೆಯುವುದು, ಉಳಿಯುವುದು ಅದನ್ನು ಬಳಸಿದಾಗ ಮಾತ್ರ. ಬಳಸದೇ ಹೋದರೆ ಭಾಷೆಯ ಅಸ್ತಿತ್ವ ಹಾಗೂ ಬೆಳವಣಿಗೆ ಎರಡಕ್ಕೂ ಅಪಾಯ ತಪ್ಪಿದ್ದಲ್ಲ. –ಸಿದ್ದರಾಮಯ್ಯ, ಮುಖ್ಯಮಂತ್ರಿ

1ರಿಂದ 10ನೇ ತರಗತಿವರೆಗೆ ಕನ್ನಡ ಮಾಧ್ಯಮ ಕಡ್ಡಾಯ ಆಗಲೇಬೇಕು

- ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ ಆಗ್ರಹ
- ಆಂಗ್ಲ, ಖಾಸಗಿ ಶಾಲೆಗಳನ್ನು ಆರಂಭಿಸಲು ಸರ್ಕಾರ ಅನುಮತಿ ಕೊಡುವುದನ್ನು ನಿಲ್ಲಿಸಲಿ

ಮಂಡ್ಯ, ಡಿ.20 (ಮೋಹನ್‌ರಾಜ್)– ಪ್ರಾಥಮಿಕ ಹಂತದ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಬೋಧನೆಯಲ್ಲಿ ಕನ್ನಡ ಮಾಧ್ಯಮವೇ ಕಡ್ಡಾಯವಾಗಬೇಕು. ಯಾವುದೇ ಕಾರಣಕ್ಕೂ ಬೇರೆ ಯಾವ ಭಾಷೆಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಹೇರಕೂಡದು ಎಂದು 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗೊ.ರು. ಚನ್ನಬಸಪ್ಪ ಸರ್ಕಾರವನ್ನು ಒತ್ತಾಯಿಸಿದರು.

ಶುಕ್ರವಾರ ನಗರದ ಸ್ಯಾಂಜೋ ಆಸ್ಪತ್ರೆ ಹಿಂಭಾಗ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿರುವ ಮೂರು ದಿನಗಳ ಕಾಲ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರ ಭಾಷಣ ಮಾಡಿದ ಅವರು, ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ಸರ್ಕಾರ ತೆರೆಯುವುದನ್ನಾಗಲಿ, ಖಾಸಗಿ ಶಾಲೆಗಳಿಗೆ ಅನುಮತಿ ಕೊಡುವುದನ್ನಾಗಲಿ ಕೂಡಲೇ ನಿಲ್ಲಿಸಬೇಕು. ವಿದ್ಯಾರ್ಥಿಯೊಬ್ಬನೇ ಇದ್ದಾನೆ ಎಂದು ಮತ್ತೊಂದು ಶಾಲೆಗೆ ಆ ಸರ್ಕಾರಿ ಶಾಲೆಯನ್ನು ವಿಲೀನ ಮಾಡುವ ಸರ್ಕಾರ, ಒಬ್ಬನೇ ರೋಗಿ ಇದ್ದಾನೆಂದು ಮತ್ತೊಂದು ಆಸ್ಪತ್ರೆಗೆ ವಿಲೀನ ಮಾಡುವುದಕ್ಕಾಗುತ್ತದೆಯೇ ಎಂದು ಪ್ರಶ್ನಿಸಿದರು. ಭಾಷಾ ಮಾಧ್ಯಮ ಯಾವುದು ಎನ್ನುವುದು ಇನ್ನೂ ನಿರ್ಧಾರವಾಗದ ಸಂಕೀರ್ಣ ಸ್ವರೂಪದಲ್ಲೇ ಇದೆ. ಕರ್ನಾಟಕ ರಾಜ್ಯದಲ್ಲಿ ಸರ್ಕಾರಗಳು ಬದಲಾದಂತೆ ಸರ್ಕಾರಿ–ಸಾರ್ವಜನಿಕ ಶಾಲಾ ಶಿಕ್ಷಣದಲ್ಲಿ ಪ್ರಥಮ, ದ್ವಿತೀಯ, ತೃತೀಯ ಭಾಷೆ ಎಂದು ಕನ್ನಡದ ಸ್ಥಾನಮಾನ ಬದಲಾಗುವುದು, ಖಾಸಗಿ ಶಾಲೆಗಳು ಅದರಲ್ಲೂ ಕೇಂದ್ರೀಯ ಪಠ್ಯಕ್ರಮ ಮತ್ತು ಪರೀಕ್ಷಾ ಕ್ರಮವನ್ನು ಅನುಸರಿಸುವ ಶಾಲೆಗಳು ವಿಭಿನ್ನ ನೀತಿಗೆ ಪಟ್ಟುಹಿಡಿಯುವುದು, ಸರ್ಕಾರವೇ ಪಬ್ಲಿಕ್ ಶಾಲೆಗಳನ್ನು ತೆರೆದಿರುವುದು ಹೀಗೆ ನಮ್ಮಲ್ಲಿ ಹಲವು ಸಂಗತಿಗಳು ಗೊಂದಲ ಹುಟ್ಟಿಸಿವೆ ■ 6ನೇ ಪುಟಕ್ಕೆ

ಹೈಕೋರ್ಟ್ ಆದೇಶದಂತೆ ಸಿ.ಟಿ.ರವಿ ತಕ್ಷಣ ಬಿಡುಗಡೆ

ಬೆಳಗಾವಿಯಿಂದ ಬೆಂಗಳೂರಿಗೆ ಬರುವ ಮಾರ್ಗಮಧ್ಯೆ ಬಂಧಮುಕ್ತ



ಬೆಂಗಳೂರು, ಡಿ.20(ಕೆಎಂಶಿ)– ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ಆಕ್ಷೇಪಾರ್ಹ ಪದ ಬಳಸಿದ ಆರೋಪದ ಮೇಲೆ ಪೊಲೀಸರಿಂದ ಬಂಧನಕ್ಕೆ ಒಳಗಾಗಿದ್ದ ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಸಿ.ಟಿ.ರವಿ ಅವರನ್ನು ತಕ್ಷಣ ಬಿಡುಗಡೆ ಮಾಡುವಂತೆ ಹೈಕೋರ್ಟ್ ಆದೇಶಿಸಿದ ಕೆಲವೇ ಗಂಟೆಗಳಲ್ಲಿ ಅವರನ್ನು ಬಿಡುಗಡೆ ಮಾಡಲಾಗಿದೆ. ಬೆಳಗಾವಿಯಿಂದ ಬೆಂಗಳೂರಿಗೆ ರವಿ ಅವರನ್ನು ಕರೆತರುವಾಗ ಮಾರ್ಗಮಧ್ಯೆ, ಬಂಕಾಪುರ ಬಳಿ ಅವರನ್ನು ಬಂಧಮುಕ್ತಗೊಳಿಸಲಾಗಿದೆ.

ಇಂದು ಪ್ರಕರಣದ ತುರ್ತು ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿ ಎಂ.ಜಿ. ಉಮಾ ಅವರು, ರವಿ ಅವರ ತಕ್ಷಣ ಬಿಡುಗಡೆಗೆ ಆದೇಶಿಸಿದ್ದಲ್ಲದೆ, ತನಿಖೆಗೆ ಸಹಕರಿಸುವಂತೆ ಸೂಚಿಸಿದ್ದರು. ರವಿ ಅವರನ್ನು ಬೆಳಗಾವಿಯಿಂದ ಬೆಂಗಳೂರಿಗೆ ಕರೆತರಲಾಗುತ್ತಿತ್ತು. ಈ ನಡುವೆಯೇ ಹೈಕೋರ್ಟ್ ಆದೇಶ ಅವರಿಗೆ ನೆಮ್ಮದಿ ತಂದಿದೆ. ವಾದ–ಪ್ರತಿ ವಾದ ಆಲಿಸಿದ ನ್ಯಾಯಮೂರ್ತಿ ಎಂ.ಜಿ. ಉಮಾ, ಜನಪ್ರತಿನಿಧಿಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ, ಪೋಲಿಸರು ಆರೋಪಿಯನ್ನು ಬಂಧಿಸಿದ ರೀತಿ ಹಾಗೂ ನಡೆಸಿಕೊಂಡ ಬಗ್ಗೆಯೂ ಪ್ರಶ್ನಿಸಿದರು. ■ 8ನೇ ಪುಟಕ್ಕೆ

ಬಂಧಿಸಿದ ನಂತರ ನಾಲ್ಕು ಜಿಲ್ಲೆಯ 50ಕ್ಕೂ ಅಧಿಕ ಗ್ರಾಮಗಳ ಸುತ್ತಿಸಿದರು; ದೈಹಿಕವಾಗಿ ಹಲ್ಲೆ ಕೂಡ ಮಾಡಲಾಗಿದೆ

- ಪತ್ರಿಕಾಗೋಷ್ಠಿಯಲ್ಲಿ ಸಿ.ಟಿ.ರವಿ ಆರೋಪ
- ನಿರ್ಜನ ಪ್ರದೇಶದಲ್ಲಿ ಕಾರು ನಿಲ್ಲಿಸಿ ಆತಂಕ ಉಂಟು ಮಾಡಿದ್ದಾರೆ: ವಿಜಯೇಂದ್ರ
- ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದವರನ್ನೇ ತಕ್ಷಣ ಬಂಧಿಸಲಿಲ್ಲ: ಅಶೋಕ್



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಸಿ.ಟಿ.ರವಿ. ಬಿ.ವೈ.ವಿಜಯೇಂದ್ರ, ಆರ್.ಅಶೋಕ್.

ದಾವಣಗೆರೆ, ಡಿ.20– ಸುಳ್ಳು ಕೇಸ್ ಹಾಕಿ ನೋಟಿಸ್ ಕೊಡದೇ ನನ್ನನ್ನು ಬಂಧಿಸಿದರು. ಅಷ್ಟೇ ಅಲ್ಲದೇ ನಾಲ್ಕು ಜಿಲ್ಲೆ ಸುತ್ತಾಡಿಸಿ 50ಕ್ಕೂ ಹೆಚ್ಚು ಗ್ರಾಮಗಳು 11 ಗಂಟೆಗಳಿಗೂ ಹೆಚ್ಚು ಕಾಲ ಅಲೆದಾಡಿಸಿ, ಮಾನಸಿಕವಾಗಿ ಕುಗ್ಗಿಸುವಂಥ ಪ್ರಯತ್ನವನ್ನು ಪೊಲೀಸರು ಮಾಡಿದ್ದು ನನಗೆ ತೀವ್ರ ಘಾಸಿಯಾಗಿದೆ ಎಂದು ವಿಧಾನ ಪರಿಷತ್ ಶಾಸಕ ಸಿ.ಟಿ.ರವಿ ಹೇಳಿದರು.

ಕರ್ನಾಟಕ ಹೈಕೋರ್ಟ್‌ನ ಜಾಮೀನು ಆದೇಶದಂತೆ, ಬೆಳಗಾವಿಯಿಂದ ಬೆಂಗಳೂರಿಗೆ ಸಿ.ಟಿ.ರವಿಯವರನ್ನು ಕರೆತರುತ್ತಿದ್ದ ಖಾನಾಪುರ ಪೊಲೀಸರು ಮಾರ್ಗಮಧ್ಯೆ ಬಂಕಾಪುರದಲ್ಲಿ ಅವರನ್ನು ಬಿಡುಗಡೆಗೊಳಿಸಿದರು. ಬಿಜೆಪಿ ನಾಯಕರಾದ ವಿಜಯೇಂದ್ರ, ಆರ್.ಅಶೋಕ್ ಸೇರಿದಂತೆ ಅನೇಕರು ಅಲ್ಲಿ ಸಿ.ಟಿ.ರವಿಯವರಿಗೆ ಜೊತೆಯಾದರು. ■ 8ನೇ ಪುಟಕ್ಕೆ

ಬಂಡೀಪುರ ಹುಲಿ ರಕ್ಷಿತಾರಣ್ಯದಲ್ಲಿ ಷಟ್ಪಥ ಸುರಂಗ ಮಾರ್ಗಕ್ಕೆ ಕೇಂದ್ರದ ಚಿಂತನೆ



ನವದೆಹಲಿ, ಡಿ.20– ಬಂಡೀಪುರ ಹುಲಿ ರಕ್ಷಿತಾರಣ್ಯದ ಮೂಲಕ ಕೇರಳಕ್ಕೆ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ 15 ವರ್ಷಗಳಿಂದ ಜಾರಿಯಲ್ಲಿರುವ ರಾತ್ರಿ ಸಂಚಾರ ನಿಷೇಧದಿಂದಾಗುತ್ತಿರುವ ಸಮಸ್ಯೆಗಳಿಗೆ ಕೇಂದ್ರ ಸರ್ಕಾರವೇ ಇದೀಗ ಶಾಶ್ವತ ಪರಿಹಾರ ಕಂಡುಕೊಳ್ಳಲು ಮುಂದಾಗಿದೆ. ಬಂಡೀಪುರ ರಾಷ್ಟ್ರೀಯ ಉದ್ಯಾನದ ■ 8ನೇ ಪುಟಕ್ಕೆ

ಅಂದದ ಅರಮನೆ ಆವರಣದಲ್ಲಿ ಇಂದಿನಿಂದ ಮಾಗಿ ಉತ್ಸವ

ಕಂಗೊಳಿಸಲಿದೆ ಫಲಪುಷ್ಪ ರಾಶಿ

ಸಂಗೀತ ಸುಧೆಯೊಂದಿಗೆ ಹೂವಿನ ಅಂದ ಸವಿಯುವ ಸದವಕಾಶ



ಅರಮನೆ ಆವರಣದಲ್ಲಿ ಹೂವಿನಿಂದಲೇ ತಲೆ ಎತ್ತಿರುವ ವಿವಿಧ ಆಕೃತಿಗಳು.

ಮೈಸೂರು, ಡಿ.20(ಎಂಟಿವೈ)– ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ ಮೈಸೂರು ಅರಮನೆಯ ಆವರಣದಲ್ಲಿ ಆಯೋಜಿಸಿರುವ 11 ದಿನಗಳ ಫಲ–ಪುಷ್ಪ ಪ್ರದರ್ಶನಕ್ಕೆ ಇಂದು ಸಂಜೆ 5 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಚಾಲನೆ ನೀಡಲಿದ್ದಾರೆ.

ಅರಮನೆ ಆಡಳಿತ ಮಂಡಳಿ ಈ ವರ್ಷವೂ ಮಾಗಿ ಉತ್ಸವದ ಅಂಗವಾಗಿ ಫಲಪುಷ್ಪ ಪ್ರದರ್ಶನ ಆಯೋಜಿಸಿದ್ದು, ಹಲವು ವೈಶಿಷ್ಟ್ಯತೆಯೊಂದಿಗೆ ಮೈಸೂರಿಗೆ ಬರುವ ಪ್ರವಾಸಿಗರನ್ನು ಸಸ್ಯಲೋಕ ಆಕರ್ಷಿಸಲಿದೆ. ಡಿ.21ರಿಂದ 31ರವರೆಗೂ ಫಲಪುಷ್ಪ ಪ್ರದರ್ಶನ ಜರುಗಲಿದ್ದು, 25 ಸಾವಿರ ಹೂವಿನ ಕುಂಡಗಳಲ್ಲಿ ಮೆರಿಗೋಲ್ಡ್, ಸಾಲ್ವಿಯ, ಡೇಲಿಯ, ಪಿಟೋನಿಯ, ಸೇವಂತಿಗೆ, ಕೋಲಿಯಸ್, ಸಿಲೋಷಿಯ, ನಸ್ಟರ್‌ಸಿಯಂ, ಆಂಟಿರೈನಂ, ವರ್ಬಿನ, ಜಿರೇನಿಯಂ, ಕಾಶಿಗೊಂಡೆ, ಆಸ್ಟರ್, ಗೈರಾಲ್ಡಿಯಾ, ಸ್ಪೈಡರ್, ಬೋನ್ಸಾಯ್ ಗಿಡಗಳು ಸೇರಿದಂತೆ 35ಕ್ಕೂ ಹೆಚ್ಚು ಬಗೆಯ ಹೂವಿನ ಗಿಡಗಳನ್ನು ಬೆಳೆಸಿ, ಅರಮನೆ ಆವರಣದ ಪಾರ್ಕ್‌ನಲ್ಲಿ ವಿವಿಧ ಮಾದರಿಯಲ್ಲಿ ಜೋಡಿಸಲಾಗಿದೆ. 6 ಲಕ್ಷ ವಿವಿಧ ಬಣ್ಣದ ಗುಲಾಬಿಗಳು, ಕ್ರೈಸಾಂಥಿಮಮ್, ಪಿಂಗ್ ಪಾಂಗ್, ಕಾರ್ನೆಷನ್, ಆಸ್ಟ್ರಮೇರಿಯ, ಜರ್ಬೆರಾ, ಆಂಥೋರಿಯಮ್, ಆರ್ಕಿಡ್ಸ್, ಬ್ಲೂಡೈಸಿ ಹಾಗೂ ಇತರೆ ಅಲಂಕಾರಿಕ ಹೂವು, ಊಟಿ ಕಟ್ ಫ್ಲವರ್‌ಗಳಿಂದ ವಿವಿಧ ಆಕೃತಿಗಳು ಕಣ್ಮನ ಸೂರೆಗೊಳ್ಳಲಿದೆ.

ಲಕ್ಷಾಂತರ ಹೂವುಗಳಿಂದ 50 ಅಡಿ ಅಗಲ, 16 ಅಡಿ ಉದ್ದ, 25 ಅಡಿ ಎತ್ತರದ ನವದೆಹಲಿಯ 'ಅಕ್ಷರಧಾಮ' ಮಾದರಿ ಪ್ರಮುಖ ಆಕರ್ಷಣೀಯ ಕೇಂದ್ರ ಬಿಂದುವಾಗಿದ್ದು, ಇದರೊಂದಿಗೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಆಕೃತಿ, ನಂಜನಗೂಡಿನ ನಂಜುಂಡೇಶ್ವರ ದೇವಾಲಯದ ಆಕೃತಿ, ಹದ್ದು, ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳನ್ನು ಬಿಂಬಿಸುವ ಮಾದರಿ ಆಕೃತಿ, ಆನೆ ಮರಿ, ಆಮೆ, ರಾಜವಂಶದ ಲಾಂಛನ ಗಂಡ ಭೇರುಂಡ, ಮಕ್ಕಳ ಆಕರ್ಷಣೆಗಾಗಿ ಬಂಡೀಪುರ ಅಭಯಾರಣ್ಯದ ಚಿತ್ರದೊಂದಿಗೆ 6 ಪ್ರಾಣಿ, 4 ಪಕ್ಷಿಗಳ ಮಾದರಿ ಚಿತ್ರವನ್ನು ಹೂಗಳಿಂದ ಅಲಂಕರಿಸುವ ಆಕೃತಿ ಗಳನ್ನು ನಿರ್ಮಿಸಲಾಗಿದೆ.

ಸಂಗೀತ ಕಾರ್ಯಕ್ರಮ: ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ದೊರೆತ ಬಳಿಕ ಸಂಜೆ 5.30ರಿಂದ 6.30ರವರೆಗೆ ಸಿ.ಆರ್. ರಾಘವೇಂದ್ರ ಪ್ರಸಾದ್ ತಂಡದಿಂದ ವಾದ್ಯ ಸಂಗೀತ ನಡೆಯಲಿದೆ. ಸಂಜೆ 7ಕ್ಕೆ ಎ.ಆರ್.ಕಲಾ ತಂಡದಿಂದ ನಾಡಗೀತೆ, ಮೈಸೂರು ಸಂಸ್ಥಾನದ ನಾಡಗೀತೆ 'ಕಾಯೋ ಶ್ರೀಗೌರಿ ಕರುಣಾಲಹರಿ' ಗೀತೆ ಗಾಯನ, 7.15ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನೆ ಜರುಗಲಿದೆ. 7.30ರಿಂದ 9.30ರವರೆಗೆ ಗಾಯಕ ಮಧು ಬಾಲಕೃಷ್ಣನ್ ತಂಡದಿಂದ ಸಂಗೀತ ಸಂಜೆ ನಡೆಯಲಿದೆ. ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಬರುವ 500 ಮಂದಿ ಗಣ್ಯರು, ಪ್ರವಾಸಿಗರಿಗೆ ಸಾಂಕೇತಿಕವಾಗಿ ಔಷಧಿ ಯುಕ್ತ ಗಿಡಗಳನ್ನು ವಿತರಿಸಲಾಗುತ್ತಿದೆ. ಫಲಪುಷ್ಪ ಪ್ರದರ್ಶನ ನಡೆಯಲಿರುವ 11 ದಿನವೂ ಸಂಜೆ 7ರಿಂದ ರಾತ್ರಿ 9 ಗಂಟೆವರೆಗೆ ಅರಮನೆಗೆ ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಮಾಡಲಾಗುತ್ತದೆ.

ಪ್ರವೇಶ ಶುಲ್ಕ ನಿಗದಿ

ಫಲಪುಷ್ಪ ಪ್ರದರ್ಶನಕ್ಕೆ ಈ ಬಾರಿ ಪ್ರವೇಶ ಶುಲ್ಕ ನಿಗದಿ ಮಾಡಲಾಗಿದೆ. ಭಾರತೀಯ ಹಾಗೂ ವಿದೇಶ ವಯಸ್ಕರಿಗೆ 30 ರೂ., 10 ವರ್ಷದೊಳಗಿನ ಮಕ್ಕಳಿಗೆ ಉಚಿತ ಪ್ರವೇಶ, 10ರಿಂದ 16 ವರ್ಷದ ಮಕ್ಕಳಿಗೆ 10 ರೂ. ಪ್ರವೇಶ ಶುಲ್ಕ ನಿಗದಿ ಮಾಡಲಾಗಿದೆ.





ನಕ್ಕರೆ ಅದೇ ಸ್ವರ್ಗ

ಸೀತಾ : ನಿನ್ನ ಗಂಡ ಏನ್ ಕೆಲಸ ಮಾಡ್ತಿದ್ದಾರೆ?
ಗೀತಾ : ಆಯಿಲ್ ಅಂಡ್ ಗ್ಯಾಸ್ ಡಿಪಾರ್ಟ್‌ಮೆಂಟ್‌ನಲ್ಲಿ
ಸೀತಾ : ಸ್ಥಳ ಯಾವುದು?
ಗೀತಾ : ಅಡುಗೆ ಮನೆ!

ಮೈಸೂರು ಮಿತ್ರ

ಶನಿವಾರ, 21 ಡಿಸೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಶಕ್ತಿ ಇರುವುದು ಸಾಧು ಸ್ವಭಾವದಲ್ಲಿ ಹಾಗೂ ಚಾರಿತ್ರ ಶುದ್ಧಿಯಲ್ಲಿ.
–ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಇತರರ ಕಣ್ಣಿನ ಕಸ ಕಾಣುವುದು, ತನ್ನ ಕಣ್ಣಿನ ಕಸ ಕಾಣುವುದಿಲ್ಲ.

ನಿಮ್ಮ ಪತ್ರಗಳು

■ ನಿಖಿಲ್‌ಗೆ ಜೆಡಿಎಸ್ ಪಟ್ಟ ಎಷ್ಟು ಸೂಕ್ತ?

ಮಾನ್ಯರೆ,

ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರು ಜಾತ್ಯತೀತ ಜನತಾದಳದ ಅಧ್ಯಕ್ಷ ಪಟ್ಟದಲ್ಲಿ ತಮ್ಮ ಮೊಮ್ಮಗ ನಿಖಿಲ್ ಕುಮಾರಸ್ವಾಮಿಯನ್ನು ಕೂರಿಸಲು ತಯಾರಿ ನಡೆಸಿದ್ದಾರೆ. ಈ ಮೂಲಕ ಮತ್ತೇ ತಮ್ಮ ಕುಟುಂಬ ವಾತ್ಸಲ್ಯವನ್ನು ಜನತೆ ಮುಂದೆ ಇಟ್ಟಿದ್ದಾರೆ.





ನಿಖಿಲ್‌ಕುಮಾರಸ್ವಾಮಿ ಹರೀಶ್‌ಗೌಡ

ಎಂಭತ್ತರ ದಶಕದಲ್ಲಿ ರಾಮಕೃಷ್ಣ ಹೆಗ್ಗಡೆ, ಎಂ.ಪಿ.ಪ್ರಕಾಶ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಪಕ್ಷವು ದೇವೇಗೌಡರ ಕುಟುಂಬದ ಹಿಡಿತಕ್ಕೆ ಸಿಕ್ಕಿ ಅವನತಿಯ ಹಾದಿ ಹಿಡಿಯಿತು ಎಂದರೆ ಅತಿಶಯೋಕ್ತಿಯಲ್ಲ. ಮುಂದಿನ ಚುನಾವಣೆಯಲ್ಲಿ ಪಕ್ಷ ಒಂದಂಕಿ ದಾಟಿದರೆ ಅಚ್ಚರಿ ಪಡಬೇಕಾಗಿಲ್ಲ.

ಈ ಸ್ಥಿತಿ ತಲುಪಬಾರದು ಅನ್ನುವ ಕಳಕಳಿ ಪಕ್ಷಕ್ಕೆ ಇದ್ದರೆ, ಜಾತ್ಯತೀತ ಹೆಸರಿಗೆ ಕಳಂಕ ಬಾರದಂತೆ ಸೂಕ್ತ ವ್ಯಕ್ತಿಯನ್ನು ಆರಿಸಬೇಕಾದ ಅನಿವಾರ್ಯತೆ ಇದೆ. ಒಂದು ವೇಳೆ ಒಕ್ಕಲಿಗರಲ್ಲೇ ಅಧ್ಯಕ್ಷ ಸ್ಥಾನ ಉಳಿಸಿಕೊಳ್ಳುವುದಾದರೆ ಅರ್ಹ ವ್ಯಕ್ತಿಗೆ ಪಟ್ಟ ಕಟ್ಟಬೇಕಾಗಿದೆ. ಈ ನಿಟ್ಟಿನಲ್ಲಿ ಹೇಳುವುದಾದರೆ, ಮೈಸೂರು ಜಿಲ್ಲೆಯಲ್ಲಿ ಪಕ್ಷ ಸ್ವಲ್ಪ ಮಟ್ಟಿಗೆ ಉಸಿರಾಡುತ್ತಿದೆ. ಅದಕ್ಕೆ ಕಾರಣ ಜಿ.ಟಿ.ದೇವೇಗೌಡರ ಪರಿಶ್ರಮ. ಆದ್ದರಿಂದ ಜಿ.ಟಿ. ದೇವೇಗೌಡರ ಪುತ್ರ ಹರೀಶ್ ಗೌಡರು ನಿಖಿಲ್‌ಗಿಂತಲೂ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಹೆಚ್ಚು ಸೂಕ್ತ ಎನಿಸುತ್ತದೆ. ಏಕೆಂದರೆ, ಸಹಕಾರಿ ಕ್ಷೇತ್ರ ಹಾಗೂ ಡಿಸಿಸಿ ಬ್ಯಾಂಕ್‌ನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ ಅನುಭವವಿದೆ. ಅಲ್ಲದೇ ಹುಣಸೂರು ಕ್ಷೇತ್ರದಲ್ಲಿ ಮೊದಲ ಬಾರಿಯಲ್ಲೇ ಸ್ವಸಾಮರ್ಥ್ಯದಿಂದ ಗೆದ್ದು ಶಾಸಕರಾಗಿರುವುದು ಅವರ ಹೆಗ್ಗಳಿಕೆ. ಮೂರು ಬಾರಿ ಚುನಾವಣೆಯಲ್ಲಿ ಜನರು ತಿರಸ್ಕರಿಸಿರುವ ನಿಖಿಲ್ ಅವರಿಗೆ ರಾಜ್ಯಾಧ್ಯಕ್ಷರ ಪಟ್ಟ ಎಷ್ಟು ಸೂಕ್ತ?.

– ಎನ್.ಶಂಕರ್ ಗಂಗಾದ್ಯಾಕೃತಿ, ಮೈಸೂರು.

■ ಗೊರುಚ ಹೇಳಿಕೆ ಮೆಚ್ಚುವಂತಹದ್ದು

ಮಾನ್ಯರೆ,

ಮೈಸೂರಿನಲ್ಲಿ ಶರಣ ದರ್ಶನ ಕೃತಿ ಲೋಕಾರ್ಪಣೆ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಗೊರುಚ ಅವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪರಿಚಾರಿಕೆ ಕೆಲಸ ಮಾಡುತ್ತಿದ್ದ ನನ್ನನ್ನು ಮಂಡ್ಯದಲ್ಲಿ ನಡೆಯುತ್ತಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದು ನಿಜಕ್ಕೂ ಸೋಜಿಗವೇ ಸರಿ ಎಂದು ಹೇಳಿರುವುದು ತುಂಬಾ ಶ್ಲಾಘನೀಯ.

ರಾಜ್ಯ ಸರ್ಕಾರ ನೀಡುವ ರಾಷ್ಟ್ರೀಯ ಬಸವ ಪುರಸ್ಕಾರ, ಜಾನಪದ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್, ಕನ್ನಡ ವಿಶ್ವವಿದ್ಯಾಲಯ ನಾಡೋಜ ಗೌರವ, ರೆಡ್ ಕ್ರಾಸ್ ಸೇವೆಗಾಗಿ ಸಿಲ್ವರ್ ಎಲಿಫೆಂಟ್ ಎಂಬ ಉನ್ನತ ಪ್ರಶಸ್ತಿಯನ್ನು ರಾಷ್ಟ್ರಪತಿಯವರು ಕೊಟ್ಟಿದ್ದಾರೆ. ಆದರೆ ಇವೆಲ್ಲಕ್ಕಿಂತ ಮಿಗಿಲಾಗಿ ಈಗ ಕನ್ನಡ ಸಾಹಿತ್ಯ ಪರಿಷತ್ ನೀಡಿರುವ ಗೌರವ ದೊಡ್ಡದು ಎಂದು ಹೇಳಿರುವುದು ಕನ್ನಡ ಕಟ್ಟುವ ಕಾರ್ಯದ ಬಗ್ಗೆ ಅವರಿಗೆ ಇರುವ ಅಪಾರವಾದ ಪ್ರೀತಿ, ಗರ್ವ ಹಾಗೂ ಇಚ್ಛಾಶಕ್ತಿಯನ್ನು ಕನ್ನಡಿಗರಾದ ನಾವೆಲ್ಲರೂ ಮೆಚ್ಚುವಂತದ್ದು. ಈ ಬಾರಿಯ ಸಮ್ಮೇಳನದ ಅಧ್ಯಕ್ಷರಾಗಿ ಗೊರುಚ ಅವರನ್ನು ಆಯ್ಕೆ ಮಾಡಿ ಸಾಹಿತ್ಯ ಪರಿಷತ್ ಗಂಡಾಂತರದಿಂದ ಪಾರಾಯ್ತು ಎಂದು ಖ್ಯಾತ ವಾಗ್ಮಿ ಪ್ರೊ. ಎಂ. ಕೃಷ್ಣೇಗೌಡ ಅವರ ಅಭಿಮತ ಪ್ರಸ್ತುತ ಸಂದರ್ಭದಲ್ಲಿ ಸರಿಯಾಗಿದೆ. ಅವಕಾಶಗಳನ್ನು ನಿಷ್ಠೆಯಿಂದ ಬಳಸಿಕೊಳ್ಳಬೇಕು ಎಂಬ ತಂದೆ – ತಾಯಿಯ ಮಾತುಗಳನ್ನು ಪಾಲಿಸುತ್ತಾ ಬಂದಿರುವುದೇ ನನ್ನ ಈ ಯಶಸ್ಸಿಗೆ ಕಾರಣ ಎಂದು ಹೇಳಿರುವುದು ಪ್ರತಿಯೊಬ್ಬರ ಮನವನ್ನು ಸೆಳೆಯುವುದರಲ್ಲಿ ಸಂಶಯವೇ ಇಲ್ಲ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

■ ಯಕ್ಷಪ್ರಶ್ನೆ!?

ಮಾನ್ಯರೆ,

ಗದಗ ಜಿಲ್ಲೆಯ ಗಜೇಂದ್ರಗಡ ಪಟ್ಟಣದ ಮಾಲ್ದಾರ್ ಕುಟುಂಬದ ಅತ್ತೆ–ಸೊಸೆ ಇಬ್ಬರೂ ಗೃಹಲಕ್ಷ್ಮಿ ಯೋಜನೆಯಿಂದ ಬಂದ ಒಟ್ಟು 44 ಸಾವಿರ ರೂಪಾಯಿ ಹಣವನ್ನು ಬಳಸಿ ತಮ್ಮ 3 ಎಕರೆ ಜಮೀನಿನಲ್ಲಿ ಕೊಳವೆ ಬಾವಿ ಕೊರೆಸಿದ್ದಾರಂತೆ! ಇದನ್ನು ಸಿಎಂ ಸಿದ್ದರಾಮಯ್ಯ ಹಾಗೂ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಶ್ಲಾಘಿಸಿದ್ದಾರಂತೆ! ಮೂರು ಎಕರೆ ಜಮೀನು ಇರುವ ಜಮೀನ್ದಾರರ ಕುಟುಂಬದವರಿಗೆ ಗೃಹಲಕ್ಷ್ಮಿ ಯೋಜನೆಯ 2 ಸಾವಿರ ರೂಪಾಯಿಯ ಅಗತ್ಯವಿದೆಯೇ? ಇದು ಯಕ್ಷಪ್ರಶ್ನೆ!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ ಮೈಸೂರು

■ ಹೆಚ್ಚಿನ ಪೊಲೀಸ್ ಭದ್ರತೆ ಒದಗಿಸಿ

ಮಾನ್ಯರೆ,

2024ನೇ ವರ್ಷ ಮುಗಿದು 2025ನೇ ವರ್ಷ ಬರುತ್ತಿದೆ. ಮೈಸೂರು ನಗರದಲ್ಲಿ ಹೊಸವರ್ಷದ ಹಿಂದಿನ ದಿನ ಮೈಸೂರಿನ ಪ್ರವಾಸಿ ಸ್ಥಳಗಳಿಗೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡುವ ಅಗತ್ಯವಿದೆ. ಕಳೆದ ವರ್ಷ ಮೈಸೂರಿನ ಹಲವು ಕಡೆ ಪುಂಡರು ಮದ್ಯಪಾನ ಮಾಡಿ ಪುಂಡಾಟವಾಡಿದ್ದಾರೆ. ಈ ವರ್ಷ ಕ್ರಿಸ್‌ಮಸ್ ಮತ್ತು ಹೊಸವರ್ಷದ ಪ್ರಯುಕ್ತ ಮೈಸೂರಿಗೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುವ ನಿರೀಕ್ಷೆ ಇರುವುದರಿಂದ ಮೈಸೂರು ನಗರದಲ್ಲಿ ಯಾವುದೇ ತೊಂದರೆಗಳು ಆಗದಂತೆ ಹೆಚ್ಚಿನ ಪೊಲೀಸ್ ವ್ಯವಸ್ಥೆಯನ್ನು ಕಲ್ಪಿಸಬೇಕು. ಮೈಸೂರಿನ ಅರಮನೆ, ಫಿಲೋಮಿನಾ ಚರ್ಚ್, ಚಾಮುಂಡಿಬೆಟ್ಟ ಮುಂತಾದ ಪ್ರವಾಸಿ ತಾಣಗಳಲ್ಲಿ ಹೆಚ್ಚಿನ ಬಿಗಿ ಭದ್ರತೆ ಮಾಡಬೇಕು. ಹೊಸವರ್ಷ ಮತ್ತು ಹೊಸವರ್ಷದ ಹಿಂದಿನ ರಾತ್ರಿ ಪೊಲೀಸರು ಹೆಚ್ಚು ಗಸ್ತು ತಿರುಗಬೇಕು. ಈ ಬಗ್ಗೆ ಯಾವುದೇ ತೊಂದರೆಗಳು ಆಗದಂತೆ ಭದ್ರತೆ ಕಲ್ಪಿಸಬೇಕೆಂದು ಮೈಸೂರು ನಗರ ಪೊಲೀಸರಲ್ಲಿ ಮನವಿ.

–ಅಭಿಷೇಕ್ ಸಿ ಎನ್, ದಸರಾ ಉಪಸಮಿತಿ ಸದ್ಯಸರು, ಮೈಸೂರು

■ ಸೂರ್ಯ


ಮಾನ್ಯರೆ

1. 'ಮೈಸೂರು ಮಿತ್ರ' ಸಂಕ್ಷಿಪ್ತವಾಗಿ, 'ಮೈಮಿತ್ರ', ಎಂದರೆ `My Freind' (ನನ್ನ ಮಿತ್ರ). ಮಿತ್ರ ಶಬ್ದಕ್ಕೆ ಸೂರ್ಯ ಎಂದೂ ಅರ್ಥ. ಬೆಳಕು ಸೂರ್ಯನಡಿಯ (Under the sun) ಲೋಕದ ಸಕಲ ವಿಕಲ ವಿದ್ಯಮಾನಗಳನ್ನೆಲ್ಲ ಓದುಗರಿಗೆ ತಲುಪಿಸುವ ಬಲಶಾಲಿ ಪತ್ರಿಕಾ–ಮಿತ್ರ ನೀತಃ ನಿತ್ಯಧೂತ!
2. 'ದೇವನೊಬ್ಬ, ನಾಮ ಹಲವು' (ಆಗಸದ) ರವಿಯೊಬ್ಬ; ರೂಹು ಹಲವು!

– ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.


ಧ್ಯಾನಕ್ಕೂ ವಿಶ್ವಮನ್ನಣೆ

ಇಂದು ಪ್ರಪ್ರಥಮ ಬಾರಿ ವಿಶ್ವಧ್ಯಾನ ದಿನಾಚರಣೆ ಆಚರಿಸಲಾಗುತ್ತಿದೆ. ಇದರ ಅಂಗವಾಗಿ ಲೇಖನ



ಸನಾತನ ಧರ್ಮಾನುಷ್ಠಾನದ ಭಾಗವಾದ ಯೋಗದ ನಂತರ ಧ್ಯಾನವೂ ವಿಶ್ವಮನ್ನಣೆ ಗಳಿಸುತ್ತಿರುವುದು ಭಾರತದ ಋಷಿ ಮುನಿಗಳ ತಪಸ್ಸಿನ ಫಲ ಹಾಗೂ ಹಲವಾರು ಸಾಧುಸಂತರ, ಅವಧೂತರ ಪ್ರಯಾಸ, ಪ್ರಸಾರ ಹಾಗೂ ಪರಿಕಲ್ಪನೆಯ ಸಾಕಾರವಾಗಿದೆ.

2024ರ ನವೆಂಬರ್ 29ರಂದು ನಡೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಡಿಸೆಂಬರ್ 21, ವಿಶ್ವಧ್ಯಾನ ದಿನವನ್ನಾಗಿ ಪ್ರತಿ ವರ್ಷ ಆಚರಿಸಲು ಸರ್ವಾನುಮತದಿಂದ ಅನುಮೋದಿಸಿ ತೀರ್ಮಾನಿಸಿರುವುದು ವಿಶ್ವದೆಲ್ಲೆಡೆ ಭಾರತೀಯರಿಗೆ ಸಂತಸ ತಂದಿದೆ. ಈ ಐತಿಹಾಸಿಕ ಕಾರ್ಯಕ್ರಮವನ್ನು ಭಾರತೀಯ ಕಾಲಮಾನ ಡಿಸೆಂಬರ್ 21ರ ರಾತ್ರಿ 8.00 ಘಂಟೆಗೆ ವಿಶ್ವಾದ್ಯಂತ ಆಚರಿಸಲಾಗುವುದು. ಅಂದು ಉತ್ತರಾಯಣವು ಪ್ರಾರಂಭವಾಗಲಿದ್ದು, ಪುಣ್ಯಕಾಲವೆಂದು ಪರಿಭಾವಿಸಲಾಗಿದೆ. ಈ ಕಾಲದಲ್ಲಿ ಬೆಳಕಿನ ಅವಧಿಯು ಹೆಚ್ಚಾಗಿದ್ದು ಆತ್ಮಶೋಧನೆಗೆ ಅತ್ಯುತ್ತಮ ಕಾಲವು ಆಗಿರುವುದರಿಂದ ಈ ದಿನವನ್ನು ಆಯ್ಕೆ ಮಾಡಲಾಗಿದೆ ಎಂಬುದಾಗಿದೆ.



ನಂ. ಶ್ರೀಕಂಠ ಕುಮಾರ್
ಮೊ: 9481067333

ಯಾವುದಾದರೊಂದು ವಸ್ತುವಿನ ಮೇಲೆ ಚಿತ್ತವನ್ನು ಸತತವಾಗಿ ಕೇಂದ್ರೀಕರಿಸುವುದನ್ನು ಧ್ಯಾನವೆನ್ನಲಾಗುತ್ತದೆ. ಧ್ಯಾನವು ಮನದ ವಿರೇಚಕದಂತೆ. ಬೇಡವಾದ ವಿಚಾರಗಳನ್ನು ಮನಃಪಟಲದಿಂದ ತೆಗೆದುಹಾಕಿ ಸಮಾಧಾನ ಭಾವವನ್ನು ಮೂಡಿಸುತ್ತದೆ. ಧ್ಯಾನ ಚಿತ್ತಶುದ್ಧಿಯ ಮಾರ್ಗ. ಧ್ಯಾನವು ನಮ್ಮೊಳಗೆ ನಾವು ಇಣುಕಿನೋಡುವ ವಿಧಾನ. ಧ್ಯಾನವೆಂದರೆ ಚಿತ್ತದ ಮೌನ, ನಿರ್ವಿಕಾರ, ಶುದ್ಧಾವಸ್ಥೆ. ಧ್ಯಾನವು ಮಾನಸಿಕ ವಿಕಲತೆಗಳನ್ನು ಹಾಗೂ ಯಾತನೆಗಳನ್ನು ನಿವಾರಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತದೆ ಎಂಬುದನ್ನು ಸಂಶೋಧಕರು ದೃಢಪಡಿಸಿದ್ದಾರೆ. ಆಧುನಿಕ ಜೀವನಶೈಲಿ ಹಲವು ಸುಖಭೋಗಗಳನ್ನು ನೀಡಿರುವುದರ ಜೊತೆ ಜೊತೆಗೆ ಒತ್ತಡ ಹಾಗೂ ಹಲವಾರು ಮನೋದೈಹಿಕ ಸಮಸ್ಯೆಗಳನ್ನೂ ತಂದೊಡ್ಡಿದೆ. ಒತ್ತಡದ ಸೂಕ್ತ ನಿರ್ವಹಣೆ ಹಾಗೂ ಮಾನಸಿಕ ಸುಸ್ಥಿತಿಯನ್ನು ಕಾಪಾಡಿಕೊಳ್ಳಲು ಧ್ಯಾನವನ್ನು ಜೀವನಶೈಲಿಯಾಗಿ ರೂಪಿಸಿಕೊಳ್ಳುವುದು ಅಗತ್ಯ.

ಅಷ್ಟಾಂಗ ಯೋಗಗಳಲ್ಲಿ ಒಂದಾದ ಧ್ಯಾನವು ಆತ್ಮವನ್ನು ಉದ್ಧರಿಸಿ ಮನಸ್ಸನ್ನು ಪ್ರಶಾಂತವಾಗಿಸುತ್ತದೆ. ಮಾನಸಿಕ ಸ್ಪಷ್ಟತೆ, ಭಾವನಾತ್ಮಕ ಸದೃಢತೆ ಮತ್ತು ಎಲ್ಲರಲ್ಲೂ ಸಾಮಾಜಿಕ ಸಾಮರಸ್ಯತೆಯು ಹೆಚ್ಚಲು ಧ್ಯಾನವು ಸಹಕಾರಿಯಾಗಿದೆ. ಅಂತೆಯೇ ಮಾನಸಿಕ, ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೂ ಧ್ಯಾನವು ಪೂರಕವಾಗಿದೆ. ಮಾನಸಿಕ ಸಮತೋಲನೆ ಹಾಗೂ ನೆಮ್ಮದಿಯನ್ನು ಕಂಡುಕೊಳ್ಳಲು ಧ್ಯಾನವು ಪ್ರಮುಖ ಸಾಧನವಾಗಿದೆ. ಅಲ್ಲದೇ ಧ್ಯಾನದ ಮೂಲಕ ಉಸಿರಾಟದ ನಿಯಮಿತ ಪ್ರಕ್ರಿಯೆಯಿಂದಾಗಿ ವಿಶೇಷವಾಗಿ ದೇಹದ ಹಲವಾರು ಅಂಗಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಬಹುದಾಗಿದೆ. ಆಧ್ಯಾತ್ಮಿಕ ಜೀವನಕ್ಕೆ ಅತ್ಯಂತ ಸಮೀಪವಾದದ್ದು ಧ್ಯಾನ. ಧ್ಯಾನದ ಮೂಲಕ ಆತ್ಮ ತನ್ನನ್ನು ತಾನೇ ಚಿಂತಿಸುತ್ತದೆ. ಸುಮ್ಮನೆ ಕುಳಿತುಕೊಂಡು ಬಾಹ್ಯ ಚಿಂತನೆಯನ್ನು ಬದಿಗಿಟ್ಟು ಭಕ್ತಿಯಿಂದ ಭಗವಂತನ ಮೇಲೆ ಮನಸ್ಸನ್ನು ಕೇಂದ್ರೀಕರಿಸಿ ಏಕಾಗ್ರತೆಯಿಂದ ಧ್ಯಾನಾಸಕ್ತರಾಗಿ ಉನ್ನತ ಧ್ಯಾನಸ್ಥಿತಿಗೆ ಹೋಗುವವರೋ ಅಂತಹವರಿಗೆ ಮಾತ್ರ ಪ್ರಾಪಂಚಿಕ ಭಾವನೆಯಿಂದ ಬೇರ್ಪಡಿಸಿ ವಿಶ್ವದಾಚೆಗಿನ ಚೈತನ್ಯವನ್ನು ಕಾಣುವ ಸಾಧನವಾಗಿ ಸಾಕ್ಷಾತ್ಕಾರವಾಗುವುದು ಎಂಬುದು ಸಂತರ ವಾಣಿಯಾಗಿದೆ. ಈ ಸ್ಥಿತಿಯಲ್ಲಿ ಯಾವ ಸಾಪೇಕ್ಷ ಜ್ಞಾನವು ಇರುವುದಿಲ್ಲ. ಆತ್ಮನೊಬ್ಬನೇ ಜ್ಞಾನಿಯಾಗಿರುವ ಆತನನ್ನು ಅರಿಯುವುದೇ ಧ್ಯಾನದಿಂದ. ಧ್ಯಾನದಿಂದ ಗೋಚರಿಸಿದ ಆತ್ಮನೇ ಸಚ್ಚಿದಾನಂದ. ಕೇವಲ ಭಗವಂತನ ಸಾಕ್ಷಾತ್ಕಾರಕ್ಕಲ್ಲದೇ ಆಯ್ಕೆ ಮಾಡಿಕೊಳ್ಳುವ ಧ್ಯಾನದ ಪ್ರಕಾರವನ್ನು ಅವಲಂಬಿಸಿ ವಿಶ್ರಾಂತಿ ಪಡೆಯಲು, ಆತಂಕ ಮತ್ತು ಒತ್ತಡವನ್ನು ಕಡಿಮೆ ಮಾಡಿಕೊಳ್ಳಲು, ದುಶ್ಚಟಗಳನ್ನು ತ್ಯಜಿಸಿ ಆರೋಗ್ಯವನ್ನು ಸುಧಾರಿಸಲು ಧ್ಯಾನವು ಸಹಾಯಕವಾಗಿದೆ.

ಡಿಸೆಂಬರ್ 21ರಂದು ಪ್ರಪ್ರಥಮವಾಗಿ ವಿಶ್ವಾದ್ಯಂತ ಆಚರಿಸಲಾಗುತ್ತಿರುವ ವಿಶ್ವಧ್ಯಾನ ದಿನದಿಂದು ಜಾಗತಿಕ ಆಧ್ಯಾತ್ಮಗುರು ಶ್ರೀ ರವಿಶಂಕರ್ ಗುರೂಜಿಯವರು ವಿಶ್ವಸಂಸ್ಥೆಯಲ್ಲಿ ಜಾಗತಿಕ ಧ್ಯಾನ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದು ಅಂದು ವಿಶ್ವಧ್ಯಾನ ದಿನವಾಗಿ ಅಧಿಕೃತವಾಗಿ ಘೋಷಣೆಯಾಗಿ ಮುಂದೆ ಪ್ರತೀ ವರ್ಷ ಆಚರಿಸುವುದು ಭಾರತೀಯರಿಗೆ ಹೆಮ್ಮೆಯ ವಿಷಯವಾಗಿದೆ.

ಹಾಸ್ಯ ಸಾಹಿತ್ಯ ಆಧುನಿಕ ಬದುಕಿಗೆ ಔಷಧಿ

ಪ್ರಾಧ್ಯಾಪಕ ಡಾ.ಜೆ.ಕರಿಯಪ್ಪ ಮಾಳಿಗೆ

ಮಂಡ್ಯ(ಸಮನಾಂತರ ವೇದಿಕೆ–2): ಕರ್ನಾಟಕ ಚಕ್ರವರ್ತಿ ಚಿಕ್ಕದೇವರಾಜ ಒಡೆಯರ್ ವೇದಿಕೆ, ಕನ್ನಡ ಕಣ್ವ ಬಿ.ಎಂ. ಶ್ರೀಕಂಠಯ್ಯ ಮತ್ತು ನಿಘಂಟು ತಜ್ಞ ಪ್ರೊ.ಜಿ.ವೆಂಕಟಸುಬ್ಬಯ್ಯ ಮಹಾ ಮಂಟಪ ವೇದಿಕೆಯಲ್ಲಿ ನಡೆದ ಕನ್ನಡ ಪುಸ್ತಕೋದ್ಯಮದ ಸಂಕೀರ್ಣ ನೆಲಗಳು ಕುರಿತು ನಡೆದ ಸಮನಾಂತರ ವೇದಿಕೆಯ–2ನೇ ಗೋಷ್ಠಿಯಲ್ಲಿ ವಿಮರ್ಶೆ ಎಂಬುದು ಎಲ್ಲಾ ಕಾಲಕ್ಕೂ ಪ್ರಸ್ತುತ ಮತ್ತು ಸಾರ್ವಕಾಲಿಕವಾಗಿದೆ ಮತ್ತು ಹಾಸ್ಯ ಸಾಹಿತ್ಯ ಆಧುನಿಕ ಬದುಕಿನಗೆ ಒಂದು ಔಷಧೀಯಾಗಿದೆ ಎಂದು ಪ್ರಾಧ್ಯಾಪಕರಾದ ಡಾ.ಜೆ. ಕರಿಯಪ್ಪ ಮಾಳಿಗೆ ಹೇಳಿದರು.



ಎಲ್ಲಾ ಪ್ರಕಾರದ ಸಾಹಿತ್ಯ ವಿಸ್ತೀರ್ಣಯನ್ನು ಸಾಹಿತ್ಯ ಸಂಕೀರ್ಣವಾಗಿದೆ, ಸಾಹಿತ್ಯ ಮತ್ತು ಅನುವಾದ ಸಾಹಿತ್ಯ ತುಂಬಾ ವಿಶೇಷವಾಗಿದೆ ಹಾಗೂ ಜಾಗತಿಕ ಯುಗದಲ್ಲಿ ಅನುವಾದ ಸಾಹಿತ್ಯ ಮತ್ತು ವಿಮರ್ಶೆ ಸಾಹಿತ್ಯ ಸಮಕಾಲಿನಲ್ಲಿ ವೈವಿಧ್ಯಮಯವಾಗಿ ನಡೆಯುತ್ತದೆ ಎಂದರು.

ಇದೇ ವೇಳೆ ಡಾ.ಕೆ.ಮಲರ್ ವಿಳಿ ಮಾತನಾಡಿ, ಭಾಷೆಯ ಬೆಳವಣಿಗೆಯಲ್ಲಿ ಕಥೆ, ಕವಿತೆಗಳನ್ನು ಅನುವಾದ ಮಾಡುವಾಗ ಕೃತಿ ಮತ್ತು ಕರ್ತೃವಿನ ಮೂಲ ಆಶಯಗಳಿಗೆ ಧಕ್ಕೆ ಬರದ ಹಾಗೆ ದ್ವಿಭಾಷಾ ಜ್ಞಾನ ಹೊಂದಿ ಅನುವಾದ ಮಾಡಬೇಕು ಎಂದು ಹೇಳಿದರು.

ಸಾಹಿತ್ಯ ವಿಮರ್ಶೆಯ ದಿಕ್ಕಿನ ಬಗ್ಗೆ ಮಾತನಾಡಿದ ಡಾ.ಶಿವಾನಂದ ವಿರಕ್ತ ಮಠ ಅನುಕರಣವಾದ, ಭಾವ ರಚನೆ ಸಿದ್ಧಾಂತ, ಬ್ರಿಟಿಷ್ ಸಾಹಿತ್ಯ ಮತ್ತು ಹೊಸ ಸಾಹಿತ್ಯದಲ್ಲಿ ದಿಕ್ಕುದೆಸೆ ಮತ್ತು ವಿಮರ್ಶೆ ಅನುಸಂಧಾನ ವಿಧಾನ ವಿಭಿನ್ನ ವಾದದ್ದು ಎಂದರು.

ವೈ.ವಿ.ಗುಂಡೂರಾವ್ ಮಾತನಾಡಿ, ಹಾಸ್ಯ ಸಾಹಿತ್ಯ ಎಂಬುದು ಬುದ್ದಿಗೆ ಪ್ರೇರಣೆ, ಮನಸ್ಸಿಗೆ ರಂಜನೆ ಮತ್ತು ಸಮಾಜಕ್ಕೆ ಸುಧಾರಣೆ ಹಾಗೂ ಗಂಡ ಗದ್ಯ, ಹೆಂಡತಿ ಪದ್ಯ, ಮಕ್ಕಳು ರಗಳೆ ಮತ್ತು ನಗುವೆ ಔಷಧಿ, ಮನುಷ್ಯ ಮನುಷ್ಯರ ನಡುವಿನ ಸಂಬಂಧ ಗಟ್ಟಿಗೊಳಿಸಲು ಹಾಸ್ಯ ಬಹುಮುಖ್ಯವಾಗಿದೆ ಎಂದರು.

ಡಾ.ಎ.ಆರ್.ಸೋಮಶೇಖರ ಮಾತನಾಡಿ, ವೈದ್ಯ ಸಾಹಿತ್ಯದಲ್ಲಿ ಕಠಿಣ ಪದಗಳನ್ನು ಸರಳಗೊಳಿಸುವುದು, ಕನ್ನಡದಲ್ಲಿ ಕಲಿಕೆಗೆ ಅಗತ್ಯವಾದ ಕ್ರಮಗಳನ್ನು ಕೈಗೊಂಡರುವ ಬಗ್ಗೆ, ತಾಯಿ ಮತ್ತು ಮಕ್ಕಳ ಮರಣದ ಕಡಿಮೆ ಮಾಡಬೇಕು ಹಾಗೂ ತಾಯಿ ಮತ್ತು ಮಗುವಿನ ಪೋಷಣೆಯ ಬಗ್ಗೆ ತಿಳಿಸಿದರು.

ಡಾ.ಎಲ್.ಹನುಮಂತಯ್ಯ ಮಾತನಾಡಿ, ಅನುವಾದ ಸಾಹಿತ್ಯ ವಿಶೇಷವಾಗಿ ಕ್ರಿಯಾತ್ಮಕವಾಗಿ, ಉತ್ಸಾಹ ಭರಿತ ಸಾಹಿತ್ಯವಾಗಿದೆ. ಕನ್ನಡಿಗರು ಅನ್ಯ ಭಾಷೆಯಿಂದ ಅನುವಾದ ಸಾಹಿತ್ಯವನ್ನು ಕನ್ನಡ ಸಾಹಿತ್ಯದಂತೆ ಕನ್ನಡಿಗರು ಒಪ್ಪಿಕೊಂಡಿದ್ದಾರೆ. ಹಾಗೆಯೇ ನಮ್ಮ ಕನ್ನಡ ಸಾಹಿತ್ಯವನ್ನು ಆಂಗ್ಲ ಭಾಷೆ ಹೆಚ್ಚು ಅನುವಾದ ಮಾಡುವ ಮೂಲಕ ನಮ್ಮ ಸಾಹಿತ್ಯ ವಿಶ್ವದೆಲ್ಲೆಡೆ ಪಸರಿಸುವಂತೆ ಮಾಡಬೇಕು ಎಂದರು.

ಓದುಗರು ಪುಸ್ತಕದ ಗುಣಮಟ್ಟ ಬದಲು ರಿಯಾಯಿತಿ ನೋಡುತ್ತಿದ್ದಾರೆ

ಸ್ವಪ್ನ ಬುಕ್‌ಹೌಸ್ ಮಾಲೀಕ ದೊಡ್ಡೇಗೌಡ ಬೇಸರ

ಮಂಡ್ಯ(ಸಮನಾಂತರ ವೇದಿಕೆ–1): ಕರ್ನಾಟಕ ಚಕ್ರವರ್ತಿ ಚಿಕ್ಕದೇವರಾಜ ಒಡೆಯರ್ ವೇದಿಕೆ, ಕನ್ನಡ ಕಣ್ವ ಬಿ.ಎಂ. ಶ್ರೀಕಂಠಯ್ಯ ಮತ್ತು ನಿಘಂಟು ತಜ್ಞ ಪ್ರೊ.ಜಿ.ವೆಂಕಟಸುಬ್ಬಯ್ಯ ಮಹಾಮಂಟಪ ವೇದಿಕೆಯಾದ ಸಮಾನಾಂತರ ವೇದಿಕೆ–1ರಲ್ಲಿ ಕನ್ನಡ ಪುಸ್ತಕೋದ್ಯಮದ ಸವಾಲುಗಳು ಮತ್ತು ಪರಿಹಾರಗಳು ವಿಷಯದ ಗೋಷ್ಠಿಯಲ್ಲಿ ಸ್ವಪ್ನ ಬುಕ್ ಹೌಸ್ ಮಾಲೀಕ ದೊಡ್ಡೇಗೌಡ ಆಶಯ ನುಡಿಯನ್ನಾಡಿ, ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ಪುಸ್ತಕದ ಅಗತ್ಯ ಬಹಳವಾಗಿದೆ. ಕನ್ನಡ ಪತ್ರಿಕೋದ್ಯಮ ಯಾವ ರೀತಿ ಸಮಸ್ಯೆಯನ್ನು ಎದುರಿಸುತ್ತಿದೆ ಎಂಬುದನ್ನು ತಿಳಿಯುವುದು ಮುಖ್ಯವಾಗಿದೆ. ಪುಸ್ತಕ ತಯಾರಿಸಲು ಬೇಕಾಗಿರುವ ಕಚ್ಚಾ ಸಾಮಗ್ರಿಗಳ ಬೆಲೆಯು ಹೆಚ್ಚಾಗುತ್ತಿದ್ದು, ಪುಸ್ತಕ ಕೊಳ್ಳುವವರ ಸಂಖ್ಯೆ ಹೆಚ್ಚುತ್ತಿಲ್ಲ. ಬಿಡುಗಡೆಯಾದ ಎಲ್ಲಾ ಪುಸ್ತಕಗಳನ್ನು ಪ್ರಕಟಿಸಲು ಕಷ್ಟಸಾಧ್ಯ ಏಕೆಂದರೆ ಓದುಗರ ಸಂಖ್ಯೆ ಕಡಿಮೆ ಇದೆ ಎಂದು ಬೇಸರ ವ್ಯಕ್ತಪಡಿಸಿದರು.

ಪುಸ್ತಕ ಸಗಟು ಬೆಲೆ ಸ್ಥಗಿತವಾಗಿದ್ದು, ಇಂದಿನ ದಿನಗಳಲ್ಲಿ ಪ್ರಕಾಶಕರು ಸಂಕಷ್ಟದಲ್ಲಿದ್ದಾರೆ. ಗ್ರಂಥಾಲಯದಲ್ಲಿ ಹೊಸ ಓದುಗರು ಸಿಗುತ್ತಿಲ್ಲ. ಓದುಗರು ಆಸಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಓದುಗರು ಪುಸ್ತಕದ ಇಂದಿನ ಗುಣಮಟ್ಟವನ್ನು ಗಮನಿಸದೆ, ಪುಸ್ತಕದ ರಿಯಾಯತಿಯನ್ನು ಗಮನಿಸುತ್ತಾರೆ. ಎಲ್ಲರೂ ಖಾಸಗಿ ಮನೋರಂಜನೆಗೆ ಒಳಗಾಗುತ್ತಿದ್ದು, ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಮನೋರಂಜನೆ ಪಡುತ್ತಿದ್ದಾರೆ. ಕನ್ನಡ ಓದುಗರ ಸಂಖ್ಯೆ ಮೊಬೈಲ್ ಬಂದ ಮೇಲೆ ಕ್ಷೀಣಿಸತೊಡಗಿತು. ಕನ್ನಡ ಪ್ರಕಾಶಕರು ಹಾಗೂ ಲೇಖಕರಿಗೆ ಉತ್ತೇಜನ ನೀಡುವ ಮೂಲಕ ಪುಸ್ತಕೋದ್ಯಮಕ್ಕೆ ಇರುವ ಸಂಕಷ್ಟವನ್ನು ಪರಿಹರಿಸಬೇಕು ಎಂದು ಸರ್ಕಾರದಲ್ಲಿ ಮನವಿ ಮಾಡಿಕೊಂಡರು.

ಕೆ.ಎಲ್.ರಾಜಶೇಖರ್ ಅವರು ಮುದ್ರಣ ಕ್ಷೇತ್ರದ ತಲ್ಲಣಗಳು ವಿಷಯದ ಬಗ್ಗೆ ವಿಷಯ ಮಂಡನೆ ಮಾಡಿ ಭಾರತ ಮುದ್ರಣ ಕ್ಷೇತ್ರಕ್ಕೆ 500 ವರ್ಷದ ಇತಿಹಾಸವಿದ್ದು, ಕರ್ನಾಟಕ ಮುದ್ರಣ ಕ್ಷೇತ್ರಕ್ಕೆ 200 ವರ್ಷಗಳಿಗಿಂತಲೂ ಹೆಚ್ಚಿನ ಇತಿಹಾಸವಿದೆ. ಆದರೂ ಅನೇಕ ತಲ್ಲಣಗಳು ಮುದ್ರಣ ಕ್ಷೇತ್ರದಲ್ಲಿವೆ. ಮುದ್ರಣ ಕ್ಷೇತ್ರದಲ್ಲಿ ಮುದ್ರಣಾ ಪೂರ್ವ, ಮುದ್ರಣ, ಮುದ್ರಣೋತ್ತರ ಎಂಬ ಮೂರು ಸವಾಲುಗಳಿವೆ. ಮುದ್ರಣ ಕ್ಷೇತ್ರವು ವೃತ್ತಿ ಆಧಾರಿತ ಕೋರ್ಸ್ ಅನ್ನು ಶುರು ಮಾಡಿದರು ಹಾಗೂ ಮುದ್ರಣ ತಂತ್ರಜ್ಞಾನ ವಿಷಯವನ್ನು ಅಳವಡಿಸಿದರು ಯಾರು ಕೂಡ ಇದರಲ್ಲಿ ಆಸಕ್ತಿ ವಹಿಸುತ್ತಿಲ್ಲ. ಯುವ ಜನರು ಹಣ ಗಳಿಕೆಗೆ ಸುಲಭ ಮಾರ್ಗಗಳನ್ನು ಹಿಡಿಯುತ್ತಿದ್ದಾರೆ ಎಂದು ಹೇಳಿದರು.

ಜಿಎಸ್‌ಟಿ ತೆರಿಗೆಯು ಮುದ್ರಣ ಮಾಧ್ಯಮದ ಮೇಲೆ ಪರಿಣಾಮ ಬೀರುತ್ತಿದೆ. ಶೇ.5 ರಷ್ಟು ಮುದ್ರಣ ಮಾಧ್ಯಮದ ಪ್ರಕಾಶಕರು, ಲೇಖಕರು ಹಾಗೂ ಓದುಗನ ಮೇಲೆ ಪರೋಕ್ಷ ತೆರಿಗೆ ಬೀಳುತ್ತಿದೆ. ಇದರಿಂದ ಕೆಲವು ಮುದ್ರಣ ಮಾಧ್ಯಮ ಸಂಸ್ಥೆಗಳು ಮುಚ್ಚಲ್ಪಟ್ಟವು. ಇನ್ನಮುಂದೆ ಶೇಕಡಾ ಕೇವಲ 3ರಷ್ಟು ಜಿಎಸ್‌ಟಿ ವಿಧಿಸಿದರೆ ಮುದ್ರಣ ಮಾಧ್ಯಮವು ಚೇತರಿಸಿಕೊಳ್ಳಲಿವೆ. ಕನ್ನಡ ಮುದ್ರಣ ಕ್ಷೇತ್ರವನ್ನು ಬಲಪಡಿಸುವುದು ಅಗತ್ಯವಾಗಿದೆ ಎಂದರು.

ಅಕ್ಷತಾ ಹುಂಚದಕಟ್ಟೆ ಅವರು ಕನ್ನಡ ಪುಸ್ತಕಗಳು ಮತ್ತು ಓದುಗ ಬಳಗ ವಿಷಯದ ಬಗ್ಗೆ ವಿಷಯ ಮಂಡನೆ ಮಾಡಿದರು. ಕನ್ನಡದ ಹಿರಿಯ ಕವಿಗಳಾದ ಪಂಪ, ಪೊನ್ನ, ರನ್ನ ಅವರುಗಳು ರಾಜಶ್ರಯದಲ್ಲಿದ್ದರು ಕೂಡ ಸಹೃದಯಿಗಳ, ಸಾಮಾನ್ಯರ ಮೇಲೆ ಗಮನಹರಿಸಿ ಅವರಿಗೆ ಅರ್ಥವಾಗುವ ರೀತಿಯಲ್ಲಿ ಸಾಹಿತ್ಯವನ್ನು ರಚಿಸಿದರು. ಆದರೆ ಇಂದಿನ ಓದುಗರು ಹಾಗೂ ಪುಸ್ತಕಗಳಲ್ಲಿ 2 ವಿಧಗಳಿವೆ. ಓದುಗರಲ್ಲಿ ಇವತ್ತಿನ ಓದು ಹಾಗೂ ಅರಿವು ಹೆಚ್ಚಿಸುವ ಓದು, ಪುಸ್ತಕದಲ್ಲಿ ಇಂದಿನ ಆಶಯ ನೆರವೇರಿಸುವ ಪುಸ್ತಕ ಹಾಗೂ ಅರಿವು ಪ್ರಜ್ಞೆಯನ್ನು ವಿಸ್ತರಿಸುವ ಪುಸ್ತಕ ಎಂಬುದಾಗಿ 2 ವಿಧಗಳಿವೆ. ಓದುಗರ ಸಂಖ್ಯೆಯನ್ನು ಹೆಚ್ಚಿಸುವ ಕಾರ್ಯವನ್ನು ಶಿಕ್ಷಣ ಸಂಸ್ಥೆಗಳು, ಪ್ರಕಾಶಕರು, ಲೇಖಕರು ಮಾಡುತ್ತಾ ಬರುತ್ತಿದೆ. ಕನ್ನಡ ಭಾಷೆಯನ್ನು ಉಳಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬ ಕನ್ನಡಿಗನು ಶ್ರಮಿಸಬೇಕು. ಜೊತೆಗೆ ಪುಸ್ತಕದ ಓದನ್ನು ಮೂಲಭೂತ ಅವಶ್ಯಕತೆ ಎಂದು ಪರಿಗಣಿಸಬೇಕು ಎಂದರು.

ಇದೇ ವೇಳೆ ಮಾತನಾಡಿದ ಸಾಹಿತಿ ಅಶೋಕ್ ಕುಮಾರ್, ಕಾಗದದ ಬೆಲೆ ಏರಿಕೆಯಿಂದ ಕೃತಿಗಳ ಮುದ್ರಣ ಕಷ್ಟದಾಯಕವಾಗಿದ್ದು ಪುಸ್ತಕ ಮುದ್ರಣಕ್ಕೆ ಸರ್ಕಾರದ ಸಹಾಯಹಸ್ತ ಅಗತ್ಯವಾಗಿದ್ದು ಇದರಿಂದ ಸಾಹಿತ್ಯ ಕೃಷಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ಸವಾಲುಗಳು ಮತ್ತು ಪರಿಹಾರಗಳು ವಿಷಯದ ಬಗ್ಗೆ ವಿಷಯ ಮಂಡನೆ ಮಾಡಿದ ಅಶೋಕ ಕುಮಾರ್, ಇಂದು ತಂತ್ರಜ್ಞಾನ ಮುಂದುವರೆದು ಎಲ್ಲರ ಕೈಯಲ್ಲಿ ಮೊಬೈಲ್ ಇದೆ. ಆದ್ದರಿಂದ ಸಾಮಾಜಿಕ ಜಾಲತಾಣ ಹಾಗೂ ಇನ್ನಿತರೆ ಮೊಬೈಲ್ ಬಳಕೆಯಿಂದಾಗಿ ಓದುಗರ ಸಂಖ್ಯೆಯು ಕಡಿಮೆಯಾಗುತ್ತಿದೆ. ಆದರೂ ಪತ್ರಿಕೆಗಳು ಅಸ್ತಿತ್ವವನ್ನು ಕಳೆದುಕೊಂಡಿಲ್ಲ ಎಂದರು.

ಸಮ್ಮೇಳನದಲ್ಲೊಂದು ಅಪರೂಪದ ಮಳಿಗೆ

ಮಂಡ್ಯದಲ್ಲಿ ನಡೆಯುತ್ತಿರುವ ನುಡಿಜಾತ್ರೆ ಎಲ್ಲರಲ್ಲೂ ಕನ್ನಡದ ಕಿಚ್ಚನ್ನು ಬಡಿದೆಬ್ಬಿಸಿದೆ. ಮನದಾಳದಲ್ಲಿ ಎಲ್ಲಿಯೋ ಇದ್ದ ಕನ್ನಡದ ಮೇಲಿನ ಸುಪ್ತ ಪ್ರೇಮ ಇದೀಗ ಹೊಮ್ಮಿ ಚಿಮ್ಮುತ್ತಿದೆ. ನೂರಕ್ಕೂ ಹೆಚ್ಚಿನ ಪುಸ್ತಕ ಮಳಿಗೆಗಳು ಸಾಹಿತ್ಯಾಸಕ್ತರ ಪುಸ್ತಕ ದಾಹವನ್ನು ತಣಿಸುತ್ತಿದೆಯಷ್ಟೇ.

ಇದೇ ಪುಸ್ತಕ ಮಳಿಗೆಗಳ ಮಧ್ಯೆ ಒಂದು ಮಳಿಗೆ ನೋಡುಗರನ್ನು ಹಿಂದಿನ ಕಾಲಕ್ಕೆ ಒಯ್ಯುತ್ತಿದೆ. ಚಿಂತಾಮಣಿಯ ನಿವೃತ್ತ ಶಿಕ್ಷಕರಾದ ಕಲ್ಯಾಣ್ ಕುಮಾರ್ ಅವರ ಅಪೂರ್ವ ಸಂಗ್ರಹ ನೋಡುಗರನ್ನು ದಶಕಗಳ ಹಿಂದಕ್ಕೆ ಕೊಂಡೊಯ್ಯುತ್ತದೆ.

ವೃತ್ತಪತ್ರಿಕೆಗಳ ಮೂಲಕ ಓದಿಗೆ ತೆರೆದುಕೊಳ್ಳುತ್ತಿದ್ದ ಕಾಲವೊಂದಿತ್ತು. 1930ರ ದಶಕದಿಂದ ಕನ್ನಡದಲ್ಲಿ ಸದಭಿರುಚಿಯ ಹಲವು ಪತ್ರಿಕೆಗಳು ಬಂದು ಹೋಗಿವೆ. ಅಂತಹ ನೂರಾರು ಪತ್ರಿಕೆಗಳ ಸಂಗ್ರಹವೇ ಕಲ್ಯಾಣ್‌ಕುಮಾರ್ ಅವರ ಬಳಿ ಇವೆ. ಚಿಕ್ಕಂದಿನಿಂದಲೇ ಮನೆಗೆ ಬರುತ್ತಿದ್ದ ಪತ್ರಿಕೆಗಳನ್ನು ಓದುತ್ತಿದ್ದುದು ಮಾತ್ರವಲ್ಲದೆ, ಅವನ್ನು ಸಂಗ್ರಹಿಸಿ ಇಡುವ ಪರಿಪಾಠವನ್ನೂ ಬೆಳೆಸಿಕೊಂಡ ಕಲ್ಯಾಣ್ ಅವರ ಸಂಗ್ರಹದಲ್ಲಿ ಕನ್ನಡದ ಬಹುತೇಕ ಎಲ್ಲ ಪತ್ರಿಕೆಗಳೂ ಇವೆ. ಮಾಸ್ತಿ, ಅಡಿಗ, ತಿತಾ ಶರ್ಮರಾದಿಯಾಗಿ ಅನೇಕ ಸಾಹಿತಿಗಳು ನಡೆಸುತ್ತಿದ್ದ ಪತ್ರಿಕೆಗಳ ಪ್ರತಿಗಳು ನೋಡುಗರ ಮೈ ರೋಮಾಂಚನಗೊಳಿಸುತ್ತವೆ. ರಾಜ್ಯ ಮಟ್ಟದ ಪತ್ರಿಕೆಗಳಲ್ಲದೆ ಕರ್ನಾಟಕದ ವಿವಿಧ ಜಿಲ್ಲೆಗಳ ಜಿಲ್ಲಾ ಮಟ್ಟದ ಪತ್ರಿಕೆಗಳೂ ಇವರ ಸಂಗ್ರಹದಲ್ಲಿದೆ. ಅಲ್ಲದೆ ತಾವೇ ಹಣ ವ್ಯಯಿಸಿ ಬೇರೆ ದೇಶದ ಪತ್ರಿಕೆಗಳನ್ನೂ ತರಿಸಿ ತಮ್ಮ ಸಂಗ್ರಹಕ್ಕೆ ಸೇರಿಸಿದ್ದಾರೆ. ರಷ್ಯನ್ ಭಾಷೆಯ ವೃತ್ತಪತ್ರಿಕೆಗಳ ಸಂಖ್ಯೆ ಅದರಲ್ಲಿ ಹೆಚ್ಚು ಎಂದು ಹೆಮ್ಮೆಯಿಂದ ಹೇಳುತ್ತಾರೆ.



ಸಮ್ಮೇಳನದಲ್ಲಿ ಕಲ್ಯಾಣ್‌ಕುಮಾರ್ ಅವರ ಅಪರೂಪದ ಮಳಿಗೆ.

ರಾಜ್ಯದಲ್ಲಿ ನಡೆಯುವ ಸಮ್ಮೇಳನಗಳಲ್ಲಿ ಮಾತ್ರವಲ್ಲದೆ, ಹೊರ ರಾಜ್ಯಗಳಲ್ಲಿ ನಡೆಯುವ ಕನ್ನಡದ ಸಮಾರಂಭಗಳಲ್ಲೂ ಪ್ರದರ್ಶನವನ್ನು ತಮ್ಮ ಸ್ವಂತ ಖರ್ಚಿನಲ್ಲಿ ಏರ್ಪಡಿಸುತ್ತಾರೆ. ಇತ್ತೀಚೆಗೆ ಸಿಂಗಾಪುರದಲ್ಲಿ ನಡೆದ ಕನ್ನಡ ಹಬ್ಬದಲ್ಲಿಯೂ ಪ್ರದರ್ಶನವನ್ನು ಏರ್ಪಡಿಸಿದ್ದು ಇವರ ಕನ್ನಡ ಪ್ರೀತಿಗೆ ಸಾಕ್ಷಿ.

ಕನ್ನಡನಾಡಿನ ಅತ್ಯಂತ ಪ್ರಮುಖ ಘಟನೆಗಳನ್ನು ಹೇಳುವ ಪತ್ರಿಕೆಗಳನ್ನು ಈ ಪ್ರದರ್ಶನದಲ್ಲಿ ಕಾಣಬಹುದು. ಕಾರಂತರು, ಕುವೆಂಪು ಅವರು ಅಗಲಿದ ದಿನದ ವರದಿ, ಏಕೀಕರಣ ಕಾಲದ ಪತ್ರಿಕೆಯ ಮುಖಪುಟಗಳು ಎಲ್ಲರನ್ನೂ ಸೆಳೆಯುತ್ತವೆ.

ಇದೀಗ ಮನೆಯಲ್ಲಿ ಸ್ಥಳದ ಅಭಾವದಿಂದ ಮಯೂರ ತುಷಾರ ಸುಧಾ ತರಂಗಗಳಂತಹಾ ಪತ್ರಿಕೆಗಳನ್ನು ಆಸಕ್ತಿಯಿದ್ದವರಿಗೆ ಕೊಟ್ಟಿದ್ದನ್ನು ಸಂತಸ ಹಾಗೂ ಬೇಸರ ತುಂಬಿದ ಮಿಶ್ರ ಧ್ವನಿಯಲ್ಲಿ ಹೇಳುವಾಗ ಅವರಿಗೆ ಆಗಿರಬಹುದಾದ ಬೇಸರ ನಮ್ಮ ಅನುಭವಕ್ಕೂ ಬರುತ್ತದೆ.

– ನಿವೇದಿತಾ.ಹೆಚ್, ಮೈಸೂರು.

ಕನ್ನಡಾಂಬೆಯ ಕೈಗೆ ನುಡಿ ನೆನಪ ತೊಡಿಸುವ ಬಳೆಗಾರ ದತ್ತಾತ್ರೇಯ

ಸಮ್ಮೇಳನ ಎಂದರೆ ಕನ್ನಡವನ್ನು, ಕನ್ನಡತನವನ್ನು ಪ್ರೀತಿಸುವ, ಆರಾಧಿಸುವ ಮನಸುಗಳ ಸಮಾಗಮ. ಕನ್ನಡದ ಬಗ್ಗೆ ಅಸೀಮ ಅಷ್ಟೇ ಅಲ್ಲದೆ ವಿಶೇಷ ರೀತಿಯಲ್ಲಿ ಕನ್ನಡವನ್ನು ತಮ್ಮದಾಗಿಸಿಕೊಳ್ಳುವ ವ್ಯಕ್ತಿಗಳು ಅಲ್ಲಿ ನಮಗೆದುರಾಗುತ್ತಾರೆ. ಅಂತಹುದೇ ಒಬ್ಬ ವಿಶೇಷ ವ್ಯಕ್ತಿ ನಮಗೆ ಮುಖಾಮುಖಿಯಾದರು.



ದತ್ತಾತ್ರೇಯ

ಅವರೇ ಚನ್ನಪಟ್ಟಣದ ಬಳೆ ವ್ಯಾಪಾರಿ ದತ್ತಾತ್ರೇಯ. ಕೇವಲ ನಾಲ್ಕನೆಯ ತರಗತಿಯವರೆಗೆ ಓದಿರುವ ಇವರಿಗೆ, ಕನ್ನಡ ಅನ್ನದ ಭಾಷೆಯಾಗಿದೆ ಎನ್ನುವ ಅಮಿತ ಅಭಿಮಾನ. ಗೊಂಬೆನಾಡಿನಲ್ಲಿರುವ ಇವರ ಬಾಯಲ್ಲಿ ಕನ್ನಡದ ಸಾಂಸ್ಕೃತಿಕ ಇತಿಹಾಸ ನಲಿದಾಡುತ್ತದೆ.

87 ಸಾಹಿತ್ಯ ಸಮ್ಮೇಳನಗಳ ಇಸವಿ, ಸ್ಥಳ ಮತ್ತು ಅಧ್ಯಕ್ಷರು ಇವರಿಗೆ ಬಾಯಿಪಾಠ. ರಾಜ್ ಕುಮಾರ್ ಮತ್ತು ವಿಷ್ಣುವರ್ಧನ್ ಅವರ ಕಟ್ಟಾಭಿಮಾನಿಯಾಗಿರುವ ಇವರಿಗೆ ಅವರ ಚಿತ್ರಗಳ ಹೆಸರು, ಇಸವಿ ನಾಯಕಿ ಕಂಠಪಾಠ! ಕೇವಲ 3–3ನಿಮಿಷಗಳ ಅವಧಿಯಲ್ಲಿ ಅವರಿಬ್ಬರ ಚಿತ್ರಗಳ ಹೆಸರನ್ನು ಸಲೀಸಾಗಿ ಪಟಪಟನೆ ಹೇಳುತ್ತಾರೆ! ಕರ್ನಾಟಕದ ಎಮ್‌ಎಲ್‌ಎ ಮತ್ತು ಎಮ್‌ಎಲ್‌ಸಿಗಳ ಹೆಸರನ್ನು ಅವರ ಕ್ಷೇತ್ರಗಳು ಮತ್ತು ಪ್ರದೇಶಗಳ ಸಂಖ್ಯೆಯನ್ನು ಹಾಗೆಯೇ ಉಸುರಿಬಿಡುತ್ತಾರೆ! ಆರ್‌ಟಿಓ ಆಫೀಸ್‌ಗಳು ಸೇರಿದಂತೆ ಉಳಿದ ಎಲ್ಲ ಸರ್ಕಾರಿ ಇಲಾಖೆಗಳ ಆಫೀಸ್ ವಿಳಾಸಗಳನ್ನು ತಪ್ಪಿಲ್ಲದಂತೆ ಹೇಳುತ್ತಾರೆ! ಅವರ ಮೆದುಳಿನ ಭಂಡಾರದಲ್ಲಿ ಈ ರೀತಿಯ ಹಲವು ವಿಶೇಷಗಳು ಅಚ್ಚೊತ್ತಿಬಿಟ್ಟಿವೆ. ಸ್ವಾರಸ್ಯವೆಂದರೆ ಇವೆಲ್ಲವನ್ನೂ ನೆನಪಿಸಿಕೊಳ್ಳುವಾಗ ಅವರ ಹುಬ್ಬುಗಳು ಕೊಂಚವಾದರೂ ಗಂಟಿಕ್ಕಿಕೊಳ್ಳುವುದಿಲ್ಲ. ಅಷ್ಟು ಅಂತರ್ಗತ ಇವೆಲ್ಲವೂ!

ಕನ್ನಡದ ಸೇವೆ ವಿದ್ವಜ್ಜನರ ಸೊತ್ತು ಅಥವಾ ಕೇವಲ ಅವರ ಜವಾಬ್ದಾರಿಯಲ್ಲ. ಗ್ರಂಥರಚನೆ ಮಾತ್ರ ಕನ್ನಡ ಸೇವೆಯಲ್ಲ.. ಮುಖ್ಯಮಂತ್ರಿಗಳು ಯಾರೆಂದು ಕೇಳಿದರೆ ತಿಳಿದಿರದ ಈ ಕಾಲದಲ್ಲಿ, ನಾಡಿನ ಆಗುಹೋಗುಗಳನ್ನು ಮನಸ್ಸಿನಲ್ಲಿ ಕಾಪಿಟ್ಟುಕೊಂಡು ನೆನಪಿಸಿಕೊಂಡು ಸಂಭ್ರಮಿಸುವುದು ಕೂಡ ಕನ್ನಡಸೇವೆಯೇ! ಅಂತಹ ಒಂದು ಸರಳವಲ್ಲದ ಸೇವೆಯನ್ನು ಅತ್ಯಂತ ಸಂತೋಷದಿಂದ ಮಾಡುತ್ತಿರುವ ದತ್ತಾತ್ರೇಯ ಅವರದು ಕನ್ನಡಿಗರಿಗೆ ಮಾದರಿಯಾಗುವಂತಹ ವ್ಯಕ್ತಿತ್ವ ಎಂದರೆ ಖಂಡಿತವಾಗಿ ಅತಿಶಯವೆನಿಸುವುದಿಲ್ಲ. ಅಲ್ಲವೇ?

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಸಾಧಕರು, ಸಾಮಾನ್ಯರ ಜೀವನ ಚಿತ್ರ ಕಣ್ಣಿಗೆ ಕಟ್ಟುವ ವಿಶಿಷ್ಟ ಕೃತಿ 'ಬೆಂಗಳೂರಿಯನ್' ಬಿಡುಗಡೆ

ಮೈಸೂರು, ಡಿ.20(ಎಸ್‌ಬಿಡಿ)– ಬೆಂಗಳೂರು ಮಹಾನಗರದಲ್ಲಿ ನೆಲೆಸಿರುವ ಸಾಮಾನ್ಯರು ಹಾಗೂ ಸಾಧಕರನ್ನು ಕುರಿತ ವಿಶಿಷ್ಟ ಕೃತಿ 'ಬೆಂಗಳೂರಿಯನ್' ಶುಕ್ರವಾರ ಮೈಸೂರಿನಲ್ಲಿ ಲೋಕಾರ್ಪಣೆಗೊಂಡಿತು.

ಮೈಸೂರು ಬುಕ್ ಕ್ಲಬ್–2015ರ ವತಿಯಿಂದ ನಗರದ ಶ್ರೀಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್(ಮೈಸೂರು ಸ್ಪೋರ್ಟ್ಸ್ ಕ್ಲಬ್) ಆವರಣದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪ್ರಕಾಶನ ಸಂಸ್ಥೆ ಅಕಾಡೆಮಿ ನ್ಯೂಸ್ ಪೇಪರ್ಸ್ ಪ್ರೈವೇಟ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ನಿರ್ದೇಶಕರಾದ ರ್ಯಾಲಿ ಗಣಪತಿ ಅವರು ಪುಸ್ತಕವನ್ನು ಬಿಡುಗಡೆ ಮಾಡಿದರು.

ಜಾಗತಿಕ ಮಟ್ಟದ ಉದ್ಯಮಿ ಸಿದ್ ಮುಖರ್ಜಿ ಅವರು ಮೊದಲ ಪ್ರತಿಯನ್ನು ಸ್ವೀಕರಿಸಿದರು. ಮೈಸೂರು ಬುಕ್ ಕ್ಲಬ್ ಸಂಸ್ಥಾಪಕ ಅಧ್ಯಕ್ಷರಾದ ಶುಭಾ ಸಂಜಯ್ ಅರಸ್, ಪುಸ್ತಕದ ಕರ್ತೃಗಳಾದ ಕಾವೇರಿ ಸಿನ್ಹಿ, ಕಾತ್ಯಾ ಆಂಟೋನಿ, ಫರ್ರಾ ಗಿಲಾನಿ ಹಾಗೂ ಮೆಲಿಸ್ಸಾ ಪ್ಯಾರ್ಕರ್ಸ್ಟನ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವಿಶಿಷ್ಟ ಪುಸ್ತಕ: ಸದ್ಯ ವಿದೇಶದಲ್ಲಿ ನೆಲೆಸಿರುವ ಸಮಾನ ಮನಸ್ಕರಿಂದ ರೂಪುಗೊಂಡ 'ಬೆಂಗಳೂರಿಯನ್' ಪುಸ್ತಕ ವಿಶಿಷ್ಟವಾಗಿದೆ. ಕೋವಿಡ್ ಪೂರ್ವದಲ್ಲಿ ಬೆಂಗಳೂರಿನಲ್ಲಿ ನೆಲೆಸಿದ್ದ ಆರು ಮಂದಿ ಸ್ನೇಹಿತರ ತಂಡ, ಮಹಾನಗರ ಪ್ರದಕ್ಷಿಣೆ ಹಾಕಿ ಪುಸ್ತಕ ರೂಪದಲ್ಲಿ ಜನಜೀವನ ಹಾಗೂ ವೈಶಿಷ್ಟತೆಯನ್ನು ಕಟ್ಟಿಕೊಟ್ಟಿದ್ದಾರೆ. ಕಾವೇರಿ ಸಿನ್ಹಿ ಪರಿಕಲ್ಪನೆ, ಫರ್ರಾ ಗಿಲಾನಿ, ಮೆಲಿಸ್ಸಾ ಪ್ಯಾರ್ಕರ್ಸ್ಟನ್ ಬರಹ ಹಾಗೂ ಕಾತ್ಯಾ ಆಂಟೋನಿ ಹಾಗೂ ಕ್ರಿಸ್ ಪೇಜ್ ಸೆರೆಹಿಡಿದ ಛಾಯಾಚಿತ್ರಗಳು, ತಾನಿಯಾ ಸಿಂಗ್ ವಿನ್ಯಾಸದ ಸಮ್ಮಿಳಿತವಾದ ಈ ಪುಸ್ತಕದಲ್ಲಿ ಅಗಾಧ ಮಾಹಿತಿ ಅಡಕವಾಗಿದೆ. 'ಬೆಂಗಳೂರಿಯನ್' ಪುಸ್ತಕವು ಕ್ರಿಯಾತ್ಮಕ ಮಹಾನಗರಕ್ಕೆ ಜೀವ ತುಂಬುವ ವ್ಯಕ್ತಿಗಳಿಗೆ ಗೌರವ ಸಲ್ಲಿಸುವಂತಿದೆ. ಆಕರ್ಷಕ ಛಾಯಾ ಚಿತ್ರಗಳು ಮತ್ತು ಮನಮುಟ್ಟುವ ಕಥೆಗಳ ಮೂಲಕ ಮಹಾನಗರದ ದೃಷ್ಟಿಕೋನ ಮತ್ತು ಜನಜೀವನವನ್ನು ಸೆರೆ ಹಿಡಿಯಲಾಗಿದೆ.



ಮೈಸೂರು ಬುಕ್ ಕ್ಲಬ್ ವತಿಯಿಂದ ಶ್ರೀಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್ ಆವರಣದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಸಮಾರಂಭದಲ್ಲಿ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪ್ರಕಾಶನ ಸಂಸ್ಥೆ ಅಕಾಡೆಮಿ ನ್ಯೂಸ್ ಪೇಪರ್ಸ್ ಪ್ರೈವೇಟ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ನಿರ್ದೇಶಕರಾದ ರ್ಯಾಲಿ ಗಣಪತಿ (ಎಡದಿಂದ ಮೂರನೆಯವರು) ಅವರು 'ಬೆಂಗಳೂರಿಯನ್' ಪುಸ್ತಕವನ್ನು ಬಿಡುಗಡೆ ಮಾಡಿದರು. ಮೊದಲ ಪ್ರತಿ ಸ್ವೀಕರಿಸಿದ ಪ್ರಸಿದ್ಧ ಉದ್ಯಮಿ ಸಿದ್ ಮುಖರ್ಜಿ, ಮೈಸೂರು ಬುಕ್‌ಕ್ಲಬ್ ಸಂಸ್ಥಾಪಕ ಅಧ್ಯಕ್ಷರಾದ ಶುಭಾ ಸಂಜಯ್ ಅರಸ್, ಕಾವೇರಿ ಸಿನ್ಹಿ ಕಾತ್ಯಾ ಆಂಟೋನಿ, ಫರ್ರಾ ಗಿಲಾನಿ ಹಾಗೂ ಮೆಲಿಸ್ಸಾ ಪ್ಯಾರ್ಕರ್ಸ್ಟನ್ ಚಿತ್ರದಲ್ಲಿದ್ದಾರೆ.

ರಾಜಮನೆತನದವರು, ಕುಂಬಾರರು, ಟೈಲರ್‌ಗಳು, ಟೆಕ್ ಪ್ರವರ್ತಕರು, ಜೈವಿಕ ತಂತ್ರಜ್ಞಾನ ಶಾಸ್ತ್ರಜ್ಞರು ಸೇರಿದಂತೆ ಪ್ರತಿಯೊಂದು ನಗರದ ವೈವಿಧ್ಯತೆ ಕಾಣಬಹುದಾಗಿದೆ. ಸ್ಥಿತಿಸ್ಥಾಪಕತ್ವ ಮತ್ತು ಚೈತನ್ಯದ ಪ್ರತಿಬಿಂಬ ಹಾಗೂ ಬಹುಮುಖಿಯಾಗಿರುವ ಬೆಂಗಳೂರಿನ ಬಗ್ಗೆ ಒಂದು ನಿಕಟ ನೋಟವನ್ನು ಈ ಪುಸ್ತಕದಲ್ಲಿ ಕಾಣಬಹುದಾಗಿದೆ.

ಮೈಸೂರು ರಾಜಮನೆತನ ಸೇರಿದಂತೆ ವಿವಿಧ ರಾಜ ಕುಟುಂಬಗಳ ಬಗ್ಗೆ ಒಂದು ವಿಭಾಗದಲ್ಲಿ ವಿವರಿಸಲಾಗಿದೆ. ಭಾರತದಾದ್ಯಂತ ಇರುವ ಹಲವಾರು ರಾಜ ಕುಟುಂಬಗಳಿಗೆ ಬೆಂಗಳೂರು ಆದ್ಯತೆಯ ನೆಲೆಯಾಗಿದ್ದನ್ನು ಪುಸ್ತಕದಲ್ಲಿ ಉಲ್ಲೇಖಿಸಿರುವುದು ವಿಶೇಷವಾಗಿದೆ. ಜನಪ್ರಿಯ ರಾಜಕೀಯ ನಾಯಕರಾದ ಹೆಚ್. ಡಿ.ದೇವೇಗೌಡರು, ದಿವಂಗತ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರಂತಹ ಬೆಂಗಳೂರಿನ ಪ್ರಸಿದ್ಧ ವ್ಯಕ್ತಿಗಳು, ಮಾಹಿತಿ ತಂತ್ರಜ್ಞಾನದ ದಿಗ್ಗಜರಾದ ನಾರಾಯಣ ಮೂರ್ತಿ, ಕಿರಣ್ ಮಜುಂದಾರ್ ಶಾ ಅವರಂತಹ ಪ್ರಸಿದ್ಧ ಉದ್ಯಮಿಗಳು, ಶ್ರೀ ರವಿಶಂಕರ್ ಗುರೂಜಿ ಅವರಂತಹ ಆಧ್ಯಾತ್ಮಿಕ ಗುರುಗಳು ಸೇರಿದಂತೆ ಬದುಕಿನ ಬಂಡಿ ಮುನ್ನಡೆಸಲು ಸಣ್ಣಪುಟ್ಟ ಕೆಲಸ ಮಾಡುವವರ ಬಗ್ಗೆಯೂ ಪುಸ್ತಕದಲ್ಲಿ ದಾಖಲಿಸಲಾಗಿದೆ.

ಸೇವಾ ಕಾರ್ಯಗಳೊಂದಿಗೆ ಕೆ.ಮರೀಗೌಡ ಹುಟ್ಟುಹಬ್ಬ ಆಚರಣೆ


ಮುಡಾ ಮಾಜಿ ಅಧ್ಯಕ್ಷ ಕೆ. ಮರೀಗೌಡರನ್ನು ಅಭಿಮಾನಿಗಳು ಹುಟ್ಟುಹಬ್ಬದ ಅಂಗವಾಗಿ ಆತ್ಮೀಯವಾಗಿ ಅಭಿನಂದಿಸಿದರು

ಮೈಸೂರು, ಡಿ.20– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಕೆ. ಮರೀಗೌಡರ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು ವಿವಿಧ ಸೇವಾ ಕಾರ್ಯಕ್ರಮಗಳ ಮೂಲಕ ಆಚರಿಸಿದರು.

ಮರೀಗೌಡರು ಅಭಿಮಾನಿ ಗಳೊಂದಿಗೆ ಚಾಮುಂಡಿ ಬೆಟ್ಟಕ್ಕೆ ತೆರಳಿ ಚಾಮುಂಡೇಶ್ವರಿ ತಾಯಿಗೆ ವಿಶೇಷ ಪೂಜೆ ಸಲ್ಲಿಸಿದರು. ಗ್ರಾ.ಪಂ. ಮಾಜಿ ಅಧ್ಯಕ್ಷ ಭರತ್ ಕಾಳಯ್ಯ, ಮಹಾ ದೇವಸ್ವಾಮಿ ಹಾಗೂ ಅಭಿಮಾನಿಗಳು ಈ ವೇಳೆ ಅಭಿನಂದಿಸಿದರು. ನಂತರ ರಾಮಕೃಷ್ಣ ನಗರದ 58ನೇ ವಾರ್ಡಿನ ಮುಖಂಡ ಬಿ. ರವಿ ನೇತೃತ್ವದಲ್ಲಿ ಜೆಸಿಸ್ ಸ್ಪೋರ್ಟ್ಸ್ ಮೆಡಿಸನ್ ಸೆಂಟರ್ ಮತ್ತು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿದರು. ನಂತರ ರಮಾಬಾಯಿನಗರದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ನಾರಾಯಣ್ ನೇತೃತ್ವದಲ್ಲಿ ಶಾಲಾ ಮಕ್ಕಳಿಗೆ ನೋಟ್ ಪುಸ್ತಕ ವಿತರಿಸಿ, ಕೇಕ್ ಕತ್ತರಿಸಲಾಯಿತು.

ನಂತರ ಬಂಬೂ ಬಜಾರ್‌ನಲ್ಲಿರುವ ಅಂಧಮಕ್ಕಳ ಶಾಲೆಯಲ್ಲಿ ಸ್ವಾಮಿ ಮತ್ತು ಮಹಾದೇವ್ ನೇತೃತ್ವದಲ್ಲಿ ಊಟದ ವ್ಯವಸ್ಥೆಗೆ ಚಾಲನೆ ನೀಡಲಾಯಿತು. ಭರತ್ ನಗರ ಮತ್ತು ಟಿಪ್ಪು ನಗರದಲ್ಲಿ ಅಜ್ಮಲ್ ಮತ್ತು ಟಿಪ್ಪು ನೇತೃತ್ವದಲ್ಲಿ ಮರೀಗೌಡರಿಗೆ ಅಭಿನಂದನೆ ಸಲ್ಲಿಸಲಾಯಿತು. ನಂತರ ರಾಮಕೃಷ್ಣನಗರದಲ್ಲಿ ನಡೆದ ಸಮಾರಂಭದಲ್ಲಿ ನೂರಾರು ಅಭಿಮಾನಿಗಳು ಹೂವಿನ ಹಾರ ಹಾಕಿ, ಪಟಾಕಿ ಸಿಡಿಸಿ ಅಭಿನಂದನೆ ಸಲ್ಲಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ, ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ ದೂರವಾಣಿ ಮೂಲಕ ಮರೀಗೌಡರಿಗೆ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ರಾಜ್ಯ ಕುರುಬರ ಸಂಘ ಮಾಜಿ ಅಧ್ಯಕ್ಷ ಸುಬ್ರಮಣ್ಯ, ಬೋವಿ ನಿಗಮದ ಮಾಜಿ ಅಧ್ಯಕ್ಷ ಜಿ.ಬಿ. ಸೀತಾರಾಂ, ಹೆಚ್.ಡಿ. ಕೋಟೆ ಆನಂದ್, ಜಿ.ಪಂ. ಮಾಜಿ ಸದಸ್ಯ ಜವರಪ್ಪ, ಸಿಂಡಿಕೇಟ್ ಮಾಜಿ ಸದಸ್ಯ ಮಾರ್ಬಳ್ಳಿ ಕುಮಾರ್, ನಗರಪಾಲಿಕಾ ಮಾಜಿ ಸದಸ್ಯ ಬಿ.ಎಂ. ನಟರಾಜ್, ಹಿನ್‌ಕಲ್ ಹೊನ್ನಪ್ಪ, ಚಂದ್ರಶೇಖರ್, ಜೈಸ್ವಾಮಿ, ಎಫ್.ಎಂ. ಮಹೇಶ್, ಕೇರ್ಗಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಬಸವೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಬಿ. ಗುರುಸ್ವಾಮಿ, ಜೆ. ಸತೀಶ್ ಕುಮಾರ್, ನಾಡನಹಳ್ಳಿ ರವಿ, ಡಾ. ಜಗದೀಶ್, ಡಾ. ರೋಜಾ, ನವೀನ್‌ಕುಮಾರ್, ಅಕ್ಕಿಶಿವಣ್ಣ, ಧನಗಳ್ಳಿ ಬಸವರಾಜ್ ಹಾಜರಿದ್ದರು.


ಬಂಬೂ ಬಜಾರ್‌ನಲ್ಲಿರುವ ಅಂಧಮಕ್ಕಳ ಶಾಲೆಯಲ್ಲಿ ತಮ್ಮ ಹುಟ್ಟುಹಬ್ಬದ ಅಂಗವಾಗಿ ಮರಿಗೌಡರು ಮಕ್ಕಳಿಗೆ ಊಟ ಬಡಿಸಿದರು.

ಕ್ರೀಡೆಯಿಂದ ವ್ಯಕ್ತಿಯಲ್ಲಿ ಗುಣಾತ್ಮಕ ಬೆಳವಣಿಗೆ ಸಾಧ್ಯ

● ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಭಿಮತ ● ಅಖಿಲ ಭಾರತ ಅಂತರ ಕಾಲೇಜು ಬ್ಯಾಸ್ಕೆಟ್‌ಬಾಲ್ ಪಂದ್ಯಾವಳಿಗೆ ಚಾಲನೆ

ಮೈಸೂರು, ಡಿ.20(ಎಸ್‌ಬಿಡಿ)– ಕ್ರೀಡೆಯಿಂದ ಧನಾತ್ಮಕ ಬದಲಾವಣೆ ಸಾಧ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್. ಕೆ.ಲೋಕನಾಥ್ ಅಭಿಪ್ರಾಯಿಸಿದರು.

ಚಾಲೆಂಜರ್ಸ್ ಅಕಾಡೆಮಿ ಬ್ಯಾಸ್ಕೆಟ್ ಬಾಲ್ ಕ್ಲಬ್ ವತಿಯಿಂದ ನಗರದ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದ ನ್ಯಾಷನಲ್ ಸ್ಪೋರ್ಟ್ಸ್ ಕ್ಲಬ್ ಮೈದಾನದಲ್ಲಿ ಆಯೋಜಿಸಿರುವ ಮೂರು ದಿನಗಳ ಅಖಿಲ ಭಾರತ ಅಂತರ ಕಾಲೇಜು ಪುರುಷರ ಬ್ಯಾಸ್ಕೆಟ್‌ಬಾಲ್ ಪಂದ್ಯಾವಳಿಗೆ ಶುಕ್ರವಾರ ಚಾಲನೆ ನೀಡಿ, ಮಾತನಾಡಿದರು.

ಕ್ರೀಡೆ ಬಹಳ ಮುಖ್ಯ. ಒಬ್ಬ ವ್ಯಕ್ತಿಯಲ್ಲಿ ಗುಣಾತ್ಮಕ ಬದಲಾವಣೆ ಆಗಬೇಕಾದರೆ ಕ್ರೀಡೆಯಲ್ಲಿ ಭಾಗವಹಿಸಬೇಕು. ಕ್ರೀಡೆಯಿಂದ ದೈಹಿಕ ಸದೃಢತೆ ಮಾತ್ರವಲ್ಲ, ಸೃಜನಶೀಲತೆ, ಕ್ರಿಯಾಶೀಲತೆ, ಯೋಚನಾ ಲಹರಿ ಹೆಚ್ಚುತ್ತದೆ. ಅಥ್ಲೆಟ್, ಕ್ರಿಕೆಟ್ ಯಾವುದೇ ಕ್ರೀಡೆಯಾದರೂ ಭವಿಷ್ಯದಲ್ಲಿ ಅವಕಾಶಗಳನ್ನು ಕಲ್ಪಿಸಿಕೊಡುತ್ತವೆ. ಹಾಗಾಗಿ ಮಕ್ಕಳು ನಿತ್ಯ ಒಂದಿಲ್ಲೊಂದು ಕ್ರೀಡೆಯಲ್ಲಿ ಪಾಲ್ಗೊಳ್ಳುವ ಹವ್ಯಾಸ ರೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬ್ಯಾಸ್ಕೆಟ್‌ಬಾಲ್ ಬುದ್ದಿವಂತಿಕೆಯ ಕ್ರೀಡೆ. ನಾನು ಜಪಾನ್ ಹಾಗೂ ಅಮೆರಿಕಾದಲ್ಲಿದ್ದಾಗ ನಿತ್ಯ ಬ್ಯಾಸ್ಕೆಟ್‌ಬಾಲ್ ಅಭ್ಯಾಸವನ್ನು ನೋಡಿದ್ದೆ. ಆಗ ಈ ಕ್ರೀಡೆಯ ಬಗ್ಗೆ ಹೆಚ್ಚು ತಿಳಿದಿರಲಿಲ್ಲ. ಇತ್ತೀಚೆಗೆ ಅತ್ಯಂತ ಜನಪ್ರಿಯ ಕ್ರೀಡೆಯಾಗಿದೆ. ಸಾಕಷ್ಟು ಕ್ಲಬ್‌ಗಳು ಸೃಷ್ಟಿಯಾಗಿವೆ. ಮಕ್ಕಳು ಹಾಗೂ ಯುವ ಜನತೆ ಸೂಕ್ತ ತರಬೇತಿಯೊಂದಿಗೆ ಕ್ರೀಡೆಯಲ್ಲಿ ಸಾಧನೆ ಮಾಡಲು ಅವಕಾಶವಿದೆ. ಈ ರೀತಿಯ ಕ್ರೀಡಾ ಪಂದ್ಯಾವಳಿಗಳು ಮೈಸೂರಿನಲ್ಲಿ ಹೆಚ್ಚು ನಡೆಯಬೇಕು. ಇದರಿಂದ ಸ್ಥಳೀಯ ಆಸಕ್ತರಿಗೆ ಪ್ರೇರಣೆ ಜೊತೆಗೆ ಅವಕಾಶವೂ ಸಿಗಲಿದೆ ಎಂದು ತಿಳಿಸಿದರು.

ಕಾವೇರಿ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ.ಜಿ. ಆರ್.ಚಂದ್ರಶೇಖರ್ ಮಾತನಾಡಿ, ಸದೃಢ ದೇಹದಲ್ಲಿ ಸದೃಢ ಮನಸ್ಸು ನೆಲೆಸಿರುತ್ತದೆ ಎಂಬ ಮಾತಿದೆ. ಇದನ್ನು ಸಾಧಿಸಲು ಕ್ರೀಡೆ ಪ್ರಮುಖ ಮಾರ್ಗ. ಕ್ರೀಡೆಯಲ್ಲಿ ಭಾಗವಹಿಸುವುದರಿಂದ ಯಾವಾಗಲೂ ಧನಾತ್ಮಕ ಚಿಂತನೆ ಇರುತ್ತದೆ. ಕ್ರೀಡಾಪಟುಗಳಲ್ಲಿ ಲಾವಣ್ಯ ಕಾಣಬಹುದು. ಅವರು ರಾಷ್ಟ್ರದ ಸದೃಢ ಪ್ರಜೆಗಳಾಗಿರುತ್ತಾರೆ. ಕ್ರೀಡೆಯ ಬೆಳವಣಿಗೆಗೆ ಇಂತಹ ಪಂದ್ಯಾವಳಿಗಳು ಸಹಕಾರಿಯಾಗುತ್ತವೆ. ಆದರೆ ಆಯೋಜನೆ ಸುಲಭ ಸಾಧ್ಯವಲ್ಲ. ಆದರೆ ಬ್ಯಾಸ್ಕೆಟ್‌ಬಾಲ್ ಪಂದ್ಯಾವಳಿಯಲ್ಲಿ ವಿವಿಧೆಡೆಯ 18 ತಂಡಗಳನ್ನು ಒಗ್ಗೂಡಿಸಿರುವುದು ಶ್ಲಾಘನೀಯ ಎಂದರು.

ಇದೇ ವೇಳೆ ಬ್ಯಾಸ್ಕೆಟ್‌ಬಾಲ್ ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡಿರುವ ಮೈಸೂರಿನ ಯುವ ಕ್ರೀಡಾಪಟುಗಳಾದ ಶ್ರಾವಣಿ, ಸುಮನ್ ಹಾಗೂ ರೋನಕ್ ಅವರನ್ನು ಗಣ್ಯರು ಅಭಿನಂದಿಸಿದರು. ಹರಿ ವಿದ್ಯಾಲಯದ ಕಾರ್ಯದರ್ಶಿ ಹೆಚ್.ಆರ್.ಭಗವಾನ್, ದಕ್ಷಾ ಕಾಲೇಜ್ ಆಫ್ ಮ್ಯಾನೇಜ್ಮೆಂಟ್‌ನ ನಿರ್ದೇಶಕ ಪಿ.ಹರೀಶ್, ಕನ್ನಡ ಪರ ಹೋರಾಟಗಾರ ರವಿಶಂಕರ್, ಮೈಸೂರು ಜಿಲ್ಲಾ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ಅಧ್ಯಕ್ಷ ಎಂ.ವಿ.ಶ್ರೀನಿವಾಸ್, ಚಾಲೆಂಜರ್ಸ್ ಅಕಾಡೆಮಿಯ ಡಾ.ಕಾಂತರಾಜು, ಶಂಕರೇಗೌಡ, ಚಾಲೆಂಜರ್ಸ್ ಕಪ್ ಸಂಘಟನಾ ಸಮಿತಿ ಬ್ರಿಜೇಶ್ ಪಟೇಲ್ ಇನ್ನಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.


ಮೈಸೂರು ವಿವಿ ಕುಲಪತಿ ಪ್ರೊ.ಎನ್. ಕೆ.ಲೋಕನಾಥ್ ಅವರು ಚಾಲೆಂಜರ್ಸ್ ಕಪ್ ಬ್ಯಾಸ್ಕೆಟ್ ಬಾಲ್ ಪಂದ್ಯಾವಳಿಯನ್ನು ಉದ್ಘಾಟಿಸಿದರು. ಕಾವೇರಿ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಮೈಸೂರು ಫಾರಂ ಹೌಸ್‌ನಲ್ಲಿ ನಟ ದರ್ಶನ್

ಮೈಸೂರು, ಡಿ.20(ಆರ್‌ಕೆ)– ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ಬಂಧಿತನಾಗಿ ಇತ್ತೀಚಿಗಷ್ಟೇ ಬಿಡುಗಡೆಯಾಗಿರುವ ನಟ ದರ್ಶನ್ ಶುಕ್ರವಾರ ಮೈಸೂರು–ತಿ.ನರಸೀಪುರ ರಸ್ತೆಯಲ್ಲಿರುವ ತೋಟದ ಮನೆಗೆ ಆಗಮಿಸಿದ್ದಾರೆ.

ಬೆಂಗಳೂರಿನ 57ನೇ ಸಿಟಿ ಸಿವಿಲ್ ಕೋರ್ಟ್, ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ತಾಯಿ ಮನೆಗೆ ಭೇಟಿ, ಅಪೋಲೋ ಬಿಜಿಎಸ್ ಆಸ್ಪತ್ರೆಯಲ್ಲಿ ಆರೋಗ್ಯ ತಪಾಸಣೆ ಹಾಗೂ ತಿ.ನರಸೀಪುರ ರಸ್ತೆಯ ಫಾರಂ ಹೌಸ್‌ಗೆ ತೆರಳಲು ದರ್ಶನ್‌ಗೆ ಅನುಮತಿ ನೀಡಿದ ಹಿನ್ನೆಲೆಯಲ್ಲಿ ಬೆಂಗಳೂರಿನಿಂದ ಶುಕ್ರವಾರ ಮಧ್ಯಾಹ್ನ 3 ಗಂಟೆ ಸುಮಾರಿಗೆ ಸಂಬಂಧಿ ಚಂದನ ಜೊತೆ ಆಗಮಿಸಿದ್ದು, ದರ್ಶನ್ ಪತ್ನಿ ವಿಜಯಲಕ್ಷ್ಮಿ ಹಾಗೂ ಪುತ್ರ ವಿನೀಶ್ ಜೊತೆಯಲ್ಲಿದ್ದರು ಎಂದು ತಿಳಿದುಬಂದಿದೆ. ನಂತರ ದರ್ಶನ್ ತಾಯಿ ಮೀನಾ ತೂಗುದೀಪ ಅವರು ಪುತ್ರಿಯೊಂದಿಗೆ ಫಾರಂ ಹೌಸ್‌ಗೆ ತೆರಳಿದ್ದಾರೆ. ನಟ ದನ್ವೀರ್ ಕೂಡ ಫಾರಂ ಹೌಸ್‌ನಲ್ಲಿದ್ದಾರೆ.

ದರ್ಶನ್ ಆಗಮಿಸಿದಾಗ ಫಾರಂ ಹೌಸ್ ನೌಕರರು ಕುಂಕುಮದಾರತಿ ಎತ್ತಿ, ಬೂದ ಕುಂಬಳಕಾಯಿ ಒಡೆದು, ತಿಲಕವಿಟ್ಟು ಬರಮಾಡಿಕೊಂಡರು. ಯಾರೂ ಫಾರಂಹೌಸ್‌ನೊಳಗೆ ಹೋಗದಂತೆ ಗೇಟ್‌ಗೆ ಬೀಗ ಹಾಕಿ ಭದ್ರಪಡಿಸಲಾಗಿದೆ. ಹೊರಗಿನಿಂದ ಕ್ಯಾಮರಾ ಕಣ್ಣಿಗೆ ಬೀಳದಂತೆ ಟಾರ್ಪಲ್ ಅಳವಡಿಸಲಾಗಿದೆ. ಅಲ್ಲದೆ ಭದ್ರತಾ ಸಿಬ್ಬಂದಿಯೂ ಗೇಟ್ ಬಳಿ ಕಾವಲಿದ್ದಾರೆ. ಎಲ್ಲೆಡೆ ಸಿಸಿ ಕ್ಯಾಮರಾ ಅಳವಡಿಸಿರುವುದರಿಂದ ಗೇಟ್ ಬಳಿ ಯಾರೇ ಹೋದರೂ ಫಾರಂ ಹೌಸ್ ಸಿಬ್ಬಂದಿ ಹೊರಗೆ ಬಂದು ವಾಪಸ್ ಕಳುಹಿಸುತ್ತಿದ್ದಾರೆ. ಆಪ್ತರು, ಸಂಬಂಧಿಕರನ್ನು ಹೊರತುಪಡಿಸಿ ಮತ್ಯಾರೂ ಒಳಗೆ ನುಸುಳದಂತೆ ಕಟ್ಟೆಚ್ಚರ ವಹಿಸಲಾಗಿದೆ.

ಒಟ್ಟಾರೆ ಐದಾರು ತಿಂಗಳಿಂದ ಜೈಲು ಹಾಗೂ ಆಸ್ಪತ್ರೆಯಲ್ಲಿದ್ದ ದರ್ಶನ್‌ಗೆ ಮುಂದಿನ ಜನವರಿ 5ರವರೆಗೆ ಮೈಸೂರಿನಲ್ಲಿರಲು ಅವಕಾಶ ನೀಡಿದ್ದು, ಸದ್ಯ ಕುಟುಂಬದವರು, ಅತ್ಯಾಪ್ತರೊಂದಿಗೆ ಫಾರಂಹೌಸ್‌ನಲ್ಲಿ ಕಾಲಕಳೆಯುತ್ತಿದ್ದಾರೆ.



87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ವರ್ಣರಂಜಿತ ಆರಂಭ

ಕನ್ನಡ ಭಾಷೆ ಕಾಪಾಡಿ, ಪೋಷಿಸಲು ಸಂಶೋಧನೆಗಳು ಅಗತ್ಯ

ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ ಅಭಿಪ್ರಾಯ



ಮಂಡ್ಯದಲ್ಲಿ ಶುಕ್ರವಾರದಿಂದ ಆರಂಭವಾದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಮೆರವಣಿಗೆಗೆ ನಗಾರಿ ಬಾರಿಸುವ ಮೂಲಕ ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ ಅವರು ಚಾಲನೆ ನೀಡಿದರು.



87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿರುವ ಅಪಾರ ಸಂಖ್ಯೆಯ ಕನ್ನಡಾಭಿಮಾನಿಗಳು ಮತ್ತು ಸಾರ್ವಜನಿಕರು.

ಮಂಡ್ಯ, ಡಿ.20– ಕನ್ನಡ ಭಾಷೆ ಕಾಪಾಡುವ, ಪೋಷಿಸುವ ಸಲುವಾಗಿ ನಿರಾತಂಕವಾಗಿ ಸಂಶೋಧನೆ ನಡೆಯುವಂತೆ ನೋಡಿಕೊಳ್ಳುವ ನೈತಿಕ ಜವಾಬ್ದಾರಿ ಕರ್ನಾಟಕ ಸರ್ಕಾರಕ್ಕಿರಬೇಕು. ಇದೇ ಮಾತುಗಳು ಜಾನಪದಕ್ಕೆ ಮೀಸಲಾದ ಮತ್ತು ವಿಶ್ವದಲ್ಲೇ ಮೊದಲೆನಿಸಿರುವ ನಮ್ಮ ಜಾನಪದ ವಿಶ್ವವಿದ್ಯಾಲಯಕ್ಕೂ ಅನ್ವಯಿಸುತ್ತವೆ ಎಂದು 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ ಅಭಿಪ್ರಾಯಪಟ್ಟಿದ್ದಾರೆ.

ಶುಕ್ರವಾರ ವರ್ಣರಂಜಿತವಾಗಿ ಆರಂಭವಾದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರ ಭಾಷಣ ಮಾಡಿದ ಅವರು, ಗ್ರಾಮೀಣರು ಮತ್ತು ಗುಡ್ಡಗಾಡಿನ ಜನರ ಬದುಕಿಗೆ ನೇರವಾಗಿ ಸಂಬಂಧವಿರುವ ಜಾನಪದ ವಿಶ್ವವಿದ್ಯಾಲಯದ ಸ್ಥಿತಿಯೂ ಚಿಂತಾಜನಕವಾಗಿದೆ. ಆದ್ದರಿಂದ ಹೆಚ್ಚಿನ ಶಾಶ್ವತ ಅನುದಾನ ಮತ್ತು ಅದು ಸಕಾಲಕ್ಕೆ ಒದಗುವುದು ಎರಡೂ ಬಹಳ ಮುಖ್ಯ. ಈ ಕುರಿತು ನಮ್ಮ ಶಾಸಕರೆಲ್ಲರೂ ದನಿ ಎತ್ತಬೇಕು ಎಂದು ಸಕಲ ಕನ್ನಡಿಗರೆಲ್ಲರ ಪರವಾಗಿ ಈ ವೇದಿಕೆಯಿಂದ ಮನವಿ ಮಾಡುತ್ತೇನೆ ಎಂದರು.

ಈ ಎರಡು ವಿಶ್ವವಿದ್ಯಾಲಯಗಳಂತೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ನೃತ್ಯ ವಿಶ್ವವಿದ್ಯಾನಿಲಯ ಇವೆಲ್ಲವೂ ಕನ್ನಡ ನಾಡಿನ ಅಮೂಲ್ಯ ಸಂಸ್ಕೃತಿ ಕೇಂದ್ರಗಳು ಎಂದು ಪರಿಭಾವಿಸಬೇಕು ಎಂದು ಹೇಳಿದರು.

ಕರ್ನಾಟಕದ ಸಾಂಸ್ಕೃತಿಕ ನಾಯಕ: ಸಮಾನತೆಯ ಹರಿಕಾರ, ಬಸವಣ್ಣನವರನ್ನು 'ಕರ್ನಾಟಕದ ಸಾಂಸ್ಕೃತಿಕ ನಾಯಕ' ಎಂದು ದಿಟ್ಟತನದಿಂದ ಘೋಷಿಸಿದ ಕರ್ನಾಟಕ ಸರ್ಕಾರವನ್ನು, ವಿಶೇಷವಾಗಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರನ್ನು ತುಂಬು ಹೃದಯದಿಂದ, ಸಮಸ್ತ ಕರ್ನಾಟಕಸ್ಥರ ಪರವಾಗಿ ನಾನು ಅಭಿನಂದಿಸುತ್ತೇನೆ. ಇದರಲ್ಲಿ ರಾಜಕೀಯವನ್ನು ಕಾಣುವುದು ಸರಿಯಲ್ಲ. ಬಸವಣ್ಣನವರು ಯಾವುದೋ ಒಂದು ಸಮಾಜದ, ಯಾವುದೋ ಒಂದು ಪ್ರದೇಶದ ಪ್ರತಿನಿಧಿಯಲ್ಲ. "ಸಾಂಸ್ಕೃತಿಕ ನಾಯಕ" ಎನ್ನುವುದು ಬಸವಣ್ಣ ಪ್ರತಿಪಾದಿಸಿದ, ಮಾನವೀಯತೆ ಮತ್ತು ಸಮಾನತೆಯ ಘೋಷಣೆಯಾಗಿದೆ; 'ಎಲ್ಲರನ್ನು ಒಳಗೊಳ್ಳುವುದು', 'ಸಮಾಜದ ಅಂಚಿನಲ್ಲಿದ್ದವರನ್ನು ಮುಖ್ಯವಾಹಿನಿಗೆ ಕರೆದುಕೊಳ್ಳುವುದು, 'ಕಾಯಕ ದುಡಿಮೆ'ಯೋ ದೇವರೆಂದು ತಿಳಿಯುವುದು, ಶಿವಶರಣರ ಶಿವಶರಣೆಯರ ಆದರ್ಶಗಳಿಗೆ ನೀಡುವ ಮನ್ನಣೆಯಾಗಿದೆ. ಎಲ್ಲಿಯವರೆಗೆ ನಾವು, ಕರ್ನಾಟಕಸ್ಥರು ತಾರತಮ್ಯ ರಹಿತವಾದ, ಸಮಾನತೆಯಿಂದ ಕೂಡಿದ, ಮಾದಾರ ಚೆನ್ನಯ್ಯನ ಸಂಕುಲಕ್ಕೆ ಸಮಾನ ಸ್ಥಾನಮಾನ ನೀಡುವುದಿಲ್ಲವೋ ಅಲ್ಲಿಯವರೆಗೆ 'ಸಾಂಸ್ಕೃತಿಕ ನಾಯಕ' ಎನ್ನುವುದು ಬರೀ ಘೋಷಣೆಯಾಗುತ್ತದೆ. ಈ ಸಮ್ಮೇಳನದ ಮೂಲಕ ನಾವು ನಮ್ಮ ಸಂವಿಧಾನವು ನೀಡಿರುವ "ಸ್ವಾತಂತ್ರ್ಯ, ಸಮಾನತೆ, ಸೌಹಾರ್ದತೆ, ಸಹೋದರತ್ವ" ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು.

ಭಾರತದಲ್ಲಿ ಜನಸಂಖ್ಯೆಯ ಬೆಳವಣಿಗೆಯನ್ನು ತೀವ್ರಗತಿಯಲ್ಲಿ ನಿಯಂತ್ರಿಸಿರುವ ರಾಜ್ಯ ಕರ್ನಾಟಕ ರಾಜ್ಯದಲ್ಲಿ ಜನಸಂಖ್ಯೆಯು ಸಮಸ್ಯೆಯಾಗಿ ಉಳಿದಿಲ್ಲ. ಯಾವುದನ್ನು ಫಲವತ್ತತೆಯ ದರ ಎನ್ನುತ್ತೇವೆಯೋ ಅದು ಕನಿಷ್ಟಮಟ್ಟಕ್ಕಿಳಿದಿದೆ. ಆದರೆ ಅನೇಕ ಕಾರಣಗಳಿಂದ ನಮ್ಮ ಕನ್ನಡಿಗರಿಗೆ ಉದ್ಯೋಗದ ಅವಕಾಶಗಳು ಹೆಚ್ಚು ದೊರೆಯುತ್ತಿಲ್ಲ. ನಿರುದ್ಯೋಗವು ನಮ್ಮ ಯುವಜನತೆಯ ಬದುಕನ್ನು ದುರ್ಭರಗೊಳಿಸುತ್ತಿದೆ. ಇಂದು ನಮ್ಮ ಜನಸಂಖ್ಯೆಯಲ್ಲಿ ಯುವಜನತೆಯ ಪ್ರಮಾಣ ಅಧಿಕವಾಗಿದೆ. ಈ ಬಗ್ಗೆ 1986ರ ಶ್ರೀಮತಿ ಸರೋಜಿನಿ ಮಹಿಷಿ ಸಮಿತಿ ವರದಿಯಲ್ಲಿ ಕನ್ನಡಿಗರಿಗೆ ಉದ್ಯೋಗವನ್ನು ಮೀಸಲಿಡುವ ಶಿಫಾರಸ್ಸುಗಳನ್ನು ಮಾಡಿತ್ತು. ಗ್ರೂಪ್ 'ಸಿ' ಮತ್ತು 'ಡಿ' ವರ್ಗಗಳಲ್ಲಿ ಕನ್ನಡಿಗರಿಗೆ ಶೇ. 80 ರಷ್ಟು ಉದ್ಯೋಗವನ್ನು ಮೀಸಲಿಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡಿತ್ತು. ಸಾರ್ವಜನಿಕ ವಲಯವಲ್ಲದೆ ಖಾಸಗಿ ವಲಯದಲ್ಲಿಯೂ ಕನ್ನಡಿಗರಿಗೆ ಉದ್ಯೋಗವನ್ನು ಮೀಸಲಿಡುವ ಬಗ್ಗೆ ಅದು ಶಿಫಾರಸ್ಸು ಮಾಡಿತ್ತು. ಆದರೆ ಆ ವರದಿ ಇನ್ನೂ ಅನುಷ್ಠಾನಗೊಂಡಿಲ್ಲ ಎಂದರು.

ಸರ್ಕಾರವು ಸರೋಜಿನಿ ಮಹಿಷಿ ಸಮಿತಿ ವರದಿಯನ್ನು ಕೂಡಲೇ ಅನುಷ್ಠಾನಗೊಳಿಸಬೇಕು. ಕರ್ನಾಟಕದಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲಿಡುವುದು ಸಂವಿಧಾನ ಅಥವಾ ಒಕ್ಕೂಟ ತತ್ವಕ್ಕೆ ವಿರೋಧಿ ಕ್ರಮವೇನಲ್ಲ. ಖಾಸಗಿ ವಲಯದ ಉದ್ದಿಮೆಗಳು ಕರ್ನಾಟಕದ ಭೂಮಿ, ನೀರು, ಗಾಳಿ, ವಿದ್ಯುತ್ ಬಳಸಿಕೊಂಡು ಸಮೃದ್ಧವಾಗಿ ಬೆಳೆಯುತ್ತಿವೆ ಅಪಾರ ಲಾಭ ಗಳಿಸುತ್ತಿವೆ. ಅವುಗಳ ಹಿತದೃಷ್ಟಿಯಿಂದಲೂ ಖಾಸಗಿ ವಲಯದಲ್ಲಿ ಅನಿವಾರ್ಯವೆನಿಸಿದ ವಿಶೇಷ ಉನ್ನತ ಹುದ್ದೆಗಳನ್ನು ಹೊರತುಪಡಿಸಿ ಉಳಿದಂತೆ ಕನ್ನಡಿಗರಿಗೆ ಉದ್ಯೋಗವನ್ನು ಮೀಸಲಿಡುವ ಬಗ್ಗೆ ಸರ್ಕಾರ ಹಿಂಜರಿಯಕೂಡದು ಎಂದು ನಾನು ಕನ್ನಡಿಗರ ಪರವಾಗಿ ಒತ್ತಾಯಿಸುತ್ತೇನೆ. ಇಲ್ಲದಿದ್ದರೆ ನಮ್ಮ ಯುವಜನತೆಯು ಬಂಡೇಳುವ ಸಾಧ್ಯತೆಯಿದೆ. ಕನ್ನಡದ ಯುವಜನ ನಮ್ಮ ರಾಜ್ಯದಲ್ಲದೆ ಬೇರೆಲ್ಲಿ ಉದ್ಯೋಗಕ್ಕಾಗಿ ಬೇಡಿಕೆ ಸಲ್ಲಿಸುವುದು ಸಾಧ್ಯ ಎಂದು ಪ್ರಶ್ನಿಸಿದರು.





> ಇಂದು ರಾಜಧಾನಿ ಬೆಂಗಳೂರು ಉತ್ತರ ಭಾರತದಿಂದ ವಲಸೆ ಬರುವ ಕಾರ್ಮಿಕರಿಂದ ತುಂಬಿ ಹೋಗಿದೆ. ಇದಲ್ಲದೆ ಕೇಂದ್ರ ಸರ್ಕಾರದ ಹಿಂದಿ ಭಾಷೆಯನ್ನು ಹೇರುವ ನೀತಿಯಿಂದಾಗಿ ಬ್ಯಾಂಕುಗಳಲ್ಲಿ ಮತ್ತು ಅಂಚೆ ಕಚೇರಿಗಳಲ್ಲಿ ಹಿಂದಿ ಭಾಷಿಕರು ತುಂಬಿ ಹೋಗಿದ್ದಾರೆ. ಕೇಂದ್ರ ಸರ್ಕಾರವು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹಿಂದಿಗೆ ಪ್ರಾಶಸ್ತ್ಯವನ್ನು ನೀಡುತ್ತಾ ಕನ್ನಡವನ್ನು ನಿರ್ಲಕ್ಷ್ಯ ಮಾಡುತ್ತಿದೆ. ಇದರಿಂದ ಕನ್ನಡಿಗರಿಗೆ ಉದ್ಯೋಗದ ಅವಕಾಶಗಳು ಇಲ್ಲವಾಗುತ್ತಿವೆ. –ಗೊರುಚ

ಸಮ್ಮೇಳನದಲ್ಲಿ ರುಚಿಯಾದ ಉತ್ತರ ಕರ್ನಾಟಕದ ಊಟ



ಸಮ್ಮೇಳನದ ಮತ್ತೊಂದು ವೈಶಿಷ್ಟ್ಯಪೂರ್ಣವೆಂದರೆ ಅದು ಊಟ. ಸಮ್ಮೇಳನದಲ್ಲಿ ಬೆಳಗ್ಗೆ 10 ಸಾವಿರ ಮಂದಿಗೆ ರುಚಿ ರುಚಿಯಾದ ತಿಂಡಿ, ಮಧ್ಯಾಹ್ನ 1 ಲಕ್ಷ ಮಂದಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. 70 ಸಾವಿರಕ್ಕೂ ಅಧಿಕ ಮಂದಿ ಭೂರಿ ಭೋಜನ ಸವಿದರು.

ಬೆಳಗ್ಗೆ ತಿಂಡಿಗೆ ಇಡ್ಲಿ, ಉಪ್ಪಿಟ್ಟು, ಉದ್ದಿನ ವಡೆ, ಚಟ್ನಿ, ಸಾಂಬಾರ್, ಮೈಸೂರು ಪಾಕ್, ಕಾಫಿ ವ್ಯವಸ್ಥೆ ಮಾಡಿದ್ದರೆ, ಮಧ್ಯಾಹ್ನ ಉತ್ತರ ಕರ್ನಾಟಕದ ಜೋಳದ ರೊಟ್ಟಿ, ಬದನೆಕಾಯಿ ಎಣ್ಣೆಗಾಯಿ, ಮುದ್ದೆ, ಕಾಳು ಸಾರು, ಕಾಯಿ ಹೋಳಿಗೆ, ಬೀನಿಸ್ ಪಲ್ಯ, ಹೆಸರುಬೇಳೆ, ಹಲ್ವ, ವೆಜ್ ಪಲಾವ್, ಅನ್ನ, ಸಾಂಬಾರು, ಫ್ರೂಟ್ ಸಾಲಾಡ್, ಬೀಡಾ ವ್ಯವಸ್ಥೆ ಮಾಡಲಾಗಿತ್ತು. ಉತ್ತಮ ರೀತಿಯಲ್ಲಿ ಪಾರ್ಕಿಂಗ್ ವ್ಯವಸ್ಥೆ, ಜನರಿಗೆ ಮೂಲಸೌಕರ್ಯ, ಕುಡಿಯುವ ನೀರು, ಶೌಚಾಲಯ, ಸಾರಿಗೆ ವ್ಯವಸ್ಥೆ ಮಾಡಲಾಗಿತ್ತು. 3500 ಮಂದಿ ಪೊಲೀಸರನ್ನು ಭದ್ರತೆಗಾಗಿ ನಿಯೋಜಿಸಿದ್ದರೆ, ಸಿಸಿ ಕ್ಯಾಮೆರಾ ಅಳವಡಿಸಲಾಗಿತ್ತು.



ಮೆರವಣಿಗೆಯಲ್ಲಿ ಕಳಸಹೊತ್ತು ಗಮನ ಸೆಳೆದ ಮಹಿಳೆಯರು.

ಗಮನ ಸೆಳೆದ ಪುಸ್ತಕ ಮಳಿಗೆಗಳು



ಸಾಹಿತ್ಯ ಸಮ್ಮೇಳನದಲ್ಲಿ ಪುಸ್ತಕ ಮಳಿಗೆ ತೆರೆದಿರುವುದು.

ಮಂಡ್ಯ, ಡಿ.20– ಸಾಹಿತ್ಯ ಸಮ್ಮೇಳನ ಎಂದರೆ ಅದರ ಪ್ರಮುಖ ಆಕರ್ಷಣೆಯೇ ಪುಸ್ತಕ ಮೇಳ ಈ ಬಾರಿ ಒಟ್ಟು 4 ಷಡ್‌ಗಳಲ್ಲಿ ಬರೋಬ್ಬರಿ 450 ಪುಸ್ತಕ ಮಳಿಗೆಗಳನ್ನು ಹಾಕಲಾಗಿತ್ತು. ಎಲ್ಲಾ ಪುಸ್ತಕ ಮಳಿಗೆಗಳು ಜನರಿಂದ ತುಂಬಿ ತುಳುಕುತ್ತಿತ್ತು. ಪ್ರಧಾನ ವೇದಿಕೆಯ ಎಡಭಾಗದಲ್ಲಿ ಬೃಹತ್ ಜರ್ಮನ್ ಟೆಂಟ್‌ನಿಂದ ನಾಲ್ಕು ಶೆಡ್‌ಗಳನ್ನು ತೆರೆದು ಪುಸ್ತಕ ಮೇಳ ವನ್ನು ಆಯೋಜಿಸಲಾಗಿತ್ತು. 450 ಮಳಿಗೆ ಗಳ ಪೈಕಿ ಪ್ರತಿ ಮಳಿಗೆಯಲ್ಲೂ ಕನಿಷ್ಟ 50 ವಿಧದ ಪುಸ್ತಕಗಳು ಮಾರಾಟಕ್ಕೆ ಸಿದ್ಧವಿದ್ದವು. ರಾಜ್ಯದ ಮೂಲೆ ಮೂಲೆಯಿಂದ ಆಗಮಿಸಿದ್ದ ಸಾವಿರಾರು ಕನ್ನಡಾಭಿ ಮಾನಿಗಳು ಮಳಿಗೆಗೆ ದಾಂಗುಡಿ ಇಟ್ಟು ಪುಸ್ತಕಗಳನ್ನು ಖರೀದಿಸುತ್ತಿದ್ದ ದೃಶ್ಯ ಕಂಡು ಬಂತು.


ಆದಿಕವಿ ಪಂಪನ ಕಾಲದ ಪುಸ್ತಕ, ಭಗವದ್ಗೀತೆ, ರಾಮಾಯಣದಿಂದ ಹಿಡಿದು ಇಂದಿನ ಯುವ ಸಾಹಿತಿಗಳು ರಚಿಸಿರುವ ಪುಸ್ತಕದವರೆಗೆ ಸಮ್ಮೇಳನದ ಪುಸ್ತಕ ಮೇಳದಲ್ಲಿ ಮಾರಾಟಕ್ಕೆ ಲಭ್ಯವಿತ್ತು. ಕೆಲ ಪುಸ್ತಕಗಳನ್ನು ಶೇ.50 ರಷ್ಟು ರಿಯಾಯ್ತಿ ದರದಲ್ಲಿ ಮಾರಾಟಕ್ಕೆ ಇಡಲಾಗಿತ್ತು. ಜೊತೆಗೆ ಇಂಗ್ಲೀಷ್ ಸೇರಿದಂತೆ ಹಲವು ಭಾಷೆಗಳಿಂದ ಅನುವಾದವಾಗಿರುವ ಪುಸ್ತಕಗಳು ಸಹ ಮಾರಾಟಕ್ಕಿದ್ದವು.

ಪಾಂಡವಪುರದ ಪುಸ್ತಕಮನೆಯ ಅಂಕೇಗೌಡರ ಮಳಿಗೆಯಲ್ಲೂ 50ಕ್ಕೂ ಹೆಚ್ಚು ಪುಸ್ತಕಗಳು ಮಾರಾಟಕ್ಕಿದ್ದವು. ಈ ಬಗ್ಗೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಸಾಹಿತ್ಯಾಸಕ್ತರು ಬಹಳ ಖುಷಿಯಿಂದ ಪುಸ್ತಕ ಖರೀದಿ ಮಾಡುತ್ತಿದ್ದು, ಕನ್ನಡ ಪುಸ್ತಕಗಳು ಮಾರಾಟವಾದರೆ ಕನ್ನಡದ ಕಂಪು ಪಸರಿಸಿದಂತೆ ಆಗುತ್ತದೆ ಎಂದರು.

ಇದರ ಜೊತೆಗೆ ನೂರಕ್ಕೂ ಹೆಚ್ಚು ವಾಣಿಜ್ಯ ಮಳಿಗೆಗಳನ್ನು ತೆರೆಯಲಾಗಿತ್ತು. ವಿವಿಧ ತಿಂಡಿ ತಿನಿಸುಗಳು, ಮನೆ ವಸ್ತುಗಳು ಸೇರಿದಂತೆ ವಿವಿಧ ಬಗೆಯ ವಸ್ತುಗಳು ಮಾರಾಟಕ್ಕೆ ಲಭ್ಯವಿದ್ದವು.

ಅದ್ದೂರಿ ಮೆರವಣಿಗೆಯಲ್ಲಿ ವೇದಿಕೆಗೆ ಬಂದ ಸರ್ವಾಧ್ಯಕ್ಷರು

ಮಂಡ್ಯ, ಡಿ.20– ಸಮ್ಮೇಳನದ ಸರ್ವಾಧ್ಯಕ್ಷರ ಮೆರವಣಿಗೆಗೆ ಆದಿಚುಂಚನಗಿರಿ ಮಠಾಧೀಶ ನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ ನೀಡಿದರು. ರಾಜಮಾತೆ ಪ್ರಮೋದಾದೇವಿ ಒಡೆಯರ್ ಆಗಮಿಸಬೇಕಿತ್ತಾದರೂ ಅವರ ಅನುಪಸ್ಥಿತಿಯಲ್ಲಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ಅದ್ದೂರಿ ರಥದಲ್ಲಿ ಆಸೀನರಾಗಿದ್ದ ಸಮ್ಮೇಳನಾಧ್ಯಕ್ಷ ಗೊ.ರು.ಚ. ಅವರನ್ನು ಸರ್‌ಎಂವಿ ಪ್ರತಿಮೆ ಬಳಿಯಿಂದ ಪ್ರಧಾನ ವೇದಿಕೆವರೆಗೂ ಅದ್ದೂರಿ ಮೆರವಣಿಗೆಯಲ್ಲಿ ಕರೆತರಲಾಯಿತು.



ಈ ಸಂದರ್ಭದಲ್ಲಿ ನಂದಿಧ್ವಜ, ಚಕ್ಕಡಿಗಾಡಿ, ಕೊಂಬುಕಹಳೆ, ನಾದಸ್ವರ, ಸ್ತಬ್ಧಚಿತ್ರ, ವೀರಗಾಸೆ, ತಮಟೆ, ಕಂಸಾಳೆ, ಮಹಿಳಾ ವೀರಗಾಸೆ, ಕೀಲುಕುದುರೆ, ಜಗ್ಗಲಿಗೆ ಮೇಳ, ಪೂರ್ಣಕುಂಭ, ನಗಾರಿ, ಛತ್ರಿ–ಚಾಮರ, ಲಿಡ್ಕರ್ ಸ್ತಬ್ಧಚಿತ್ರ, ಜನಪದ ತಂಡ, ಭಾಗವಂತಿಕೆ, ಹಗಲು ವೇಷ, ಅರೆವಾದ್ಯ, ಪೆಟ್ಟಿಗೆ ಮಾರಮ್ಮ, ಕೋಲಾಟ, ಗಾರುಡಿಗೊಂಬೆ, ಕರಗ, ಚಿಲಿಪಿಲಿ ಗೊಂಬೆ, ದಾಸಪ್ಪ ಜೋಗಪ್ಪ, ಬೆಂಕಿಭರಾಟೆ, ದೊಣ್ಣೆ ವರಸೆ, ಚಿಟ್ಟಲಗಿ ಮೇಳ, ಷಹನಾಯವಾದನ, ಗಾರುಡಿ ಗೊಂಬೆ, ಯಕ್ಷಗಾನ ಗೊಂಬೆ, ವಾನರಸೇನೆ, ಕರಡಿ ಮಜಲು, ದೇವಿ ವೇಷಧಾರಿ, ಕೀಲು ಕುದುರೆ, ನೃತ್ಯ, ಮರಗಾಲು, ಮುಳ್ಳು ಕುಣಿತ, ಡೊಳ್ಳು ಕುಣಿತ, ಪೂಜಾಕುಣಿತ, ಡೊಳ್ಳು ಕುಣಿತ, ಹಾಲಕ್ಕಿ ಸುಗ್ಗಿ ಕುಣಿತ, ಪಟಕುಣಿತ, ರಂಗದಕುಣಿತ, ಮಹಿಳಾ ಡೊಳ್ಳು ಕುಣಿತ, ಸೋಮನ ಕುಣಿತ, ಗೊರವರ ಕುಣಿತ, ಲಂಬಾಣಿ ನೃತ್ಯ, ಕೋಳಿ ನೃತ್ಯ, ಕೊಡವ ನೃತ್ಯ, ಜೋಗತಿ ನೃತ್ಯ, ವೀರಮಕ್ಕಳ ಕುಣಿತ, ಸತ್ತಿಗೆ ಕುಣಿತ, ದಟ್ಟಿ ಕುಣಿತ, ಹಲಗು ಕುಣಿತ, ಪಟಕುಣಿತ, ನಾಲ್ವಡಿ ಕೃಷ್ಣರಾಜ ಒಡೆಯರ್, ಕೆಂಪೇಗೌಡ, ವಿಶ್ವೇಶ್ವರಯ್ಯ ವೇಷಧಾರಿ, ಅಶ್ವಾರೋಹಿ ದಳ, ಟಾಂಗಾ ಗಾಡಿ, ಎತ್ತಿನ ಗಾಡಿ, ಸಮ್ಮೇಳನಾಧ್ಯಕ್ಷರ ಭಾವಚಿತ್ರ ಒಳಗೊಂಡ 87 ಆಟೋರಿಕ್ಷಾಗಳು, ಸ್ಕೌಟ್ಸ್ ಮತ್ತು ಗೈಡ್ಸ್, ಎನ್‌ಸಿಸಿ, ಭಾರತ್ ಸೇವಾದಳ ತಂಡ ಮೆರವಣಿಗೆಯಲ್ಲಿ ಪಾಲ್ಗೊಂಡು ಎಲ್ಲರ ಗಮನ ಸೆಳೆಯಿತಲ್ಲದೆ, ಕನ್ನಡತನ ಎಲ್ಲೆಲ್ಲೂ ರಾರಾಜಿಸಿತು.

ತಮಿಳುನಾಡಿನ ಕರಗಂ, ಒಡಿಶಾದ ಸಂಬಲ್ಪುರಿ ಮತ್ತು ಧಾಪ್ ಬುಡಕಟ್ಟು ನೃತ್ಯ, ಮಧ್ಯಪ್ರದೇಶದ ಬಧಾಯಿ ಮತ್ತು ನೋರಾ, ಕಲಾ ಪ್ರಕಾರಗಳು ಒಳಗೊಂಡಂತೆ, ನಾನಾ ಜಿಲ್ಲೆಯ ನೂರಾರು ಕಲಾತಂಡಗಳು ಸಮ್ಮೇಳನಾಧ್ಯಕ್ಷರ ಮೆರವಣಿಗೆಯಲ್ಲಿ ಸಾಗಿದವು. ಇವರ ಜೊತೆಗೆ ನೂರಾರು ಶಾಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಧ್ವಜಾರೋಹಣದ ಮೂಲಕ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ: ಕನ್ನಡ ನಾಡು–ನುಡಿ, ನೆಲ–ಜಲ ಐತಿಹ್ಯವನ್ನು ಬಿಂಬಿಸುವ ಧ್ವಜಾರೋಹಣ, ವರ್ಣರಂಜಿತ ಮೆರವಣಿಗೆಯೊಂದಿಗೆ ಸಕ್ಕರೆನಾಡಿನ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಶುಕ್ರವಾರ ಚಾಲನೆಗೊಂಡಿತು.

ಸಕ್ಕರೆ ನಗರಿ ಮಂಡ್ಯದಲ್ಲಿ ಡಿ.20,21 ಮತ್ತು 22ರಂದು ಮೂರು ದಿನಗಳ ಕಾಲ ಜರುಗಲಿರುವ ಕನ್ನಡ ನುಡಿ ಜಾತ್ರೆ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬೆಳಗ್ಗೆ 6.30ಕ್ಕೆ ಧ್ವಜಾರೋಹಣ ನೆರವೇರಿಸುವ ಮೂಲಕ ಚಾಲನೆ ನೀಡಲಾಯಿತು. ಸಮ್ಮೇಳನಾಧ್ಯಕ್ಷರಾದ ಗೊ.ರು.ಚನ್ನಬಸಪ್ಪ ಅವರ ಉಪಸ್ಥಿತಿಯಲ್ಲಿ ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ರಾಷ್ಟ್ರಧ್ವಜಾರೋಹಣ ಮಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಹಾಗೂ ಸಮ್ಮೇಳನ ಸ್ವಾಗತ ಸಮಿತಿಯ ಗೌರವ ಕಾರ್ಯಾಧ್ಯಕ್ಷ ನಾಡೋಜ ಡಾ.ಮಹೇಶ ಜೋಶಿ ಕನ್ನಡ ಸಾಹಿತ್ಯ ಪರಿಷತ್ತಿನ ಧ್ವಜಾರೋಹಣವನ್ನು ಹಾಗೂ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಂಚಾಲಕಿ ಮೀರಾ ಶಿವಲಿಂಗಯ್ಯ ಅವರು ನಾಡಧ್ವಜಾರೋಹಣ ಮಾಡಿದರು. ಶಾಸಕರುಗಳಾದ ರಮೇಶ್ ಬಾಬು ಬಂಡಿಸಿದ್ದೇಗೌಡ, ದಿನೇಶ್ ಗೂಳಿಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸಿಫ್ ಸೇರಿದಂತೆ ನಾನಾ ಗಣ್ಯರು ಸ್ಕೌಟ್ಸ್ ಮತ್ತು ಗೈಡ್ಸ್, ಭಾರತ್ ಸೇವಾದಳದ ಮಕ್ಕಳು ಧ್ವಜಾರೋಹಣ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸಮ್ಮೇಳಾನಧ್ಯಕ್ಷರ ಕಾಲಿಗೆ ನಮಸ್ಕರಿಸಿದ ಡಿಸಿಎಂ ಡಿಕೆಶಿ



ಮಂಡ್ಯದಲ್ಲಿ ಶುಕ್ರವಾರ ಆರಂಭಗೊಂಡ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ತಡವಾಗಿ ಆಗಮಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಮ್ಮೇಳಾನಧ್ಯಕ್ಷ ಗೊ.ರು. ಚನ್ನಬಸಪ್ಪ ಅವರ ಪಾದಗಳಿಗೆ ನಮಸ್ಕರಿಸಿ, ಆಶೀರ್ವಾದ ಪಡೆದರು. ಈ ವೇಳೆ ಸಚಿವರು ಮತ್ತು ಶಾಸಕರು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಬದಲಾವಣೆ ಅಗತ್ಯ

ಕನ್ನಡವೂ ಒಂದೆಂದು ವಿದ್ವಾಂಸರು ಹೇಳುತ್ತಾರೆ. ಇದಕ್ಕೆ ಕಾರಣಗಳೇನು ಎಂಬುದನ್ನು ಕಂಡುಕೊಳ್ಳಬೇಕಾಗಿದೆ. ನನಗೆ ತಿಳಿದ ಮಟ್ಟಿಗೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಕೆಲವು ಸಮಸ್ಯೆಗಳಿವೆ. ಶಿಕ್ಷಣ ವ್ಯವಸ್ಥೆಯಲ್ಲಿ ನಾವು ಮಕ್ಕಳಿಗೆ 3–ಎಚ್ ಸೂತ್ರವನ್ನು ಅಳವಡಿಸಿಕೊಳ್ಳಬೇಕಾಗಿದೆ. ಮೆದುಳು , ಹೃದಯ ಮತ್ತು ಕೌಶಲ್ಯ ಸೇರಿ ರೂಪುಗೊಂಡ ಶಿಕ್ಷಣ ವ್ಯವಸ್ಥೆ ನಮ್ಮದಾಗಬೇಕಾಗಿದೆ. ಜಗತ್ತಿಗೆ ಶಾಂತಿ ಸಾರಿದ ಬುದ್ಧ ಇದನ್ನು ಯಶಸ್ವಿಯಾಗಿ ಪ್ರಯೋಗಿಸಿದ್ದ. ಗಾಂಧೀಜಿಯವರೂ ಇದನ್ನೆ ಹೇಳಿದ್ದರು ಎಂದು ತಿಳಿಸಿದರು.

ಸಮಗ್ರ ಕನ್ನಡ ಭಾಷೆ ಬಳಕೆಯನ್ನು ಜಾರಿಗೆ ತಂದಿದ್ದೇವೆ. ಕನ್ನಡಕ್ಕೆ ಮೊದಲ ಪ್ರಾಶಸ್ತ್ಯ ಕಲ್ಪಿಸಲು ಸರ್ಕಾರ ಬದ್ಧವಾಗಿದೆ. ಎಷ್ಟೇ ಭಾಷೆ ಕಲಿತರು ಕೂಡ ಹೃದಯದ ಭಾಷೆ ಮಾತೃ ಭಾಷೆಯಾಗಿರುತ್ತದೆ. ಕನ್ನಡ ಸಂಕಷ್ಟದಲ್ಲಿದೆ ಎಂಬುದಕ್ಕೆ ಕಾರಣಗಳನ್ನು ತಿಳಿದುಕೊಳ್ಳಬೇಕಿದೆ. ಕನ್ನಡ ಉಳಿಯಬೇಕಾದರೆ ಮಕ್ಕಳನ್ನು ಕನ್ನಡ ಶಾಲೆಗೆ ಸೇರಿಸಬೇಕಾಗಿದೆ. ಆಡಳಿತದಲ್ಲಿ ಕನ್ನಡ ಬಳಸಲು ಸರ್ಕಾರ ಬದ್ಧವಾಗಿದೆ. ನಾವು ಬದುಕುತ್ತಿರುವ ಕಾಲ ಅತ್ಯಂತ ವಿಷಮವಾಗಿದೆ. ಜಗತ್ತಿನ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಬೇಕಿದೆ. ಕುವೆಂಪು ಮಾಡಿರುವ ಸ್ಮರಣೀಯ ಕೆಲಸಗಳನ್ನು ನೆನಪಿಸಿಕೊಳ್ಳಬೇಕಿದೆ ಎಂದು ಹೇಳಿದರು.

ಮಂಡ್ಯ ಅಪ್ಪಟ ಕನ್ನಡ ನಾಡು: ಮಂಡ್ಯ ಅಪ್ಪಟ ಕನ್ನಡದ ನೆಲ. ಯಾರೇ ಅನ್ಯ ಭಾಷಿಕರು ಬಂದರೂ ಒಂದೇ ತಿಂಗಳಲ್ಲಿ ಕನ್ನಡ ಕಲಿಸಬಲ್ಲ ಕನ್ನಡಿಗರ ನೆಲ ಇದು. ಇಂತಹ ಕನ್ನಡದ ನೆಲದಲ್ಲಿ ನಿಜಾರ್ಥದ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಮಂಡ್ಯ ಜಿಲ್ಲೆಯ ಸಾಹಿತ್ಯ–ಸಂಸ್ಕೃತಿಗಳ ಪರಂಪರೆ ಬಹಳ ಉತ್ಕೃಷ್ಟವಾದುದು. ಕಾವೇರಿ ಕಣಿವೆಯಲ್ಲಿರುವ ಮಂಡ್ಯ ಜಿಲ್ಲೆಯಲ್ಲಿ ಕಾವೇರಿ, ಹೇಮಾವತಿ, ಶಿಂಷಾ, ಲೋಕಪಾವನಿ ಮುಂತಾದ ಜೀವನದಿಗಳು ಹರಿಯುತ್ತಿವೆ. ಕನ್ನಡ ಸಾಹಿತ್ಯ ಪರಂಪರೆಯನ್ನು ಸದಾಕಾಲಕ್ಕೂ ಮೆರೆಸಿರುವ ಮಂಡ್ಯ ಜಿಲ್ಲೆ, ಅಪ್ಪಟ ಕನ್ನಡದ ನೆಲ. ಭತ್ತದ ಕಣಜ, ಸಕ್ಕರೆ ನಾಡು ಎಂದೇ ಜನಜನಿತ. ಜಗತ್ತಿನ ಯಾವ ಮೂಲೆಯ ಭಾಷಿಕರೆ ಬಂದರೂ ಅವರಿಗೆ ಒಂದೇ ತಿಂಗಳಲ್ಲಿ ಕನ್ನಡವನ್ನು ಕಲಿಸುತ್ತೇವೆ ಎಂಬ ಭಾಷಾಭಿಮಾನ ಮತ್ತು ದಿಟ್ಟತನ ಮಂಡ್ಯದ ಜನರದ್ದು ಎಂದು ನುಡಿದರು.

ಕನ್ನಡಿಗರ ಜಿಲ್ಲೆ: ಮಂಡ್ಯ ಜಿಲ್ಲೆಯು ಅಪ್ಪಟ ಕನ್ನಡಿಗರು ವಾಸಿಸುವ ಜಿಲ್ಲೆ. ಕನ್ನಡ ಭಾಷೆ ಮತ್ತು ಸಂಸ್ಕೃತಿ ವಿಕಾಸಕ್ಕೆ ಈ ಜಿಲ್ಲೆಯ ಕೊಡುಗೆ ಅಪಾರ. ಕ್ರಿ.ಶ 10ನೇ ಶತಮಾನದ ಆತಕೂರಿನ ಶಾಸನ ನಾಡಿನ ಹಳೆಯ ಶಾಸನಗಳಲ್ಲೊಂದು. ನಾಯಿಯೊಂದರ ವೀರ ಮರಣವೂ ಇತಿಹಾಸದಲ್ಲಿ ನೆಲೆ ನಿಲ್ಲುವಂತೆ ಮಾಡಿದ ಶಾಸನ ಮತ್ತು ಅಲ್ಲಿ ಬಳಕೆಯಾದ ಕನ್ನಡವನ್ನು ನಾವು ಮರೆಯಬಾರದು.

ಪ್ರಧಾನ ವೇದಿಕೆಯಲ್ಲಿ ಸಚಿವ ಎನ್.ಚಲುವರಾಯಸ್ವಾಮಿ ಪ್ರಾಸ್ತಾವಿಕ ಭಾಷಣ ಮುಗಿಸಿದ ಬಳಿಕ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಸಂವಿಧಾನ ಪೀಠಿಕೆ ವಾಚನ ಮಾಡಿದರು. ವೇದಿಕೆ ಮೇಲಿದ್ದ ಗಣ್ಯರು ಸೇರಿದಂತೆ ಸಭಿಕರೆಲ್ಲಾ ಎದ್ದು ನಿಂತು ಕೈ ಮುಂದೆ ಚಾಚಿ ಸಂವಿಧಾನ ಪೀಠಿಕೆಯನ್ನು ಓದಿದರು.

ಆದಿಚುಂಚನಗಿರಿ ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ವೇದಿಕೆಯಲ್ಲಿ ಸಮ್ಮೇಳನಾಧ್ಯಕ್ಷ ನಾಡೋಜ ಡಾ.ಗೊ.ರು. ಚನ್ನಬಸಪ್ಪ, ನಿಕಟಪೂರ್ವ ಸಮ್ಮೇಳ ನಾಧ್ಯಕ್ಷ ಡಾ.ದೊಡ್ಡರಂಗೇಗೌಡ, ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ.ಚಂದ್ರಶೇಖರ ಕಂಬಾರ, ಸ್ಪೀಕರ್ ಯು.ಟಿ.ಖಾದರ್, ಸಚಿವರಾದ ಎನ್. ಚಲುವನಾರಾಯಣಸ್ವಾಮಿ, ಡಾ. ಹೆಚ್.ಸಿ. ಮಹದೇವಪ್ಪ, ಕೆ.ಹೆಚ್.ಮುನಿಯಪ್ಪ, ಶಿವರಾಜ್ ತಂಗಡಗಿ, ಉಪ ಸ್ಪೀಕರ್ ರುದ್ರಪ್ಪ ಲಮಾಣಿ, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಪಿ.ರವಿಕುಮಾರ್ ಗಣಿಗ, ಎ.ಬಿ. ರಮೇಶ್ ಬಂಡಿಸಿದ್ದೇಗೌಡ, ದರ್ಶನ್, ಕೆ.ಎಂ.ಉದಯ್‌ಗೌಡ, ಅಶೋಕ್ ಪಟ್ಟಣ್, ದಿನೇಶ್‌ಗೂಳಿ ಗೌಡ, ಹೆಚ್.ಟಿ.ಮಂಜು, ಕೆ.ವಿವೇಕಾ ನಂದ ಇನ್ನಿತರರಿದ್ದರು.

ಕನ್ನಡ ಮಾಧ್ಯಮ ಕಡ್ಡಾಯ ಆಗಲೇಬೇಕು

ಎಂದು ವಿಷಾದಿಸಿದರು. ಇವೆಲ್ಲದರ ಹಿನ್ನೆಲೆಯಲ್ಲಿ, ನಮ್ಮ ನೆಲದಲ್ಲಿ ಹುಟ್ಟುವ ಪ್ರತಿಯೊಂದು ಮಗುವಿಗೂ ಶಿಕ್ಷಣ ನೀಡಬೇಕು ಎಂಬುದನ್ನು ಕರ್ತವ್ಯವಾಗಿ ಪರಿಗಣಿಸಬೇಕಿರುವ ಸರ್ಕಾರ ತುರ್ತಾಗಿ ಕೆಲವು ಬಾಹ್ಯ ಮತ್ತು ಆಂತರಿಕ ಸಂಗತಿಗಳನ್ನು ಗಮನಿಸಬೇಕಾಗಿದೆ. ಗ್ರಾಮೀಣ ಪ್ರದೇಶದಲ್ಲಿ ನೂರಾರು, ಸಾವಿರಾರು ಸರ್ಕಾರಿ ಶಾಲೆಗಳ ಸೂರು, ಗೋಡೆ ಉರುಳುವ ಸ್ಥಿತಿಯಲ್ಲಿವೆ. ಮೊದಲು ಅವುಗಳನ್ನು ಸರಿಪಡಿಸಿ, ಮಕ್ಕಳಿಗೆ ಮತ್ತು ಪೋಷಕರಿಗೆ ಅವು ಆಕರ್ಷಕವಾಗುವಂತೆ ಉನ್ನತೀಕರಿಸಬೇಕು. ಮಕ್ಕಳು ಮತ್ತು ಶಿಕ್ಷಕರ ಕೊರತೆಯಿಂದ ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುವ ಪ್ರಕ್ರಿಯೆ ಎದ್ದು ಕಾಣುವಂತೆ ನಡೆಯುತ್ತಿದೆ. ಇದು ಸರ್ಕಾರಿ ಶಾಲೆಗೆ ಮಕ್ಕಳನ್ನು ಕಳಿಸದಂತೆ ಹಿರಿಯರನ್ನು ಪ್ರೇರೇಪಿಸುತ್ತಿದೆ. ಆದ್ದರಿಂದ ಸರ್ಕಾರ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಎಂಬ ಗುಚ್ಛವ್ಯವಸ್ಥೆಯನ್ನು ಪ್ರತೀ ಗ್ರಾಮದಲ್ಲಿ ಅಲ್ಲದಿದ್ದರೂ ಪ್ರತೀ ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿ ತೆರೆಯಬೇಕು ಎನ್ನುವ ಸಲಹೆಯನ್ನು ಅನೇಕ ಚಿಂತಕರು ನೀಡಿದ್ದಾರೆ. ಇದನ್ನು ಸರ್ಕಾರ ಪರಿಶೀಲಿಸುವುದು ಅಗತ್ಯ. ಇವುಗಳಲ್ಲಿ ಕನ್ನಡವೇ ಶಿಕ್ಷಣದ ಭಾಷೆಯಾಗಿ, ಇಂಗ್ಲಿಷ್ ಭಾಷೆ ಪಠ್ಯಕ್ರಮದಲ್ಲಿ ಒಂದು ಭಾಷೆ/ವಿಷಯವಾಗಿ ಮಾತ್ರ ಇರುವಂತೆ ಮಾಡಬಹುದು ಎಂದು ಸಲಹೆ ನೀಡಿದರು. ಗ್ರಾಮಾಂತರ ಪ್ರದೇಶದ ಶಾಲೆಗಳನ್ನು ಉನ್ನತೀಕರಿಸಲು ಅವರ ಸಹಕಾರ ಅತ್ಯಗತ್ಯ. ಸರ್ಕಾರ ಇಂಥ ಸಹಕಾರದ ಹುಡುಕಾಟಕ್ಕೆ ಹಿರಿಯರ ಸಮಿತಿಯನ್ನು ರಚಿಸುವುದು ಸೂಕ್ತ ಎಂದು ಅನ್ನಿಸುತ್ತದೆ. ಕನ್ನಡ ಭಾಷೆಯನ್ನು ಶಿಕ್ಷಣದ ಮಾಧ್ಯಮವಾಗಿ ಬೆಳೆಸುವುದಿರಲಿ, ಸದ್ಯ ಸಂವಹನ ಭಾಷೆಯಾಗಿ ಉಳಿಸಿಕೊಳ್ಳುವುದೇ ಕಷ್ಟವಾಗಿರುವಾಗ, ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸುವಂತೆ ಹೆತ್ತವರನ್ನು ಪ್ರೇರೇಪಿಸಲು ಶಾಲೆಗಿರುವ ಬಲ–ಬೆಂಬಲಗಳೂ ಮುಖ್ಯವಾಗುತ್ತವೆ. ಶಿಕ್ಷಣ ವ್ಯವಸ್ಥೆಗೆ ಅಂತರಂಗದಷ್ಟೇ ಬಹಿರಂಗವೂ ಮುಖ್ಯವೆನ್ನಿಸುವ ಕಾಲ ಇದಲ್ಲವೇ? ಕಂಪೆನಿಗಳು, ಉದ್ಯಮಗಳು ತಮ್ಮ ಸಾಮಾಜಿಕ ಬದ್ಧತೆಯನ್ನು ಪ್ರದರ್ಶಿಸಲು, ಮಕ್ಕಳ ಶಾಲೆಗಿಂತ ಉತ್ತಮ ಅಂಗಳ ಬೇರೊಂದಿಲ್ಲ ಎಂದು ಅಭಿಪ್ರಾಯಿಸಿದರು.

ತಂತ್ರಜ್ಞಾನದ ಕನ್ನಡಕವಿಲ್ಲದೆ ಇಂದು ಜಗತ್ತನ್ನು ನೋಡುವುದೇ ಕಷ್ಟವಾಗಿದೆ. ಹಿಂದಿನ ಕಾಲದಲ್ಲಿ ಕಾಲಜ್ಞಾನ, ಬ್ರಹ್ಮಜ್ಞಾನ ಮುಂತಾದ ಅರಿವಿನ ಮೂಲಗಳನ್ನು ಕೈವಶ ಮಾಡಿಕೊಳ್ಳಲು ಶ್ರಮಪಡಬೇಕಾಗಿತ್ತು. ಈಗ ಇದಕ್ಕೆ ತಂತ್ರಜ್ಞಾನ ಎಂಬ ಪದವನ್ನೂ ಸೇರಿಸಬೇಕು ಎನ್ನುವ ಮಾತು ಕೇವಲ ತಮಾಷೆಯಲ್ಲ. ಏಕೆಂದರೆ ಕಾಲಜ್ಞಾನವನ್ನೂ, ಬ್ರಹ್ಮಜ್ಞಾನವನ್ನೂ ಪಡೆಯಬೇಕೆಂಬ ಆಸೆಯುಳ್ಳವರು ಕೂಡ ಇಂದು ತಂತ್ರಜ್ಞಾನವನ್ನೇ ಅವಲಂಬಿಸಬೇಕು. ಹಿಂದಿನ ಕಾಲದ ಹಿರಿಯರ ಮಾತು ಬಿಡಿ, ಇಂದಿನ ಕಾಲದಲ್ಲಿ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ತಂತ್ರಜ್ಞಾನವೇ ಮುಖ್ಯ ಪೋಷಕಾಂಶ ಒದಗಿಸುವಂತಾಗಿದೆ. ಕನ್ನಡ ಭಾಷೆ ಇನ್ನಷ್ಟು ಸಂಪನ್ನವಾಗಬೇಕಾದರೆ, ಸಂಪೂರ್ಣ ಅನ್ನಿಸಬೇಕಾದರೆ ಮತ್ತು ಮುಖ್ಯವಾಗಿ ಸಮಕಾಲೀನ ಅನ್ನಿಸಬೇಕಾದರೆ ಅದಕ್ಕೆ ತಂತ್ರಜ್ಞಾನದ ಬೆನ್ನೆಲುಬನ್ನು ಜೋಡಿಸಲೇಬೇಕು. ಕನ್ನಡ ಭಾಷೆಯ ಬೆಳವಣಿಗೆಗೆ ತಂತ್ರಜ್ಞಾನದ ಪೋಷಣೆ ಅತ್ಯಗತ್ಯ ಎನ್ನುವ ಅನಿವಾರ್ಯತೆಯನ್ನು ನಾವು ಒಪ್ಪಿಕೊಳ್ಳಲೇಬೇಕು. ಇದಕ್ಕೆ ಬೇಕಾದ ಸಿದ್ಧತೆ ಮತ್ತು ಅನುಕೂಲತೆಗಳನ್ನು ಸಮರೋಪಾದಿಯಲ್ಲಿ ಕಲ್ಪಿಸದಿದ್ದರೆ ನಾವು ಹಿಂದುಳಿದುಬಿಡುತ್ತೇವೆ ಎಂದು ಆತಂಕ ವ್ಯಕ್ತಪಡಿಸಿದರು.

ಡಾ. ಅಂಬೇಡ್ಕರ್ ವಿಚಾರವಾಗಿ ಅಮಿತ್ ಶಾ ಹೇಳಿಕೆ ತಿರುಚಲಾಗಿದೆ; ಬಿಜೆಪಿ ಆರೋಪ

ಮೈಸೂರು ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಯತ್ನ; ಹಲವರು ಪೊಲೀಸರ ವಶಕ್ಕೆ



ಡಾ.ಅಂಬೇಡ್ಕರ್ ಕುರಿತ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆಯನ್ನು ತಿರುಚಲಾಗಿದೆ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಮೈಸೂರಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಡಿ.20(ಬಿಎಲ್‌ಯು)– ಡಾ.ಅಂಬೇಡ್ಕರ್ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆಯನ್ನು ತಿರುಚಲಾಗಿದೆ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಮೈಸೂರಿನ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಘಟನೆ ಇಂದು ನಡೆಯಿತು.

ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಇಂದು ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರು, ಅಮಿತ್ ಶಾ ಅವರ ಹೇಳಿಕೆಗೆ ಕಾಂಗ್ರೆಸ್ ವಿವಾದಾತ್ಮಕ ರೂಪ ನೀಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಸಂಸತ್ ಅಧಿವೇಶನದಲ್ಲಿ ಅಮಿತ್ ಶಾ ಅವರು ಡಾ.ಅಂಬೇಡ್ಕರ್ ಕುರಿತಂತೆ 18 ನಿಮಿಷ ಮಾತನಾಡಿದ್ದು, ಇದರಲ್ಲಿ 12 ಸೆಕೆಂಡ್‌ನ ವಿಡಿಯೋ ತುಣುಕು ವೈರಲ್ ಮಾಡಿ ಕಾಂಗ್ರೆಸ್ ವಿವಾದ ಹುಟ್ಟು ಹಾಕಿದೆ ಎಂದು ದೂರಿದರು.

ಡಾ.ಅಂಬೇಡ್ಕರ್ ಬದುಕಿದಾಗ ಗೌರವಯುತವಾಗಿ ನಡೆಸಿಕೊಳ್ಳದ ಕಾಂಗ್ರೆಸ್‌ನವರು ಈಗ ಅವರ ಹೆಸರು ಬಳಸಿಕೊಂಡು ರಾಜಕೀಯ ಲಾಭ ಪಡೆಯಲು ಮುಂದಾಗಿದ್ದಾರೆ ಎಂದು ಆಪಾದಿಸಿದರು.

ದ್ವೇಷದಿಂದ ರವಿ ಬಂಧನ: ವಿಧಾನ ಪರಿಷತ್‌ನಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಬಗ್ಗೆ ಸಿ.ಟಿ.ರವಿ ಆಕ್ಷೇಪಾರ್ಹ ಪದ ಬಳಕೆ ಮಾಡಿಲ್ಲ. ಆದರೆ ರಾಜಕೀಯ ದ್ವೇಷದಿಂದ ಸಿ.ಟಿ.ರವಿ ಅವರನ್ನು ಬಂಧಿಸಿದ್ದಾರೆ. ಈ ಮೂಲಕ ಕಾಂಗ್ರೆಸ್, ರಾಜ್ಯದಲ್ಲಿ ಮಾತ್ರವಲ್ಲದೆ ಇಡೀ ದೇಶದಲ್ಲೇ ಜನ ವಿರೋಧಿಯಾಗಿ ನಡೆದುಕೊಳ್ಳುತ್ತಿದೆ ಎಂದು ದೂರಿದರು.

ಸಂಸತ್ತಿನಲ್ಲಿ ರಾಹುಲ್ ಗಾಂಧಿ ಹಿರಿಯ ಸಂಸದರೊಬ್ಬರ ಮೇಲೆ ಹಲ್ಲೆ ಮಾಡಿದ್ದು, ಮಹಿಳಾ ಸದಸ್ಯರೊಂದಿಗೆ ಅಸಭ್ಯವಾಗಿ ನಡೆದುಕೊಂಡಿದ್ದಾರೆ ಆದರೆ ಈ ತನಕ ರಾಹುಲ್ ಗಾಂಧಿ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ನಾಗೇಂದ್ರ ಕಿಡಿಕಾರಿದರು.

ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ಕಚೇರಿಯತ್ತ ಹೋಗದಂತೆ ಜೆಎಲ್‌ಬಿ ರಸ್ತೆಯಲ್ಲಿ ಬ್ಯಾರಿಕೇಡ್ ಹಾಕಿ ಬಂದ್ ಮಾಡಲಾಗಿತ್ತು. ಯಾವೊಬ್ಬ ಬಿಜೆಪಿ ಕಾರ್ಯಕರ್ತ ಕಾಂಗ್ರೆಸ್ ಕಚೇರಿಯತ್ತ ಹೋಗದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಡಿಸಿಪಿಗಳಾದ ಜಾಹ್ನವಿ ಹಾಗೂ ಮುತ್ತುರಾಜ್ ಸ್ಥಳದಲ್ಲೇ ಇದ್ದು, ಬಂದೋಬಸ್ತ್ ಉಸ್ತುವಾರಿ ವಹಿಸಿದ್ದರು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಸುಮಾರು ಒಂದು ಗಂಟೆ ಕಾಲ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗಿದರು. ಅಲ್ಲದೆ ಅಂಬೇಡ್ಕರ್ ಅವರನ್ನು ಸೋಲಿಸಿದ ಕಾಂಗ್ರೆಸ್‌ಗೆ ಧಿಕ್ಕಾರ, ಸುಳ್ಳು ಆರೋಪ ಮಾಡುತ್ತಿರುವ ಕಾಂಗ್ರೆಸ್‌ಗೆ ಧಿಕ್ಕಾರದ ಘೋಷಣಾ ಫಲಕಗಳನ್ನು ಕೈಯ್ಯಲ್ಲಿ ಹಿಡಿದಿದ್ದರು.

ತರುವಾಯ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಮುಂದಾದರು. ಈ ವೇಳೆ ಬ್ಯಾರಿಕೇಡ್ ದಾಟದಂತೆ ಪೊಲೀಸರು ಅವರನ್ನು ತಡೆದರು.

ಈ ಸಂದರ್ಭದಲ್ಲಿ ಬ್ಯಾರಿಕೇಡ್ ತಳ್ಳಿ ಮುಂದೆ ಹೋಗಲು ಯತ್ನಿಸಿದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು. ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮಾಜಿ ಮೇಯರ್ ಶಿವಕುಮಾರ್, ಮಾಜಿ ಮುಡಾ ಅಧ್ಯಕ್ಷ ಯಶಸ್ವಿನಿ ಸೋಮಶೇಖರ್, ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್ ಗೌಡ, ಓಬಿಸಿ ಮೋರ್ಚಾ ನಗರಾಧ್ಯಕ್ಷ ಜೋಗಿ ಮಂಜು ಹಾಗೂ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಪ್ರತಿಭಟನೆ ಹಿನ್ನೆಲೆ ಕೆಲವು ರಸ್ತೆ ಬಂದ್; ಸಾರ್ವಜನಿಕರಿಗೆ ತೀವ್ರ ತೊಂದರೆ

ಮೈಸೂರಿನಲ್ಲಿ ಇಂದು ಬಿಜೆಪಿ, ಕಾಂಗ್ರೆಸ್ ಹಾಗೂ ಹಲವು ಸಂಘಟನೆಗಳು ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆಯಾಗಿ ಬ್ಯಾರಿಕೇಡ್ ಹಾಕಿ ಕೆಲವು ರಸ್ತೆಗಳನ್ನು ಪೊಲೀಸರು ಬಂದ್ ಮಾಡಿದ್ದರಿಂದ ಸಾರ್ವಜನಿಕರು ಪರದಾಡಬೇಕಾಗಿ ಬಂತು.

ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕುವುದನ್ನು ತಡೆಯಲು ರೈಲ್ವೆ ನಿಲ್ದಾಣಕ್ಕೆ ಹೋಗುವ ಜೆಎಲ್‌ಬಿ ರಸ್ತೆಯ ಎರಡು ಪಥಕ್ಕೆ ಬ್ಯಾರಿಕೇಡ್ ಹಾಕಿ ಮುಚ್ಚಲಾಗಿತ್ತು. ರೈಲ್ವೆ ನಿಲ್ದಾಣ ಸೇರಿದಂತೆ ಕೆಆರ್‌ಎಸ್ ರಸ್ತೆಯತ್ತ ಹೋಗುವ ವಾಹನಗಳಿಗೆ ಸಂಪೂರ್ಣ ನಿರ್ಬಂಧವಿತ್ತು. ಇದರಿಂದ ರೈಲ್ವೆ ನಿಲ್ದಾಣ, ಕೆಆರ್‌ಎಸ್ ರಸ್ತೆ ಸೇರಿದಂತೆ ಇತರೆಡೆಗೆ ಹೋಗುವವರಿಗೆ ತೀವ್ರ ತೊಂದರೆ ಉಂಟಾಯಿತು. ವಾಹನಗಳು ಬಳಸಿಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿತ್ತು.

ಅಲ್ಲದೆ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸುತ್ತಿದ್ದ ನ್ಯಾಯಾಲಯದ ಮುಂಭಾಗ ಕೂಡ ಇದೇ ಪರಿಸ್ಥಿತಿ ಉಂಟಾಗಿತ್ತು. ನ್ಯಾಯಾಲಯದಿಂದ ಆರ್‌ಟಿಓ ಕಚೇರಿಗೆ ಹೋಗುವ ಎರಡು ಬದಿಯ ರಸ್ತೆಗೆ ಬ್ಯಾರಿಕೇಡ್ ಹಾಕಿ ಸಂಪೂರ್ಣವಾಗಿ ಮುಚ್ಚಲಾಗಿತ್ತು. ಜೊತೆಗೆ ಬಿಜೆಪಿ ಕಚೇರಿಗೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳಲ್ಲೂ ನಿರ್ಬಂಧ ಹೇರಲಾಗಿತ್ತು. ಬೆಳಿಗ್ಗೆಯಿಂದ ಮಧ್ಯಾಹ್ನದ ತನಕ ಇದೇ ಪರಿಸ್ಥಿತಿ ಇತ್ತು. ಇದರಿಂದ ಸುತ್ತಮುತ್ತಲಿನ ನಿವಾಸಿಗಳು ಮಾತ್ರವಲ್ಲದೆ ವಾಹನ ಸವಾರರು ತೀವ್ರ ತೊಂದರೆ ಅನುಭವಿಸಿದರು.

ಹೋಗಿ... ಹೋಗಿ... ಹೋಗಿ ಎಂದು ಯುವಕರ ಪ್ರಚೋದಿಸಿ ಹಿರಿಯರೆಲ್ಲಾ ಪಲಾಯನ!

ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಯುವ ಬಿಜೆಪಿ ಕಾರ್ಯಕರ್ತರನ್ನು ಹೋಗಿ... ಹೋಗಿ... ಹೋಗಿ ಎಂದು ಹುರಿದುಂಬಿಸಿದ ಹಿರಿಯ ಬಿಜೆಪಿ ಮುಖಂಡರು, ಸ್ಥಳದಿಂದ ಪಲಾಯನ ಮಾಡಿದರು! ಡಾ.ಅಂಬೇಡ್ಕರ್ ಕುರಿತ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆಯನ್ನು ತಿರುಚಲಾಗಿದೆ ಎಂದು ಖಂಡಿಸಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ವೇಳೆ ಹಿರಿಯ ಮುಖಂಡರು ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕುವಂತೆ ಯುವ ಕಾರ್ಯಕರ್ತರ ಹುರಿದುಂಬಿಸಿದರು. ಆದರೆ, ನೋಡ ನೋಡುತ್ತಿದ್ದಂತೆ ಹೀಗೆ ಹೇಳಿದ ಹಿರಿಯ ಮುಖಂಡರು ಒಬ್ಬೊಬ್ಬರಾಗಿ ಅಲ್ಲಿಂದ ಕಾಲ್ಕಿತ್ತರು.

ವೀರಾವೇಷದಿಂದ ಮುನ್ನುಗ್ಗಿದ ಬಿಜೆಪಿ ಯುವ ಕಾರ್ಯಕರ್ತರು ಬ್ಯಾರಿಕೇಡ್ ಭೇದಿಸಿ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಮುಂದಾದಾಗ ಪೊಲೀಸರು ಅವರನ್ನು ವಶಕ್ಕೆ ಪಡೆದರು. ಪ್ರತಿಭಟನೆ ವೇಳೆ ಹತ್ತಾರು ಮಹಿಳಾ ಕಾರ್ಯಕರ್ತರಿದ್ದರು. ಆದರೆ ಮುತ್ತಿಗೆ ಹಾಕಲು ಮುಂದಾದವರು ಇಬ್ಬರು ಮಹಿಳೆಯರು ಮಾತ್ರ. ಉಳಿದವರು ಕ್ಷಣ ಮಾತ್ರದಲ್ಲಿ ಮಂಗಮಾಯ. ಕಡೆಗೆ ಆ ಇಬ್ಬರು ಮಹಿಳೆಯರನ್ನು ಪೊಲೀಸರು ವಶಕ್ಕೆ ಪಡೆದರು. ನಂತರ ನಗರ ಬಿಜೆಪಿ ಅಧ್ಯಕ್ಷರೂ ಆದ ಮಾಜಿ ಶಾಸಕ ನಾಗೇಂದ್ರ ನೇತೃತ್ವದಲ್ಲಿ ಐದಾರು ಮಂದಿ ಜಿಲ್ಲಾಧಿಕಾರಿ ಕಚೇರಿಗೆ ಹೋಗಿ ಅಪರ ಜಿಲ್ಲಾಧಿಕಾರಿ ಡಾ.ಶಿವರಾಜ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಅಮಿತ್ ಶಾ ಹೇಳಿಕೆ ಖಂಡಿಸಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ

ಮೈಸೂರು, ಡಿ.20(ಬಿಎಲ್‌ಯು)– ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಬಗ್ಗೆ ಅಗೌರವದಿಂದ ಮಾತನಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜೀನಾಮೆಗೆ ಆಗ್ರಹಿಸಿ ಮೈಸೂರಿನ ಅಶೋಕಪುರಂನ ಆದಿ ಕರ್ನಾಟಕ ಮಹಾ ಸಂಸ್ಥೆಯವರು ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂದೆ ಇಂದು ಪ್ರತಿಭಟನೆ ನಡೆಸಿದರು.

ಸಿದ್ದಾರ್ಥನಗರದ ನೂತನ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ಆದಿ ಕರ್ನಾಟಕ ಮಹಾ ಸಂಸ್ಥೆಯವರು ಅಮಿತ್ ಶಾ ಹೇಳಿಕೆಯ ಸಮರ್ಥನೆ ಮಾಡಿಕೊಳ್ಳುತ್ತಿರುವ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕೂಡ ಆಕ್ರೋಶ ವ್ಯಕ್ತಪಡಿಸಿದರು.

ಸಂಸತ್ತಿನಲ್ಲಿ ಅಮಿತ್ ಶಾ ಅಂದು ನೀಡಿದ ಹೇಳಿಕೆಯಿಂದ ದಲಿತ ಸಮುದಾಯದ ಬಗ್ಗೆ ಅವರಿಗಿರುವ ವಿರೋಧಿ ಭಾವನೆ ಪ್ರದರ್ಶನವಾಗುತ್ತಿದೆ ಎಂದು ಕಿಡಿಕಾರಿದರು.

ಈ ಕೂಡಲೇ ಅಮಿತ್ ಶಾ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡದಿದ್ದರೆ ತೀವ್ರ ರೀತಿಯ ಹೋರಾಟ ರೂಪಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಮಾಜಿ ಮೇಯರ್ ಪುರುಷೋತ್ತಮ್, ರಾಮಸ್ವಾಮಿ, ವಾಸು, ರವಿ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಡಾ.ಅಂಬೇಡ್ಕರ್ ಬಗ್ಗೆ ಅಗೌರವದಿಂದ ಮಾತನಾಡಿರುವ ಅಮಿತ್ ಶಾ ಅವರನ್ನು ಕೇಂದ್ರ ಸಚಿವ ಸಂಪುಟದಿಂದ ವಜಾ ಮಾಡಬೇಕೆಂದು ಆಗ್ರಹಿಸಿ ಮೈಸೂರಿನ ಅಶೋಕಪುರಂನ ಆದಿ ಕರ್ನಾಟಕ ಮಹಾ ಸಂಸ್ಥೆಯವರು ನಗರದ ಜಿಲ್ಲಾಧಿಕಾರಿ ಕಚೇರಿ ಮುಂದೆ ಶುಕ್ರವಾರ ಪ್ರತಿಭಟನೆ ನಡೆಸಿದರು.



ಸಂಸತ್ತಿನಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಡಾ.ಅಂಬೇಡ್ಕರ್ ಬಗ್ಗೆ ನೀಡಿರುವ ಹೇಳಿಕೆ ಖಂಡಿಸಿ ಪ್ರಗತಿ ಪರ ಸಂಘಟನೆಗಳ ಒಕ್ಕೂಟದವರು ಮೈಸೂರಿನ ಪುರಭವನದ ಅಂಬೇಡ್ಕರ್ ಪ್ರತಿಮೆ ಮುಂದೆ ಶುಕ್ರವಾರ ಪ್ರತಿಭಟನೆ ನಡೆಸಿದರು.



ಡಾ.ಅಂಬೇಡ್ಕರ್ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅಗೌರವದಿಂದ ಮಾತನಾಡಿದ್ದಾರೆಂದು ಆರೋಪಿಸಿ ವಕೀಲರು ಮೈಸೂರು ನ್ಯಾಯಾಲಯದ ಮುಂಭಾಗದ ಗಾಂಧಿ ಪ್ರತಿಮೆ ಬಳಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಡಾ.ಅಂಬೇಡ್ಕರ್ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಖಂಡಿಸಿ

ಕಾಂಗ್ರೆಸ್ ಕಾರ್ಯಕರ್ತರಿಂದ ಬಿಜೆಪಿ ಕಚೇರಿ ಮುತ್ತಿಗೆಗೆ ಯತ್ನ

ಮೈಸೂರು, ಡಿ.20(ಬಿಎಲ್‌ಯು)– ಸಂಸತ್ ಅಧಿವೇಶನದಲ್ಲಿ ಡಾ.ಅಂಬೇಡ್ಕರ್ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅಗೌರವವಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ಇಂದು ಮೈಸೂರಲ್ಲಿ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು.

ಸಂವಿಧಾನ ವಿರೋಧಿಗಳಾದ 'ಬಿಜೆಪಿಗರೇ ಭಾರತ ಬಿಟ್ಟು ತೊಲಗಿ' ಘೋಷವಾಕ್ಯದೊಂದಿಗೆ ನಗರದ ನ್ಯಾಯಾಲಯದ ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು ಅಮಿತ್ ಶಾ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು.

ಸಂಸತ್ತು ನಮಗೆ ದೇವಸ್ಥಾನ ಇದ್ದಂತೆ, ಸಂವಿಧಾನ ರಚನೆ ಮಾಡಿದ ಡಾ.ಅಂಬೇಡ್ಕರ್ ನಮಗೆ ದೇವರಿದಂತೆ. ದೇಶದ ಕಾನೂನಿನ ಆಧಾರ ಸ್ತಂಭವಾಗಿರುವ ಸಂವಿಧಾನ ರೂಪುಗೊಳ್ಳಲು ಕಾರಣರಾದ ಡಾ.ಅಂಬೇಡ್ಕರ್ ಬಗ್ಗೆ ಅಮಿತ್ ಶಾ ಅಗೌರವವಾಗಿ ಮಾತನಾಡಿರುವುದು ದೇಶದ ಜನರ ಕಿಚ್ಚು ಹೊತ್ತಿಸಿದಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸಚಿವ ಸಂಪುಟದಿಂದ ಅಮಿತ್ ಶಾ ಅವರನ್ನು ವಜಾ ಮಾಡುವ ಬದಲು ಸಮರ್ಥನೆ ಮಾಡಿಕೊಳ್ಳುತ್ತಿರುವ ಪ್ರಧಾನಿ ನರೇಂದ್ರ ಮೋದಿ ಕೂಡ ದಲಿತ ವಿರೋಧಿ ಧೋರಣೆ ತಳೆದಿದ್ದಾರೆ ಎಂದು ಆರೋಪಿಸಿದರು.

ಈ ವೇಳೆ ಅಮಿತ್ ಶಾ ಅವರ ಭಾವಚಿತ್ರಕ್ಕೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದ ಕಾಂಗ್ರೆಸ್ ಕಾರ್ಯಕರ್ತರು ಅಮಿತ್ ಶಾ ಅವರನ್ನು ಕೂಡಲೇ ಸಚಿವ ಸ್ಥಾನದಿಂದ ವಜಾ ಮಾಡಬೇಕೆಂದು ಆಗ್ರಹಿಸಿದರು.



ಡಾ.ಅಂಬೇಡ್ಕರ್ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆ ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಶುಕ್ರವಾರ ಮೈಸೂರಿನ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು.

ಬಿಜೆಪಿಗರೇ ದೇಶ ಬಿಟ್ಟು ತೊಲಗಿ ಎಂದು ಘೋಷಣೆ ಕೂಗಿದ ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿ ವಿರುದ್ಧ ಧಿಕ್ಕಾರ ಕೂಗಿದರು.

ತರುವಾಯ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ಕಾಂಗ್ರೆಸ್ ಕಾರ್ಯಕರ್ತರು ಮುಂದಾದರು. ಆದರೆ ನ್ಯಾಯಾಲಯದ ಎದುರಿನ ಎಂ.ಜಿ.ರಸ್ತೆಯ ಎರಡು ಬದಿಗೆ ಬ್ಯಾರಿಕೇಡ್ ಹಾಕಿ ಬಂದ್ ಮಾಡಿದ್ದರಿಂದ ಕಾಂಗ್ರೆಸ್ ಕಾರ್ಯಕರ್ತರು ಪೊಲೀಸ್ ಪಡೆ ಭೇದಿಸಿ ಮುನ್ನುಗಲು ಸಾಧ್ಯವಾಗಲಿಲ್ಲ. ಕಾಂಗ್ರೆಸ್ ಕಾರ್ಯಕರ್ತರಿಗಿಂತ ಬಂದೋ ಬಸ್ತ್‌ಗೆ ನಿಯೋಜನೆಗೊಂಡಿದ್ದ ಪೊಲೀಸರೆ ಹೆಚ್ಚಿನ ಸಂಖ್ಯೆಯಲ್ಲಿದ್ದ ಕಾರಣ ಯಾರೂ ಬ್ಯಾರಿಕೇಡ್ ತಳ್ಳಿ ಮುಂದೆ ಹೋಗಲು ಸಾಧ್ಯವಾಗಲಿಲ್ಲ.

ಪ್ರತಿಭಟನಾನಿರತರನ್ನು ಪೊಲೀಸರು ವಶಕ್ಕೆ ಪಡೆಯಲಿಲ್ಲ. ಇದರಿಂದ ಬ್ಯಾರಿಕೇಡ್ ಹಾಕಿದ್ದ ಸ್ಥಳದಲ್ಲಿ ಅರ್ಧ ಗಂಟೆಗಳ ಕಾಲ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು ಅಲ್ಲಿಂದ ನಿರ್ಗಮಿಸಿದರು.

ಕೆಪಿಸಿಸಿ ರಾಜ್ಯ ವಕ್ತಾರ ಎಂ.ಲಕ್ಷ್ಮಣ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಮಾಜಿ ಮೇಯರ್ ಮೋದಾಮಣಿ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕೇರ್ಗಳ್ಳಿಯಲ್ಲಿ ಒತ್ತುವರಿಯಾಗಿದ್ದ ಸರ್ಕಾರಿ ಜಮೀನು ತೆರವು



ಮೈಸೂರು, ಡಿ.20(ಆರ್‌ಕೆ)–ನಕಲಿ ದಾಖಲೆ ಸೃಷ್ಟಿಸಿಕೊಂಡು ಮೈಸೂರು ತಾಲೂಕು ಕೇರ್ಗಳ್ಳಿಯಲ್ಲಿ ಒತ್ತುವರಿ ಮಾಡಿ ಕಬಳಿಸಲೆತ್ನಿಸಿದ್ದ ಸರ್ಕಾರಿ ಜಮೀನನ್ನು ಮೈಸೂರು ತಾಲೂಕು ಆಡಳಿತವು ರಕ್ಷಿಸಿ, ವಶಕ್ಕೆ ಪಡೆದಿದೆ.

ಜಿಲ್ಲಾಧಿಕಾರಿ ನ್ಯಾಯಾಲಯದ ತೀರ್ಪಿನಂತೆ ಜಿಲ್ಲಾಧಿಕಾರಿಗಳ ನಿರ್ದೇಶನದನ್ವಯ ತಹಶೀಲ್ದಾರ್ ಕೆ.ಎಂ.ಮಹೇಶ್ ಕುಮಾರ್ ಅವರು ಇಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ ಜೆಸಿಬಿ ಸಹಾಯದಿಂದ ಕಾರ್ಯಾಚರಣೆ ನಡೆಸಿ 25 ಕೋಟಿ ರೂ. ಮೌಲ್ಯದ 5 ಎಕರೆ 20 ಗುಂಟೆ ಜಮೀನನ್ನು ವಶಕ್ಕೆ ಪಡೆದು ಸ್ಥಳದಲ್ಲಿ 'ಸರ್ಕಾರಿ ಜಮೀನು' ಫಲಕ ಅಳವಡಿಸಿದರು.

ಜೂಲೇಗೌಡ, ಜವರೇಗೌಡ ಎಂಬುವರು, ಮೈಸೂರು ತಾಲೂಕು, ಜಯಪುರ ಹೋಬಳಿ, ಕೇರ್ಗಳ್ಳಿ ಗ್ರಾಮದ ಸರ್ವೆ ನಂಬರ್ 60ರಲ್ಲಿ ಐದೂವರೆ ಎಕರೆ ಜಮೀನಿಗೆ ನಕಲಿ ದಾಖಲೆ ಸೃಷ್ಟಿಸಿ ತಮ್ಮ ಹೆಸರಿಗೆ ಅನಧಿಕೃತವಾಗಿ ಖಾತೆ ಮಾಡಿಸಿಕೊಂಡಿದ್ದರು.

ಈ ಸಂಬಂಧ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ವಾದ–ಪ್ರತಿವಾದ ಆಲಿಸಿದ ಜಿಲ್ಲಾಧಿಕಾರಿಗಳು, ದಾಖಲೆ ಪತ್ರಗಳಿಂದ ಅದು ಸರ್ಕಾರಿ ಜಮೀನು ಎಂಬುದು ದೃಢಪಟ್ಟ ಹಿನ್ನೆಲೆಯಲ್ಲಿ ಸ್ವಾಧೀನಾನುಭವದಲ್ಲಿದ್ದವರನ್ನು ತೆರವುಗೊಳಿಸಿ ಆಸ್ತಿ ವಶಕ್ಕೆ ಪಡೆಯುವಂತೆ ಆದೇಶ ನೀಡಿದ್ದರು.

ಭೂ ದಾಖಲೆಗಳ ಸಹಾಯಕ ನಿರ್ದೇಶಕ ಚಿಕ್ಕಣ್ಣ, ಉಪ ತಹಶೀಲ್ದಾರ್ ಕೆ.ಎಸ್. ಕುಬೇರಪ್ಪ, ರೆವಿನ್ಯೂ ಇನ್ಸ್‌ಪೆಕ್ಟರ್ ಸಿ.ವಿ. ಲೋಹಿತ್, ಗ್ರಾಮ ಆಡಳಿತ ಅಧಿಕಾರಿ ಅಮರೇಶ, ಭೂಮಾಪಕ ರವಿಕುಮಾರ್ ಅವರು ತೆರವು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಮೈಸೂರು ಉಪ ವಿಭಾಗದ ಡಿವೈಎಸ್ಪಿ ಕರೀಂ ರಾವತರ್, ಜಯಪುರ ಠಾಣೆ ಸಬ್ ಇನ್ಸ್‌ಪೆಕ್ಟರ್ ಪ್ರಕಾಶ್ ಇತ್ತಿಮನಿ ಅವರು ತೆರವು ಕಾರ್ಯಾಚರಣೆಗೆ ಪೊಲೀಸ್ ಬಂದೋಬಸ್ತ್ ಮಾಡಿದ್ದರು.

ರಾಷ್ಟ್ರೀಯ ಪಿಂಚಣಿದಾರರ ದಿನ ಆಚರಣೆ

ಮೈಸೂರು, ಡಿ.20(ಎಂಟಿವೈ)– ಸರ್ಕಾರ ಪಿಂಚಣಿದಾರರ ಸಮಸ್ಯೆಗಳನ್ನು ಕಾಲ ಕಾಲಕ್ಕೆ ಬಗೆಹರಿಸುವ ಮೂಲಕ ಸಂಧ್ಯಾ ಕಾಲದಲ್ಲಿ ಆಗಬಹುದಾದ ತೊಂದರೆ ತಪ್ಪಿಸಬೇಕು ಎಂದು ಕವಿಪ್ರನಿನಿ ಮತ್ತು ಎಸ್ಕಾಂಗಳ ಪಿಂಚಣಿ ಮತ್ತು ಕುಟುಂಬ ಪಿಂಚಣಿದಾರರ ಸಂಘದ ಅಧ್ಯಕ್ಷ ಚಿಕ್ಕಚಲ್ಲಯ್ಯ ಮನವಿ ಮಾಡಿದ್ದಾರೆ.

ಮೈಸೂರಿನ ಡಾ.ಅಂಬೇಡ್ಕರ್ (ಎಫ್‌ಟಿಎಸ್) ವೃತ್ತದ ಬಳಿಯಿರುವ ಕವಿಪ್ರನಿನಿ ಮತ್ತು ಎಸ್ಕಾಂಗಳ ಪಿಂಚಣಿ ಮತ್ತು ಕುಟುಂಬ ಪಿಂಚಣಿದಾರರ ಸಂಘದ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಪಿಂಚಣಿದಾರರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದಿವಂಗತ ಡಿ.ಎಸ್. ನಕರ ಅವರ ಅವಿರತ ಹೋರಾಟದ ಫಲವಾಗಿ ಇಂದು ನಿವೃತ್ತ ಪಿಂಚಣಿದಾರರು ಗೌರವ ಯುತವಾಗಿ ಬದುಕಲು ಸಾಧ್ಯವಾಗಿದೆ. 1982ರಂದು ಭಾರತದ ಸರ್ವೋಚ್ಚ ನ್ಯಾಯಾಲಯವು, ಪಿಂಚಣಿ ನಿವೃತ್ತಿದಾರರ ಹಕ್ಕು, ಉಚ್ಛ್ರಾಯ ಕಾಲದಲ್ಲಿ ಏಳಿಗೆಗಾಗಿ ಶ್ರಮಿಸಿದ್ದಕ್ಕಾಗಿ ಕೊಡ ಮಾಡುವ ಸಾಮಾಜಿಕ ನ್ಯಾಯ ಎಂಬುದಾಗಿ ತೀರ್ಪು ಪ್ರಕಟಿಸಿದೆ. ಇದರಿಂದ ಪಿಂಚಣಿದಾರರಿಗೆ ನೆರವಾಗಿದೆ. ಆದರೆ, ಸರ್ಕಾರ ಪಿಂಚಣಿದಾರರ ಸಮಸ್ಯೆ ಗಳನ್ನು ಕಾಲ ಕಾಲಕ್ಕೆ ತಕ್ಕಂತೆ ಬಗೆಹರಿಸುವ ಮೂಲಕ ನಿವೃತ್ತ ಪಿಂಚಣಿದಾರರ ನೌಕರರಿಗೆ ನೆರವಾಗಬೇಕು. ಅಲ್ಲದೆ, ಪಿಂಚಣಿದಾರರು ಹಾಗೂ ಕುಟುಂಬ ಪಿಂಚಣಿದಾರರಿಗೆ ಸರಿಯಾದ ಸಮಯಕ್ಕೆ ಸೌಲಭ್ಯಗಳು ತಲುಪುವಂತೆ ಮಾಡಬೇಕು ಎಂದರು.

ಇದೇ ವೇಳೆ 80 ವರ್ಷ ಮೇಲ್ಪಟ್ಟ ಸಂಘದ ಹಿರಿಯ ಸದಸ್ಯರಾದ ಎಸ್.ಎನ್. ಪ್ರಸಾದ್, ಕೆ.ಎಂ. ತ್ರಿಲೋಚನ ಆರಾಧ್ಯ ಅವರನ್ನು ಸನ್ಮಾನಿಸಲಾಯಿತು. ಅಲ್ಲದೆ, ನೂತನ ವರ್ಷದ ಸಂಘದ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ಬಿ. ಕಾಳಯ್ಯ, ಜಂಟಿ ಕಾರ್ಯದರ್ಶಿ ಸಿ.ಎನ್. ಶಿವರಾಮಯ್ಯ, ನಿರ್ದೇಶಕರಾದ ಇಂದ್ರಾಣಿ, ಖಜಾಂಚಿ ಕೆ.ಕೆ. ಕಲೀಲ್ ರೆಹಮಾನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಡಾ.ಅಂಬೇಡ್ಕರ್(ಎಫ್‌ಟಿಎಸ್) ವೃತ್ತದ ಬಳಿಯಿರುವ ಕವಿಪ್ರನಿನಿ ಮತ್ತು ಎಸ್ಕಾಂಗಳ ಪಿಂಚಣಿ ಮತ್ತು ಕುಟುಂಬ ಪಿಂಚಣಿದಾರರ ಸಂಘದ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಪಿಂಚಣಿದಾರರ ದಿನಾಚರಣೆ ಕಾರ್ಯಕ್ರಮ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.

ದೇಶ - ವಿದೇಶ

ಬಾಂಗ್ಲಾದಲ್ಲಿ ಮಹಿಳೆಯರ ಹಕ್ಕುಗಳಿಗೆ ಬೆದರಿಕೆ



ಢಾಕಾ: ಮಹಿಳೆಯರ ಹಕ್ಕುಗಳಿಗೆ ಸಂಬಂಧಿಸಿದಂತೆ ಬಾಂಗ್ಲಾದೇಶ ಮತ್ತೊಂದು ಇರಾನ್ ಅಥವಾ ಅಫ್ಘಾನಿಸ್ತಾನವಾಗುವುದೇ ಎಂಬ ಸಂದೇಹ ಉಂಟಾಗಿದೆ ದೇಶದಲ್ಲಿ ಇತ್ತೀಚಿನ ರಾಜಕೀಯ ಕ್ಷೋಭೆಗೆ ಮಹಿಳೆಯರು ತುತ್ತಾಗುತ್ತಿದ್ದಾರೆ. ಪ್ರಸ್ತುತ ಮಧ್ಯಂತರ ಸರ್ಕಾರ ಮಹಿಳೆಯರು ಇಲ್ಲಿಯವರೆಗೆ ಹೊಂದಿದ್ದ ಸ್ವಾತಂತ್ರ್ಯವನ್ನು ದೂರ ಮಾಡುವ ಉದ್ದೇಶವನ್ನು ತೋರುತ್ತಿದೆ.

ನಾನು ಎಂದಿಗೂ ನನ್ನ ತಲೆ ಅಥವಾ ಮುಖವನ್ನು ಸ್ಕಾರ್ಫ್‌ನಿಂದ ಮುಚ್ಚಿಲ್ಲ, ಮುಂದೆಯೂ ಮಾಡುವುದಿಲ್ಲ. ನಾನು ಮಹಿಳೆಯಾಗಿ ಸಾದಾ ಜೀವನವನ್ನು ಸಾಗಿಸಲು ಬಯಸುತ್ತೇನೆ. ನಾನು ಧರಿಸುವುದನ್ನು ಯಾರಾದರೂ ಏಕೆ ವಿರೋಧಿಸಬೇಕು? ಪಾಶ್ಚಿಮಾತ್ಯ ಶೈಲಿಯ ಬಟ್ಟೆಗಳನ್ನು ಧರಿಸಿರುವ ಮಹಿಳೆ ಆಗಾಗ್ಗೆ ಬೆದರಿಕೆಗೆ, ಅವಮಾನಕ್ಕೆ ಮತ್ತು ಕೆಟ್ಟ ಮಾತುಗಳಿಗೆ ಒಳಗಾಗುತ್ತಾರೆ ಎಂದು ಢಾಕಾದ ಬರಹಗಾರರಾದ ನಸೀಮ್ ರಹತ್ ಬಾನೊ ಹೇಳುತ್ತಾರೆ.

ವಯಸ್ಸಾದ ಮಹಿಳೆಯರು ಮಾತ್ರವಲ್ಲ ಹದಿಹರೆಯದ ಹೆಣ್ಣುಮಕ್ಕಳೂ ಈಗ ಧರ್ಮೋಪದೇಶ ಮತ್ತು ಉಪದೇಶಕ್ಕೆ ಒಳಗಾಗುತ್ತಿದ್ದಾರೆ. ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ಪದಚ್ಯುತಿ ನಂತರ ಮಹಿಳೆಯರ ಸ್ಥಿತಿಗತಿ ಬದಲಾಗುತ್ತಿರುವಂತೆ ತೋರುತ್ತಿದೆ.

33 ವರ್ಷ ಬಳಿಕ ಘೋರ ಆರ್ಥಿಕ ಹಿಂಜರಿತಕ್ಕೆ ತುತ್ತಾದ ನ್ಯೂಜಿಲ್ಯಾಂಡ್

ವೆಲ್ಲಿಂಗ್ಟನ್: ಕೊರೊನಾ ವಕ್ಕರಿಸಿದ ಬಳಿಕ ಅಮೆರಿಕ ಸೇರಿದಂತೆ ಹಲವು ದೇಶಗಳಲ್ಲಿ ಆರ್ಥಿಕ ಹಿಂಜರಿತ ಸೃಷ್ಟಿಯಾಗಿದೆ. ಈ ಪೈಕಿ ನ್ಯೂಜಿಲೆಂಡ್ ಇದೀಗ ಅತೀ ಕೆಟ್ಟ ಎಕನಾಮಿಕ್ ಕ್ರೈಸಿಸ್ ಎದುರಿಸುತ್ತಿದೆ. 1991ರ ಬಳಿಕ ನ್ಯೂಜಿಲೆಂಡ್ ಎದುರಿಸುತ್ತಿರುವ ಅತೀ ದೊಡ್ಡ ಎಕನಾಮಿಕ್ ಕ್ರೈಸಿಸ್ ಇದಾಗಿದೆ ನ್ಯೂಜಿಲ್ಯಾಂಡ್ ಜಿಡಿಪಿ ಶೇಕಡಾ 1ಕ್ಕೆ ಕುಸಿದಿದೆ ಪರಿಣಾಮ ನ್ಯೂಜಿಲೆಂಡ್ ಮಾತ್ರವಲ್ಲ ಕೆಲ ದೇಶಗಳಲ್ಲಿ ಉದ್ಯೋಗ ಕಡಿತ ಭೀತಿ ಎದುರಾಗಿದೆ. ಈಗಾಗಲೇ ಹಲವು ಕಂಪನಿಗಳು ಉದ್ಯೋಗ ಕಡಿತ, ವೇತನ ಕಡಿತ ಮಾಡಿದೆ. ಯೊರೋಪಿಯನ್ ದೇಶಗಳಲ್ಲಿನ ಈ ರೀತಿಯ ಆರ್ಥಿಕ ಸಂಕಷ್ಟ ಇತರ ದೇಶಗಳ ಮೇಲೂ ಪರಿಣಾಮ ಬೀರಲಿದೆ.

2024 ಆರ್ಥಿಕ ವರ್ಷದ ಮೊದಲೆರಡು ಕ್ವಾರ್ಟರ್‌ನಲ್ಲಿ ನ್ಯೂಜಿಲೆಂಡ್ ಜಿಡಿಪಿ ಶೇಕಡಾ 1.1ರಷ್ಟಿತ್ತು ಆದರೆ 3ನೇ ಕ್ವಾರ್ಟರ್‌ಗೆ ಇದೀಗ ಶೇಕಡಾ 1ಕ್ಕೆ ಕುಸಿತ ಕಂಡಿದೆ. ಉತ್ಪಾದನೆ, ನಿರ್ಮಾಣ ಹಾಗೂ ಯುಟಿಲಿಟಿ ಕ್ಷೇತ್ರದಲ್ಲಿನ ಹೊಡೆತ ನ್ಯೂಜಿಲೆಂಡ್ ದೇಶವನ್ನು ಕಂಗಾಲು ಮಾಡಿದೆ ಇತ್ತ ನ್ಯೂಜಿ ಲೆಂಡ್‌ನಲ್ಲಿ ಹೂಡಿಕೆ ಬಂಡವಾಳ ಹರಿದುಬರುವಿಕೆ ಕೂಡ ನಿಂತು ಹೋಗಿದೆ ಇದು ನ್ಯೂಜಿಲೆಂಡ್ ರಿಸರ್ವ್ ಬ್ಯಾಂಕ್ ಒತ್ತಡ ಹೆಚ್ಚಿಸಿದೆ. ಕೈಗಾರಿಕೆ ಹಾಗೂ ಉತ್ಪಾದನಾ ವಲಯಗಳಲ್ಲಿ ಹೊಡೆತ ಬಿದ್ದಿದ್ದು ದೇಶದ ಆರ್ಥಿಕತೆ ಮೇಲೆ ತೀವ್ರ ಪರಿಣಾಮ ಬೀರಿದೆ. ವಿದೇಶಗಳಿಗೆ ನ್ಯೂಜಿಲೆಂಡ್ ಮಾಡುತ್ತಿದ್ದ ರಫ್ತು ಪ್ರಮಾಣ ಕುಸಿದಿದೆ.

ಭೀಕರ ಅಪಘಾತದಲ್ಲಿ ಗ್ಯಾಸ್ ಟ್ಯಾಂಕರ್ ಸ್ಫೋಟ; 12 ಮಂದಿ ಸುಟ್ಟು ಕರಕಲು

ಜೈಪುರ: ಇಂದು ಮುಂಜಾನೆ ಸಿಎನ್‌ಜಿ ಗ್ಯಾಸ್ ಟ್ಯಾಂಕರ್ ಮತ್ತು ಇನ್ನೊಂದು ಟ್ರಕ್ ನಡುವೆ ಭೀಕರ ರಸ್ತೆ ಅಪಘಾತದ ನಂತರ ಭಾರೀ ಸ್ಫೋಟ ಸಂಭವಿಸಿದ ಘಟನೆ ರಾಜಸ್ಥಾನದಲ್ಲಿ ನಡೆದಿದೆ ಅಪಘಾತದ ತೀವ್ರತೆಗೆ ಸಿಎನ್‌ಜಿ ಗ್ಯಾಸ್ ತುಂಬಿದ್ದ ಟ್ರಕ್ ಸ್ಫೋಟಗೊಂಡು ಬೆಂಕಿ ಹತ್ತಿದ್ದರಿಂದ ಕನಿಷ್ಠ 12 ಮಂದಿ ಸುಟ್ಟು ಕರಕಲಾಗಿದ್ದಾರೆ. ಸಿಎನ್‌ಜಿ ಟ್ರಕ್ ಮತ್ತು ಇನ್ನೊಂದು ಟ್ರಕ್ ನಡುವೆ ನಡೆದ ಡಿಕ್ಕಿಯ ತೀವ್ರತೆಗೆ ಸ್ಫೋಟ ಸಂಭವಿಸಿ ಮಾರ್ಗದಲ್ಲಿ ಸಂಚರಿಸುತ್ತಿದ್ದ ಇತರ ವಾಹನಗಳಿಗೂ ಬೆಂಕಿ ಆವರಿಸಿ ಸುಟ್ಟು ಹೋಗಿವೆ. ಹತ್ತಿರದಲ್ಲೇ ಸಂಚರಿಸುತ್ತಿದ್ದ ಬಸ್‌ಗೂ ಬೆಂಕಿ ಆವರಿಸುತ್ತಿದ್ದಾಗ ತಕ್ಷಣ ಇಳಿದ ಪ್ರಯಾಣಿಕರು ಓಡಿ ಹೋಗಿ ಪ್ರಾಣ ಉಳಿಸಿ ಕೊಂಡಿದ್ದಾರೆ. ಆದರೆ, 12ಕ್ಕೂ ಹೆಚ್ಚು ಮಂದಿ ಸುಟ್ಟು ಕರಕಲಾಗಿದ್ದಾರೆ. ಈಗಾಗಲೇ ಘಟನೆಯಲ್ಲಿ ಐದಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದು, ಅನೇಕ ಮಂದಿ ಸಾವು ಬದುಕಿನ ಮಧ್ಯೆ ಹೋರಾಡುತ್ತಿದ್ದಾರೆ. ಟ್ರಕ್‌ಗಳು ಮತ್ತು ಟ್ರಾಲಿಗಳು ಸೇರಿದಂತೆ ಸುಮಾರು 40 ವಾಹನಗಳು ಸುಟ್ಟುಹೋಗಿವೆ.

ಈ ಸಂಬಂಧ ಪ್ರತಿಕ್ರಿಯೆ ನೀಡಿರುವ ಸ್ಥಳೀಯ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಅಮಿತ್ ಕುಮಾರ್, ಜೈಪುರದ ಭುಕ್ರೋಟಾ ಪ್ರದೇಶದಲ್ಲಿ ಪೆಟ್ರೋಲ್ ಪಂಪ್ ಬಳಿ ಅಜ್ಮೀರ್ ಮುಖ್ಯ ರಸ್ತೆಯಲ್ಲಿ ಇಂದು ಮುಂಜಾನೆ ಅಪಘಾತ ಸಂಭವಿಸಿದೆ. ಸುಮಾರು ಎರಡು ಡಜನ್ ವಾಹನಗಳು ಬೆಂಕಿಗೆ ಆಹುತಿಯಾಗಿವೆ ಮತ್ತು ಅನೇಕ ಟ್ರಕ್‌ಗಳು, ಟ್ರಾಲಿಗಳು ಸುಟ್ಟು ಬೂದಿಯಾಗಿವೆ.

ಹರಿಯಾಣ ಮಾಜಿ ಸಿಎಂ ಓಂ ಪ್ರಕಾಶ್ ಚೌಟಾಲಾ ನಿಧನ




ಚಂಡೀಗಢ: ಭಾರತೀಯ ರಾಷ್ಟ್ರೀಯ ಲೋಕದಳ ಅಧ್ಯಕ್ಷ ಹಾಗೂ ಹರಿಯಾಣ ರಾಜ್ಯದ ಮಾಜಿ ಮುಖ್ಯಮಂತ್ರಿ ಓಂ ಪ್ರಕಾಶ್ ಚೌಟಾಲಾ (89) ಶುಕ್ರವಾರ ಗುರುಗ್ರಾಮದಲ್ಲಿ ನಿಧನರಾಗಿದ್ದಾರೆ. ಭಾರತದ ಮಾಜಿ ಉಪ ಪ್ರಧಾನಿ ಚೌಧರಿ ದೇವಿಲಾಲ್ ಅವರ ಪುತ್ರ ಓಂ ಪ್ರಕಾಶ್ ಚೌಟಾಲಾ ಅವರು ಹರಿಯಾಣದ 5ನೇ ಮುಖ್ಯಮಂತ್ರಿಯಾಗಿದ್ದರು. 27 ಮೇ 2022 ರಂದು ಸಿಬಿಐ ನ್ಯಾಯಾಲಯವು 16 ವರ್ಷಗಳಷ್ಟು ಹಳೆಯದಾದ ಅಕ್ರಮ ಆಸ್ತಿ ಪ್ರಕರಣದಲ್ಲಿ ಚೌಟಾಲಾ ಅವರಿಗೆ 4 ವರ್ಷಗಳ ಜೈಲು ಶಿಕ್ಷೆ ವಿಧಿಸಿತ್ತು. ಓಂ ಪ್ರಕಾಶ್ ಅವರ ಪತ್ನಿ ಸ್ನೇಹಲತಾ ಅವರು ಆಗಸ್ಟ್ 2019 ರಲ್ಲಿ ನಿಧನರಾಗಿದ್ದರು.

ಈ ದಂಪತಿಗೆ ಮೂವರು ಪುತ್ರಿಯರು ಮತ್ತು ಇಬ್ಬರು ಗಂಡು ಮಕ್ಕಳಿದ್ದಾರೆ. ಅಭಯ್ ಸಿಂಗ್ ಚೌಟಾಲಾ ಅವರು ಹರಿಯಾಣದ ಎಲೆನಾಬಾದ್ ಕ್ಷೇತ್ರದ ಶಾಸಕರಾಗಿದ್ದಾರೆ. ಅಲ್ಲದೇ ಅಕ್ಟೋಬರ್ 2014 ರಿಂದ ಮಾರ್ಚ್ 2019 ರವರೆಗೆ ಹರಿಯಾಣ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು.

ಓಂ ಪ್ರಕಾಶ್ ಚೌಟಾಲಾ ಅವರ ಮೊಮ್ಮಗ, ದುಶ್ಯಂತ್ ಅವರು ಜನತಾ ಪಕ್ಷದ ನಾಯಕರಾಗಿದ್ದಾರೆ ಮತ್ತು ಹರಿಯಾಣದ ಉಪಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. ಅವರು ಹಿಸಾರ್ ಕ್ಷೇತ್ರದಿಂದ ಲೋಕಸಭೆಯ ಮಾಜಿ ಸಂಸದರೂ ಆಗಿದ್ದಾರೆ.

ವಿದ್ಯುತ್ ಕಳ್ಳತನ: ಸಮಾಜವಾದಿ ಪಕ್ಷದ ಸಂಸದನಿಗೆ 1.91 ಕೋಟಿ ರೂ. ದಂಡ



ಸಂಭಾಲ್: ವಿದ್ಯುತ್ ಕಳ್ಳತನ ಮಾಡಿದ ಆರೋಪ ಎದುರಿಸುತ್ತಿದ್ದ ಉತ್ತರ ಪ್ರದೇಶದ ಸಂಭಾಲ್ ಕ್ಷೇತ್ರದ ಸಂಸದ ಜಿಯಾವುರ್ ರೆಹಮಾನ್ ಬಾರ್ಕ್‌ಗೆ ಅಲ್ಲಿನ ವಿದ್ಯುತ್ ಇಲಾಖೆ ಬರೊಬ್ಬರಿ 1.91 ಕೋಟಿ ರೂ ದಂಡ ವಿಧಿಸಿದ್ದು, ಅವರ ಮನೆಗೆ ವಿದ್ಯುತ್ ಸ್ಥಗಿತಗೊಳಿಸಿದೆ.

ಸಮಾಜವಾದಿ ಪಕ್ಷದ ಸಂಭಾಲ್ ಕ್ಷೇತ್ರದ ಸಂಸದ ಜಿಯಾವುರ್ ರೆಹಮಾನ್ ಬಾರ್ಕ್ ಅವರು ತಮ ಮನೆಗೆ ಅಕ್ರಮ ಸಂಪರ್ಕ ಪಡೆದ ಹಿನ್ನಲೆಯಲ್ಲಿ ವಿದ್ಯುತ್ ಕಳ್ಳತನದ ಆರೋಪದ ಮೇಲೆ ಉತ್ತರ ಪ್ರದೇಶ ಪೊಲೀಸರು ಪ್ರಕರಣ ದಾಖಲಿಸಿದ್ದರು.

ಸಂಸದ ಜಿಯಾವುರ್ ರೆಹಮಾನ್ ವಿರುದ್ಧ ವಿದ್ಯುತ್ ಕಾಯ್ದೆ, 2003, (ವಿದ್ಯುತ್ ಕಳ್ಳತನ ಅಥವಾ ಅನಧಿಕೃತ ವಿದ್ಯುತ್ ಬಳಕೆ) ಸೆಕ್ಷನ್ 135 ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ವಿದ್ಯುತ್ ಪರೀಕ್ಷಾ ಪ್ರಯೋಗಾಲಯದಿಂದ ಪಡೆದ ಗ್ರಾಹಕರ ಮೀಟರ್ ಪರಿಶೀಲಿಸಿದಾಗ ಮೀಟರ್ ಬೈಪಾಸ್ ಮಾಡಿ ಅಕ್ರಮವಾಗಿ ವಿದ್ಯುತ್ ಬಳಕೆ ಮಾಡಿ ವಿದ್ಯುತ್ ಕಳ್ಳತನ ಮಾಡಿರುವುದು ಸ್ಪಷ್ಟವಾಗಿದೆ ಎಂದು ವಿದ್ಯುತ್ ಇಲಾಖೆ ಅಧಿಕಾರಿಯೊಬ್ಬರು ನೀಡಿದ ದೂರಿನ ಮೇರೆಗೆ FIR ದಾಖಲಿಸಲಾಗಿತ್ತು. ಭಾರೀ ಭದ್ರತೆಯ ನಡುವೆ ಸಂಸದರ ನಿವಾಸವನ್ನು ಇಲಾಖೆ ಪರಿಶೀಲನೆ ಕೂಡ ನಡೆಸಿತ್ತು.

ಮೈಸೂರು ಮಿತ್ರ ಶನಿವಾರ 21 ಡಿಸೆಂಬರ್ 2024

ಮೂರನೇ ಪುಟದಿಂದ

ಸಿ.ಟಿ.ರವಿ ತಕ್ಷಣ ಬಿಡುಗಡೆ

ಆರೋಪಿಯನ್ನು ಕೊಲೆಗಾರ ಎಂದಿದ್ದು, ಸಚಿವರ ವಿರುದ್ಧ ಮಾಡಿದ ಟಿಪ್ಪಣಿ ದುರದೃಷ್ಟಕರ. ಇಬ್ಬರೂ ನಮ್ಮ ಜನಪ್ರತಿನಿಧಿಗಳೇ, ಅವರೇ ಈ ರೀತಿ ನಡೆದುಕೊಂಡರೆ ಹೇಗೆ ಎಂದರು. ಇದಕ್ಕೂ ಮುನ್ನ ರವಿ ಪರ ವಕೀಲ ಸಂದೇಶ ಚೌಟ ವಾದ ಮಂಡಿಸಿ, ನಮ್ಮ ಕಕ್ಷಿದಾರರಿಗೆ ನೋಟಿಸ್ ನೀಡದೆ, ಅವರನ್ನು ಇಡೀ ರಾತ್ರಿ ರಸ್ತೆಯಲ್ಲಿ ಸುತ್ತಾಡಿಸಿದ್ದಾರೆ, ಹಲ್ಲೆಯೂ ನಡೆದಿದೆ ಎಂದರಲ್ಲದೆ, ಕೂಡಲೇ ಎಫ್ಐಆರ್ ರದ್ದುಪಡಿಸಬೇಕು, ಜೊತೆಗೆ ತಕ್ಷಣ ಬಿಡುಗಡೆಗೆ ಆದೇಶಿಸಬೇಕು ಎಂದು ಮನವಿ ಮಾಡಿದರು.

ಪ್ರತಿವಾದ ಮಂಡಿಸಿದ ವಿಶೇಷ ಅಭಿಯೋಜಕರು, ಆರೋಪಿಗೆ ನೋಟಿಸ್ ನೀಡಲಾಗಿತ್ತು, ಅವರ ವರ್ತನೆ ಆಕ್ಷೇಪಾರ್ಹವಾಗಿದ್ದು, ಅವರ ಮೇಲಿನ ಎಫ್ಐಆರ್ ರದ್ದುಪಡಿಸಬಾರದು ಎಂದು ಮನವಿ ಮಾಡಿದರು. ಪ್ರಕರಣವನ್ನು ನ್ಯಾಯಾಲಯ ವಿಚಾರಣೆಗೆ ಕೈಗೆತ್ತಿಕೊಳ್ಳುತ್ತಿದ್ದಂತೆ ವಾದ-ಪ್ರತಿವಾದ ಆಲಿಸಿದ ನ್ಯಾಯಮೂರ್ತಿಗಳು ತಕ್ಷಣ ಮುಂದಿನ ವಿಚಾರಣೆಯನ್ನು ನಾಳೆಗೆ ಮುಂದೂಡಿದರು.

ನಿನ್ನೆ ಬಂಧನಕ್ಕೊಳಗಾದ ಸಿ.ಟಿ.ರವಿ ಅವರನ್ನು ಬೆಳಗಾವಿ ಪೊಲೀಸರು ರಾತ್ರಿಯಿಡೀ ವಿವಿಧ ಜಿಲ್ಲೆಯ ಗ್ರಾಮ ವ್ಯಾಪ್ತಿ ಸುತ್ತಾಡಿಸಿಕೊಂಡು ಇಂದು ಬೆಳಗ್ಗೆ ಅಲ್ಲಿನ ಬೆಳಗಾವಿ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಹಾಜರುಪಡಿಸಿದರು. ವಾದ-ಪ್ರತಿವಾದ ಆಲಿಸಿದ ನ್ಯಾಯಾಧೀಶರು, ಆರೋಪಿ ಸ್ಥಾನದಲ್ಲಿದ್ದ ರವಿ ಅವರಿಂದ ಹೇಳಿಕೆ ಪಡೆದರು. ಗುರುವಾರ ಮಧ್ಯಾಹ್ನ ಸುವರ್ಣವಿಧಾನಸೌಧದ ಕಾರಿಡಾರ್‌ನಲ್ಲಿ, ನಿನ್ನ ಹೆಣ ಚಿಕ್ಕಮಗಳೂರಿಗೆ ಹೋಗುತ್ತದೆ ಎಂದು ಮಂತ್ರಿ ಧಮಕಿ ಹಾಕಿದ್ದರು. ನಿಮ್ಮನ್ನು ನೋಡಿಕೊಳ್ಳುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸದನದಲ್ಲೇ ಧಮ್ಕಿ ಹಾಕಿದ್ದರು.

ರಾತ್ರಿ ನನ್ನನ್ನು ಪೊಲೀಸರು ಎಲ್ಲೆಲ್ಲೋ ಕರೆದೊಯ್ಯುತ್ತಿದ್ದರು. ದೇವರ ಮೇಲೆ ಭಾರ ಹಾಕಿ ನಾನೂ ಹೋದೆ. ನನ್ನನ್ನು ಪೊಲೀಸರು ನಿಗೂಢ ಜಾಗಕ್ಕೆ ಕರೆತಂದು ನಿಲ್ಲಿಸಿದ ಕಡೆಯಲ್ಲೆಲ್ಲಾ, ದೂರ ಹೋಗಿ ಮಾತನಾಡಿಕೊಳ್ಳುತ್ತಿದ್ದರು ಎಂದು ಹೇಳಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಾಧೀಶರು ಪ್ರಕರಣದ ವಿಚಾರಣೆಯನ್ನು ಮಧ್ಯಾಹ್ನಕ್ಕೆ ಮುಂದೂಡಿದರು. ನಂತರ ರವಿ ಅವರು ವಿಧಾನಪರಿಷತ್ ಸದಸ್ಯರಾಗಿರುವುದರಿಂದ ಅವರ ಮೊಕದ್ದಮೆ ವಿಚಾರಣೆ ತಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ನ್ಯಾಯಾಧೀಶರು, ಪ್ರಕರಣವನ್ನು ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ವರ್ಗಾಯಿಸಿದ ನಂತರ ಪೊಲೀಸರು, ಬಿಗಿ ಬಂದೋಬಸ್ತ್‌ನಲ್ಲಿ ರವಿ ಅವರನ್ನು ಬೆಂಗಳೂರಿಗೆ ಕರೆದೊಯ್ದರು.

ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಏನಾಯ್ತು: ಇದೇ ವೇಳೆ, ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯದಲ್ಲೂ ಇದೇ ಪ್ರಕರಣದ ವಿಚಾರಣೆ ನಡೆಯಿತು.

ಇಲ್ಲಿ ಸಿ.ಟಿ.ರವಿ ಪರ ವಾದ ಮಂಡಿಸಿದ ಹಿರಿಯ ವಕೀಲ ಅಶೋಕ್ ಹಾರನಹಳ್ಳಿ, ಬಂಧನದ ಕಾರಣದ ಕುರಿತು ಕಕ್ಷಿದಾರರಿಗೆ, ಕುಟುಂಬ ಸದಸ್ಯರಿಗೆ ಯಾವುದೇ ಮಾಹಿತಿ ನೀಡಿಲ್ಲ. ಅಲ್ಲದೇ ದೂರುದಾರರು ಓರ್ವ ಸಚಿವೆಯಾಗಿದ್ದಾರೆ, ಅವರಿಗೆ ಬೆದರಿಕೆ ಹಾಕಲು ಸಾಧ್ಯವೇ? ದೂರುದಾರರ ಬೆಂಬಲಿಗರೇ ತಮ್ಮ ಕಕ್ಷಿದಾರರ ಮೇಲೆ ಹಲ್ಲೆಗೆ ಯತ್ನಿಸಿದ್ದಾರೆ ಎಂದರು.

ಅಲ್ಲದೆ ಕಕ್ಷಿದಾರರು ಪ್ರಕರಣದ ಸಾಕ್ಷಿನಾಶ ಮಾಡಬಹುದೆಂದು ಹೇಳಿದ್ದಾರೆ. ಆದರೆ ಸಾಕ್ಷಿಗಳೆಲ್ಲಾ ಆಡಳಿತ ಪಕ್ಷದವರೇ ಆಗಿರುವಾಗ ಸಾಕ್ಷಿ ನಾಶ ಹೇಗೆ ಸಾಧ್ಯ. ಸದನದ ವಸ್ತುಗಳನ್ನು ಹಾನಿ ಮಾಡಿದರೆ ಅದನ್ನು ಪ್ರಶ್ನಿಸಬಹುದೇ ವಿನಹ ಸದನದ ಮಾತುಗಳಿಗೆ ಪ್ರಕರಣ ದಾಖಲಿಸುವ ಅವಕಾಶ ನೀಡಿದರೆ ಸದಸ್ಯರು ಸ್ವತಂತ್ರವಾಗಿ ಮಾತನಾಡುವ ಅವಕಾಶ ಕಳೆದುಕೊಳ್ಳುತ್ತಾರೆ. ಒಬ್ಬರಿ ಗೊಬ್ಬರ ವಿರುದ್ಧ ಪ್ರಕರಣ ದಾಖಲು ಮಾಡುತ್ತಾ ಹೋಗುತ್ತಾರೆ. ಆದ್ದರಿಂದ ಪ್ರಕರಣದಲ್ಲಿ ಸಿ.ಟಿ.ರವಿ ಅವರಿಗೆ ಮಧ್ಯಂತರ ಜಾಮೀನು ನೀಡಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಯಾಗಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪರ ವಾದ ಮಂಡಿಸಿದ ಹಿರಿಯ ವಕೀಲ ಎಂ.ಎಸ್.ಶ್ಯಾಮ್ ಸುಂದರ್, ಆರೋಪಿ ಅಸಾಂವಿಧಾನಿಕ ಪದ ಬಳಕೆ ಮಾಡಿ ಸುಮಾರು ಬಾರಿ ದೂರುದಾರರನ್ನು ಕರೆದಿದ್ದಾರೆ. ಓರ್ವ ಶಾಸಕ ಮಹಿಳೆಯನ್ನು ಹಾಗೆ ಕರೆದಿದ್ದಾರೆ ಎಂದು ಸೀತಾ ಸೊರೇನ್ ಪ್ರಕರಣ ಉಲ್ಲೇಖಿಸಿ ವಾದ ಮಂಡಿಸಿದರು. ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯ ಮಧ್ಯಂತರ ಜಾಮೀನು ಅರ್ಜಿಯ ವಿಚಾರಣೆಯನ್ನು ಶನಿವಾರಕ್ಕೆ ಮುಂದೂಡಿತು.

ದೈಹಿಕವಾಗಿ ಹಲ್ಲೆ ಕೂಡ ಮಾಡಲಾಗಿದೆ

ಅಲ್ಲಿಂದ ನೇರವಾಗಿ ದಾವಣಗೆರೆ ತಲುಪಿದ ಸಿ.ಟಿ.ರವಿ ಹಾಗೂ ಬಿಜೆಪಿ ನಾಯಕರು, ಅಲ್ಲಿ ತುರ್ತು ಪತ್ರಿಕಾಗೋಷ್ಠಿಯನ್ನು ನಡೆಸಿದರು. ಆ ಸಂದರ್ಭದಲ್ಲಿ ಸಿ.ಟಿ.ರವಿಯವರನ್ನು ಸರ್ಕಾರ ನಡೆಸಿಕೊಂಡ ರೀತಿ ವಿರುದ್ಧ ಕಿಡಿಕಾರಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಿ.ಟಿ.ರವಿ, ನನ್ನ ಮೇಲೆ ದೈಹಿಕವಾಗಿ ಹಲ್ಲೆ ಮಾಡುವಂತಹ ಕೆಲಸ ಮಾಡಲಾಗಿದೆ. ಬೆಳಗಾವಿಯಲ್ಲಿ ನನ್ನನ್ನು ಬಂಧಿಸಿದ್ದರು. ಜನಪ್ರತಿನಿಧಿಯಾದ ನನಗೆ ನೋಟಿಸ್ ಕೂಡ ನೀಡಿಲ್ಲ. ಖಾನಾಪುರಕ್ಕೆ ಕರೆದೊಯ್ದ ಅವರು, ಅಲ್ಲಿಂದ ಬೆಂಗಳೂರಿಗೆ ಕರೆದೊಯ್ಯುತ್ತೇವೆ ಎಂದು ಹೇಳಿ ಸುಮಾರು ನಾಲ್ಕು ಜಿಲ್ಲೆಗಳು, 50ಕ್ಕೂ ಹೆಚ್ಚು ಗ್ರಾಮಗಳ ಸುತ್ತಾಡಿಸಿ, 11 ಗಂಟೆ ಬಳಿಕ ಮತ್ತೆ ಬೆಳಗಾವಿಗೆ ಕರೆತಂದಿದ್ದಾರೆ.

ರವಿಯವರ ಸುತ್ತಿಸಿ ಆತಂಕ ಉಂಟು ಮಾಡಲಾಗಿದೆ: ಪತ್ರಿಕಾಗೋಷ್ಠಿಯ ಆರಂಭದಲ್ಲಿ ಮಾತನಾಡಿದ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ರವಿಯವರನ್ನು ಬಂಧಿಸಿದ ನಂತರ 500 ಕಿ.ಮೀ. ಸುತ್ತಾಡಿಸಿ, ಎಲ್ಲೆಲ್ಲೋ ಹೋಗಿ, ಕಾಡಲ್ಲಿ ಕಾರು ನಿಲ್ಲಿಸಿದ್ದಾರೆ. ನಿರ್ಜನ ಪ್ರದೇಶದಲ್ಲಿ ಕಾರು ನಿಲ್ಲಿಸಿ ರವಿಯವರಲ್ಲಿ ಆತಂಕ ಸೃಷ್ಟಿಸಲಾಗಿದೆ. ಸುವರ್ಣಸೌಧದಲ್ಲಿ ಅವರ ಮೇಲೆ ಹಲ್ಲೆಯಾದಾಗ ಅವರ ತಲೆಗೆ ಪೆಟ್ಟಾಗಿದೆ. ಪೆಟ್ಟು ಬಿದ್ದು ರಕ್ತ ಸೋರಿ ಮೂರು ತಾಸುಗಳಾದರೂ ಅವರನ್ನು ಆಸ್ಪತ್ರೆಗೆ ಕರೆದೊಯ್ದಿಲ್ಲ. ಬೆಳಗಾವಿಯಲ್ಲಿ ಮ್ಯಾಜಿಸ್ಟ್ರೇಟ್ ಮುಂದೆ ಅವರನ್ನು ಹಾಜರುಪಡಿಸಲಾಗಿತ್ತು. ಅಲ್ಲಿಂದ ಬೆಂಗಳೂರಿಗೆ ಕರೆದೊಯ್ಯುವುದಾಗಿ ಹೇಳಿ ಅನಗತ್ಯವಾಗಿ 500 ಕಿ.ಮೀ.ಗೂ ಹೆಚ್ಚು ರಾತ್ರಿಯಿಡೀ ಸುತ್ತಾಡಿಸುವ ಉದ್ದೇಶವೇ ನಿತ್ತು ಎಂದು ಪ್ರಶ್ನಿಸಿದರು.

ಏಕಾಏಕಿ ಬಂಧಿಸಿದ್ದು ಏಕೆ: ನಂತರ ಮಾತನಾಡಿದ ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್, ರಾಜ್ಯಸಭಾ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ಸಿನಿಂದ ರಾಜ್ಯಸಭೆಗೆ ಆಯ್ಕೆಯಾದವರ ಬೆಂಬಲಿಗರು ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗಿದ್ದರು. ಆಗ ಅವರನ್ನು ತಕ್ಷಣ ಬಂಧಿಸಿರಲಿಲ್ಲ. ಅವರಿಗೆ ಮೊದಲು ನೋಟಿಸ್ ನೀಡಿ ಆನಂತರ ಹೇಳಿಕೆ ಪಡೆಯಲು ಠಾಣೆಗೆ ಕರೆಯಲಾಗಿತ್ತು. ಅವರ ಧ್ವನಿ ಪರೀಕ್ಷೆಯ ಎಫ್ಎಸ್ಎಲ್ ವರದಿಯಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂದು ಕೂಗಿದವರು ಇವರೇ ಎಂಬುದು ಸಾಬೀತಾದ ಮೇಲೆ ಆನಂತರ ಅವರನ್ನು ಬಂಧಿಸಲಾಯಿತು. ಅವರಿಗೆ ಜೈಲಿನಲ್ಲಿ ಬಿರಿಯಾನಿ, ಕಬಾಬ್ ಎಲ್ಲಾ ಕೊಟ್ಟು ಐಷಾರಾಮಿಯಾಗಿ ನೋಡಿಕೊಳ್ಳಲಾಯಿತು.

ಈಗ ಸಿ.ಟಿ.ರವಿ ವಿಚಾರ ಬಂದಾಗ ಅವರಿಗೆ ಒಂದು ನೋಟಿಸನ್ನೂ ನೀಡದೇ ಏಕಾಏಕಿ ಬಂಧಿಸಲಾಗಿದೆ. ಬಂಧಿಸಿದ ನಂತರ ಪೊಲೀಸರು ಚಿತ್ರ-ವಿಚಿತ್ರವಾಗಿ ನಡೆದುಕೊಂಡಿದ್ದಾರೆ. ಇದೇ ವೇಳೆ, ಸಿ.ಟಿ.ರವಿ ಮಾಡಿದ್ದು ತಪ್ಪು. ಅವರಿಗೆ ಶಿಕ್ಷೆಯಾಗಬೇಕು ಅಂತ ಹೇಳಲು ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಯಾರು ಎಂದು ಪ್ರಶ್ನಿಸಿದ ಅಶೋಕ್, ಲಕ್ಷ್ಮೀ ಹೆಬ್ಬಾಳ್ಕರ್ ಹಾಗೂ ಸಿ.ಟಿ.ರವಿ ನಡುವೆ ನಡೆದಿದೆ ಎನ್ನಲಾಗಿರುವ ಗಲಾಟೆ ವಿಧಾನ ಪರಿಷತ್‌ನಲ್ಲಿ ಘಟಿಸಿದೆ. ಅಲ್ಲಿನ ನಡಾವಳಿಗಳನ್ನು ಪ್ರಶ್ನಿಸಲು ಪ್ರತ್ಯೇಕ ಕಾನೂನು ಇದೆ. ಮೊದಲು ಸದನದೊಳಗೆ ಇದು ತನಿಖೆಯಾಗಬೇಕು, ಸಿ.ಟಿ.ರವಿ ತಪ್ಪು ಮಾಡಿದ್ದು ಅಂತ ಸಾಬೀತಾಗಬೇಕು, ಸಭಾಪತಿಗಳು ತಪ್ಪು ಮಾಡಿದ್ದಾರೆಂದು ತೀರ್ಪು ಕೊಡಬೇಕು, ಆನಂತರ ಸಭಾಪತಿಯವರು ದೂರು ಕೊಟ್ಟ ಮೇಲೆ ಅದು ನ್ಯಾಯಾಲಯದಲ್ಲಿ ವಿಚಾರಣೆಗೊಳಪಡಬೇಕು. ಇಷ್ಟೆಲ್ಲಾ ಶಿಷ್ಟಾಚಾರ ಇರುವಾಗ ಪೊಲೀಸರನ್ನು ಕರೆಸಿ ಅರೆಸ್ಟ್ ಮಾಡಿಸಿದ್ದು ಏಕೆ ಎಂದು ಅಶೋಕ್ ಅವರು ಪ್ರಶ್ನಿಸಿದರು.

ಸುರಂಗ ಮಾರ್ಗಕ್ಕೆ ಕೇಂದ್ರದ ಚಿಂತನೆ

ಜೀವಿಗಳಿಗೂ ಸಮಸ್ಯೆಯಾಗದಂತೆ, ರಾತ್ರಿ ವೇಳೆಯೂ ವಾಹನ ಸಂಚಾರಕ್ಕೆ ಅವಕಾಶವಾಗುವಂತೆ ಅರಣ್ಯ ಪ್ರದೇಶದಲ್ಲಿ 6 ಪಥಗಳ ಸುರಂಗ ಮಾರ್ಗ ನಿರ್ಮಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ ಎಂದು ಮಲಯಾಳಿ ಮಾಧ್ಯಮವೊಂದು ವರದಿ ಮಾಡಿದೆ.

ಕೇರಳದ ರಾಜ್ಯಸಭಾ ಸಂಸದ ಜಾನ್ ಬ್ರಿಟ್ಸ್ ಅವರು ಬಂಡೀಪುರ ರಸ್ತೆ ಸಮಸ್ಯೆಯ ವಿಚಾರವಾಗಿ ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರನ್ನು ಬುಧವಾರ ಭೇಟಿಯಾಗಿದ್ದರು. ಈ ವೇಳೆ ಗಡ್ಕರಿ ಅವರು ಸುರಂಗ ಮಾರ್ಗದ ವಿಚಾರ ಪ್ರಸ್ತಾಪಿಸಿದ್ದಾರೆ. ಈ ಸಂಬಂಧ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಸುರಂಗ ಮಾರ್ಗ ರೂಪಿಸುವ ಸಂಬಂಧ ವಿಸ್ತೃತ ಯೋಜನಾ ವರದಿ(ಡಿಪಿಆರ್) ಸಿದ್ಧಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದೆ.

ಈ ಹಿಂದೆ ಬಂಡೀಪುರ ರಸ್ತೆಯಲ್ಲಿ ಎಲಿವೇಟೆಡ್ ರಸ್ತೆ ನಿರ್ಮಿಸುವ ಪ್ರಸ್ತಾಪವಿತ್ತಾದರೂ ಅದು ಕಾರ್ಯಸಾಧುವಲ್ಲ ಎಂಬ ಕಾರಣಕ್ಕೆ ಆ ಯೋಜನೆಯನ್ನು ಕೈಬಿಡಲಾಗಿದೆ. ಹೀಗಾಗಿ ವನ್ಯಪ್ರಾಣಿಗಳಿಗೆ ಯಾವುದೇ ತೊಂದರೆಯಾಗದಂತೆ ಸುರಂಗ ಮಾರ್ಗ ನಿರ್ಮಿಸುವುದೇ ಸೂಕ್ತ ಎಂಬ ನಿರ್ಧಾರಕ್ಕೆ ಕೇಂದ್ರ ರಸ್ತೆ ಸಾರಿಗೆ ಸಚಿವಾಲಯ ಬಂದಿದೆ. ಒಂದು ವೇಳೆ ಈ ಯೋಜನೆ ಕಾರ್ಯರೂಪಕ್ಕೆ ಬಂದರೆ ಕೇರಳದ ವಯನಾಡು, ಮೈಸೂರು ಮತ್ತು ಬೆಂಗಳೂರು ನಡುವಿನ ಸಂಚಾರ ಇನ್ನಷ್ಟು ಸುಗಮವಾಗುವುದಲ್ಲದೆ, ಬಂಡೀಪುರ ಹೆದ್ದಾರಿಯಲ್ಲಿ ಜಾರಿಯಲ್ಲಿರುವ ಒಂದೂವರೆ ದಶಕದಷ್ಟು ಹಳೆಯ ರಾತ್ರಿ ಸಂಚಾರ ನಿಷೇಧದ ಸಮಸ್ಯೆಗೆ ಮುಕ್ತಿ ಸಿಗಲಿದೆ. ಸದ್ಯ ರಾತ್ರಿ ಸಂಚಾರ ನಿರ್ಬಂಧ ಬಂಡೀಪುರ ಮೂಲಕ ಸಾಗುವ ಎನ್‌ಎಚ್ 766ನ 25 ಕಿ.ಮೀ.ಗೆ ಅನ್ವಯಿಸುತ್ತದೆ. ರಾತ್ರಿ 9 ಗಂಟೆಯಿಂದ ಬೆಳಗ್ಗೆ 6 ಗಂಟೆವರೆಗೆ ಈ ಮಾರ್ಗದಲ್ಲಿ ವಾಹನ ಸಂಚಾರಕ್ಕೆ ಸಂಪೂರ್ಣ ನಿರ್ಬಂಧವಿದೆ. ಸುರಂಗ ಮಾರ್ಗವೇನಾದರೂ ನಿರ್ಮಾಣವಾದರೆ ರಾತ್ರಿ ವೇಳೆಯೂ ವಾಹನಗಳು ಮುಕ್ತವಾಗಿ ಸಂಚರಿಸುವುದು ಸಾಧ್ಯವಾಗಲಿದೆ. ಬಂಡೀಪುರದಲ್ಲಿ ರಾತ್ರಿ ವೇಳೆ ಸಂಚಾರ ನಿರ್ಬಂಧ ಪ್ರಕರಣ ನ್ಯಾಯಾಲಯದಲ್ಲಿರುವು ದರಿಂದ ಕೇಂದ್ರ ಸರ್ಕಾರ ಈ ಹೊಸ ಪ್ರಸ್ತಾಪದ ಕುರಿತು ನ್ಯಾಯಾಲಯದ ಗಮನಕ್ಕೆ ತರಬೇಕಿದೆ.

'ಸಿ', 'ಡಿ' ದರ್ಜೆ ಭೂಮಿ ಮೀಸಲು ಅರಣ್ಯವನ್ನಾಗಿ ಪರಿವರ್ತಿಸುವ ಆದೇಶ ವಿರೋಧಿಸಿ

ಮಡಿಕೇರಿಯಲ್ಲಿ ಕೃಷಿಕರ ಬೃಹತ್ ಪ್ರತಿಭಟನೆ



ಮಡಿಕೇರಿ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಕೃಷಿಕರು ಮತ್ತು ಬೆಳೆಗಾರರು ಪ್ರತಿಭಟನೆ ನಡೆಸಿದರು.

ಮಡಿಕೇರಿ, ಡಿ.20–ಕೊಡಗು ಜಿಲ್ಲೆಯ ರೈತರ ಬದುಕಿಗೆ ಮಾರಕವಾಗಿರುವ 'ಸಿ' ಮತ್ತು 'ಡಿ' ದರ್ಜೆ ಭೂಮಿಯನ್ನು ಮೀಸಲು ಅರಣ್ಯವನ್ನಾಗಿ ಪರಿವರ್ತಿಸುವ ಆದೇಶ ವಿರೋಧಿಸಿ 'ನಮ್ಮ ಭೂಮಿ ನಮ್ಮ ಹಕ್ಕು' ಘೋಷಣೆಯೊಂದಿಗೆ ಸಹಸ್ರಾರು ಕೃಷಿಕರು ನಗರದಲ್ಲಿ ಶುಕ್ರವಾರ ಬೃಹತ್ ಪ್ರತಿಭಟನೆ ನಡೆಸಿದರು.

ರೈತ ಹೋರಾಟ ಸಮಿತಿ ಅಧ್ಯಕ್ಷ ಸುರೇಶ್ ಚಕ್ರವರ್ತಿ, ರೈತ ಸಂಘದ ಜಿಲ್ಲಾಧ್ಯಕ್ಷ ಮನು ಸೋಮಯ್ಯ ನೇತೃತ್ವದಲ್ಲಿ ಪಕ್ಷಾತೀತವಾದ ಕೃಷಿಕರು ಮತ್ತು ಬೆಳೆಗಾರರು ನಗರದ ಫೀ.ಮಾ.ಕಾರ್ಯಪ್ಪ ವೃತ್ತದಿಂದ ಜನರಲ್ ತಿಮ್ಮಯ್ಯ ವೃತ್ತದವರೆಗೆ ಮೆರವಣಿಗೆ ನಡೆಸಿದರು. ನಂತರ ವೃತ್ತದಲ್ಲಿ ಬೃಹತ್ ಮಾನವ ಸರಪಳಿ ರಚಿಸಿ, ಅರ್ಧ ಗಂಟೆಗೂ ಹೆಚ್ಚು ಕಾಲ ರಸ್ತೆ ತಡೆ ನಡೆಸಿದರು. 'ನಮ್ಮಿಂದ ದೇಶ–ನಿಮ್ಮಿಂದ ನಾಶ' ಎಂದು ಒಕ್ಕೊರಲಿನ ಘೋಷಣೆ ಕೂಗಿದ ಕೃಷಿಕರು, ಸರ್ಕಾರ, ಅರಣ್ಯ ಹಾಗೂ ಕಂದಾಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಮೇಜರ್ ಮಂಗೇರಿರ ಮುತ್ತಣ್ಣ ವೃತ್ತದ ಮೂಲಕ ಖಾಸಗಿ ಬಸ್ ನಿಲ್ದಾಣ ಮಾರ್ಗ ವಾಗಿ ಗಾಂಧಿ ಮೈದಾನದವರೆಗೆ ಮೆರವಣಿಗೆ ನಡೆಸಲಾಯಿತು. ಎಲ್ಲಾ ಪ್ರತಿಭಟನಾಕಾರರು ಹಸಿರು ಶಾಲು ಹಾಗೂ ಬಾವುಟ ಹಿಡಿದಿದ್ದರಿಂದ ಕೆಲಕಾಲ ಮಂಜಿನ ನಗರಿ ಮಡಿಕೇರಿ ಹಸಿರು ಮಯವಾಗಿ ಪರಿವರ್ತನೆಯಾಯಿತು.

> ಎಲ್ಲಾ ಗೊಂದಲಗಳಿಗೆ ಅರಣ್ಯ ಇಲಾಖೆ ಅಧಿಕಾರಿಗಳ ಧೋರಣೆಯೇ ಕಾರಣ. ಅರಣ್ಯ ಇಲಾಖೆಗೆ ದೇಶದ ಕಾನೂನು ಅನ್ವಯವಾಗುವುದಿಲ್ಲ. ಹವಾನಿಯಂತ್ರಿತ ಕೊಠಡಿಯಲ್ಲಿ ಕುಳಿತು ಆದೇಶ ಮಾಡುವ ಅಧಿಕಾರಿಗಳು ಇಲ್ಲಸಲ್ಲದ ವಿಚಾರಗಳನ್ನು ಮುಂದಿಟ್ಟು ಜನರಿಗೆ ಕಿರುಕುಳ ನೀಡುತ್ತಿದ್ದಾರೆ. 'ಸಿ' ಮತ್ತು 'ಡಿ' ದರ್ಜೆ ಭೂಮಿಯನ್ನು ಮೀಸಲು ಅರಣ್ಯ ಮಾಡಲು ಮುಂದಾಗಿದ್ದಾರೆ.
> –ಕೆ.ಜಿ.ಬೋಪಯ್ಯ, ಮಾಜಿ ಶಾಸಕ

> ಸಮಸ್ಯೆ ಕುರಿತು ಪಕ್ಷಾತೀತ ನೆಲೆಗಟ್ಟಿನ ಹೋರಾಟ ರೂಪಿಸುವ ಮೂಲಕ ಸರ್ಕಾರದ ಕಣ್ತೆರೆಸಬೇಕಾಗಿದೆ. ಪ್ರಸ್ತುತ ಅರಣ್ಯ ಸಚಿವರಾಗಿರುವ ಈಶ್ವರ್ ಖಂಡ್ರೆ ಅವರು ಒಬ್ಬ ಪರಿಸರವಾದಿಯಾಗಿದ್ದಾರೆ. ಅವರು ತಮ್ಮ ಅಧಿಕಾರ ಅವಧಿಯಲ್ಲಿ ಜನರ ಬದುಕಿಗೆ ತೊಡಕನ್ನು ಉಂಟು ಮಾಡುವ ವನ್ಯಜೀವಿ ಉತ್ಪನ್ನಗಳನ್ನು ಮನೆಯಲ್ಲಿ ಇರಿಸಿಕೊಳ್ಳದಂತೆ, ಖಾಸಗಿ ಜಾಗಗಳ ಮರಗಳ ಸರ್ವೇ ನಡೆಸುವ ಹಾಗೂ 'ಸಿ' ಮತ್ತು 'ಡಿ' ಜಮೀನನ್ನು ಅರಣ್ಯಕ್ಕೆ ಹಸ್ತಾಂತರಿಸಬೇಕು ಎಣದು ಆದೇಶ ಹೊರಡಿಸಲಾಗಿದೆ. ಯಾವುದೇ ಗ್ರಾಮದಲ್ಲಿ 'ಸಿ' ಮತ್ತು 'ಡಿ' ದರ್ಜೆ ಭೂಮಿ ಸರ್ವೇ ಕಾರ್ಯಕ್ಕೆ ಅರಣ್ಯ ಇಲಾಖೆ ಮುಂದಾದಲ್ಲಿ ಅವರನ್ನು ಕೃಷಿಕರು ಹಿಂದಕ್ಕೆ ಕಳುಹಿಸಲಿದ್ದಾರೆ.
> –ಅಪ್ಪಚ್ಚು ರಂಜನ್, ಮಾಜಿ ಶಾಸಕ

ಹೋರಾಟಕ್ಕೆ ಸಮಗ್ರ ರೂಪ ನೀಡಿ: ಗಾಂಧಿ ಮೈದಾನದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಕುದುರೆಮುಖ ಪಶ್ಚಿಮ ಘಟ್ಟ ಮೂಲ ನಿವಾಸಿಗಳ ಹೋರಾಟ ಸಮಿತಿ ಮುಖಂಡ ಶೃಂಗೇರಿ ಸುಧೀರ್ ಕುಮಾರ್ ಮುರೊಳ್ಳಿ, 'ಸಿ' ಮತ್ತು 'ಡಿ' ಭೂಮಿ ಮತ್ತು ರೈತರ ಜ್ವಲಂತ ಸಮಸ್ಯೆಗಳ ವಿರುದ್ಧದ ಹೋರಾಟ ಕೇವಲ ಕೊಡಗು ಜಿಲ್ಲೆಗೆ ಸೀಮಿತವಾಗಬಾರದು. ಈ ಹೋರಾಟವನ್ನು ಮಲೆನಾಡು ಮತ್ತು ಕರಾವಳಿ ಭಾಗದ 36 ವಿಧಾನಸಭಾ ಕ್ಷೇತ್ರಗಳಿಗೆ ವಿಸ್ತರಿಸಿ, ಇದಕ್ಕೆ ಸಮಗ್ರ ರೂಪ ನೀಡಬೇಕು. ಹೀಗಾದಲ್ಲಿ ಮಾತ್ರವೇ ರಾಜ್ಯ ಮತ್ತು ಕೇಂದ್ರ ಸರ್ಕಾರ ಮಣಿಸಲು ಸಾಧ್ಯ ಎಂದರು.

ಮರು ಪರಿಶೀಲನೆಯಾಗಲಿ: ರೈತ ಹೋರಾಟ ಸಮಿತಿ ಕಾನೂನು ಸಲಹೆಗಾರ ಬಿ.ಜೆ.ದೀಪಕ್ ಮಾತನಾಡಿ, 'ಸಿ' ಮತ್ತು 'ಡಿ' ಭೂಮಿಯನ್ನು ಅವೈಜ್ಞಾನಿಕವಾಗಿ ಗುರುತಿಸಲಾಗಿದೆ. ಇದನ್ನು ಅರಣ್ಯ ಮತ್ತು ಕಂದಾಯ ಇಲಾಖೆ ಜಂಟಿಸರ್ವೇ ನಡೆಸುವ ಮೂಲಕ ಮರು ಪರಿಶೀಲಿಸಬೇಕು. ಈ ಸಮಸ್ಯೆ 1977ರಿಂದ ಆರಂಭವಾಗಿದ್ದರೂ ಕೃಷಿಕರಿಗೆ ತಿಳಿದಿರಲಿಲ್ಲ. ಸರ್ವೋಚ್ಚ ನ್ಯಾಯಾಲಯ ಅರಣ್ಯ ಕಾಯ್ದೆಯಡಿ 'ಸಿ', 'ಡಿ' ಭೂಮಿಯನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವಂತೆ ಸೂಚಿಸಿದೆ. ಇದರಿಂದ ಕೃಷಿಕರು ಸಂಕಷ್ಟಕ್ಕೆ ಸಿಲುಕುವಂತಾಗಿದೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಶಾಸಕ ಡಾ.ಮಂತರ್ ಗೌಡ, ಎಂಎಲ್‌ಸಿ ಸುಜಾ ಕುಶಾಲಪ್ಪ, ಮಾಜಿ ಎಂಎಲ್‌ಸಿಗಳಾದ ವೀಣಾ ಅಚ್ಚಯ್ಯ, ಎಸ್.ಜಿ.ಮೇದಪ್ಪ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ, ಜೆಡಿಎಸ್ ಪ್ರಮುಖ ಸಿ.ಎಲ್.ವಿಶ್ವ, ರೈತ ಹೋರಾಟ ಸಮಿತಿ ಸಂಚಾಲಕ ವಿ.ಕೆ.ಲೋಕೇಶ್, ಅನಿಲ್ ಬಗ್ಗನ, ರೈತ ಸಂಘದ ಪ್ರಮುಖರಾದ ಕೆ.ಎಸ್.ದಿನೇಶ್, ಮಿಥುನ್ ಹರಗ, ದಿವಾಕರ ಕೂತಿ, ಕೆ.ಪಿ.ಚಂದ್ರಕಲಾ, ಅನಿತಾ ಪೂವಯ್ಯ, ಎಸ್.ಆರ್.ಭರತ್, ನಾಪಂಡ ಮುತ್ತಪ್ಪ, ಹರಪ್ಪಳ್ಳಿ ರವೀಂದ್ರ, ಪಶ್ಚಿಮಘಟ್ಟ ಮೂಲ ನಿವಾಸಿಗಳ ಸಂಘಟನೆ ಹೆಚ್.ಎನ್.ಶ್ರೀಧರ್, ಕಿಸಾನ್ ಮೋರ್ಚಾ ಜಯರಾಂ, ಭಾಗಮಂಡಲ, ಸಂಪಾಜೆ ರೈತ ಹೋರಾಟ ಹಿತರಕ್ಷಣಾ ಸಮಿತಿಯರು ಪಾಲ್ಗೊಂಡಿದ್ದರು.

ಉನ್ನತ ಮಟ್ಟದ ಸಮಿತಿ ರಚನೆ



ಮಡಿಕೇರಿ: 'ಸಿ' ಮತ್ತು 'ಡಿ' ದರ್ಜೆ ಭೂಮಿ ಸಮಸ್ಯೆಗೆ ಸಂಬಂಧಿಸಿದಂತೆ ಕಂದಾಯ ಸಚಿವರು ಉನ್ನತ ಮಟ್ಟದ ಸಮಿತಿ ರಚನೆಗೆ ಮುಂದಾಗಿದ್ದು, ಸಮಸ್ಯೆ ಪರಿಹಾರವಾಗಲಿ ಎಂದು ಎಲ್ಲರೂ ಆಶಿಸೋಣ ಎಂದು ಸ್ಪೀಕರ್ ಯು.ಟಿ.ಖಾದರ್ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಿ' ಮತ್ತು 'ಡಿ' ಭೂಮಿ ಸಂಬಂಧ 20 ವರ್ಷಗಳಿಂದಲ್ಲೂ ಸಮಸ್ಯೆ ಇದೆ. ಈ ಕುರಿತು ರಾಜಕೀಯ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿಲ್ಲ. ಅದನ್ನು ಕಾನೂನಾತ್ಮಕವಾಗಿಯೇ ಪರಿಹರಿಸಬೇಕಿದೆ. ಈ ಬಗ್ಗೆ ಕೊಡಗಿನ ಶಾಸಕರಾದ ಡಾ.ಮಂತರ್‌ಗೌಡ ಮತ್ತು ಎ.ಎಸ್.ಪೊನ್ನಣ್ಣ ಬೆಳಗಾವಿ ಅಧಿವೇಶನದಲ್ಲಿ ಸುದೀರ್ಘವಾಗಿ ಚರ್ಚಿಸಿ ಸಮಸ್ಯೆ ಪರಿಹಾರಕ್ಕೆ ಆಗ್ರಹಿಸಿದ್ದರು. ಈ ವೇಳೆ ಕಂದಾಯ ಸಚಿವರು ಉನ್ನತ ಮಟ್ಟದ ಸಮಿತಿ ರಚನೆಗೆ ಮುಂದಾಗಿದ್ದು, ಶೀಘ್ರ ಸಭೆ ಕರೆಯಲಿದ್ದಾರೆ ಎಂದು ಹೇಳಿದರು. ಈ ವೇಳೆ ಶಾಸಕ ಡಾ.ಮಂತರ್‌ಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜಾ ಉತ್ತಪ್ಪ, ಮಾಜಿ ಎಂಎಲ್‌ಸಿ ವೀಣಾ ಅಚ್ಚಯ್ಯ, ಪಕ್ಷದ ಪ್ರಮುಖರಾದ ಕೆ.ಪಿ.ಚಂದ್ರಕಲಾ, ನಟೇಶ್‌ಗೌಡ, ಪ್ರಕಾಶ್ ಆಚಾರ್ಯ, ಹನೀಫ್, ಇಸ್ಮಾಯಿಲ್, ಕೆ.ಎ.ಯಾಕೂಬ್ ಹಾಜರಿದ್ದರು.

ಸಿ.ಟಿ.ರವಿ ಬಂಧನ ಖಂಡಿಸಿ ಬಿಜೆಪಿ ಪ್ರತಿಭಟನೆ...



ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಬಂಧನ ಖಂಡಿಸಿ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಮಡಿಕೇರಿ ಡಿಸಿ ಕಚೇರಿ ಎದುರು ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಮಾಜಿ ಶಾಸಕರಾದ ಕೆ.ಜಿ.ಬೋಪಯ್ಯ, ಎಂ.ಪಿ.ಅಪ್ಪಚ್ಚು ರಂಜನ್, ವಿಧಾನಪರಿಷತ್ ಮಾಜಿ ಸದಸ್ಯ ಸುನೀಲ್ ಸುಬ್ರಮಣಿ, ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ವಕ್ತಾರ ಬಿ.ಕೆ.ಅರುಣ್ ಕುಮಾರ್, ಕಾಂಗೀರ ಸತೀಶ್, ನಗರಾಧ್ಯಕ್ಷ ಉಮೇಶ್ ಸುಬ್ರಮಣಿ, ಮಹಿಳಾ ಜಿಲ್ಲಾಧ್ಯಕ್ಷೆ ಅನಿತಾ ಪೂವಯ್ಯ, ಮಾಜಿ ಅಧ್ಯಕ್ಷರಾದ ರಾಬಿನ್ ದೇವಯ್ಯ, ಬಿ.ಬಿ.ಭಾರತೀಶ್, ಪ್ರಮುಖರಾದ ಎಂ.ಬಿ.ದೇವಯ್ಯ, ಬಿ.ಕೆ.ಜಗದೀಶ್, ಮನು ಮಂಜುನಾಥ್, ಶ್ವೇತ, ಸಬಿತಾ ಇದ್ದರು

ಜೀಪ್ ಡಿಕ್ಕಿ: ಗಂಭೀರವಾಗಿ ಗಾಯಗೊಂಡಿದ್ದ ವ್ಯಕ್ತಿ ಸಾವು



ಹರೀಶ್

ಗೋಣಿಕೊಪ್ಪ, ಡಿ.20– ಜೀಪ್ ಡಿಕ್ಕಿ ಹೊಡೆದ ಪರಿಣಾಮ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಎಂ.ಎನ್.ಹರೀಶ್(32) ಶುಕ್ರವಾರ ಮುಂಜಾನೆ ಮೃತಪಟ್ಟಿದ್ದಾರೆ.

ಹರೀಶ್ ತಲೆ ಮತ್ತು ಎದೆ ಭಾಗಕ್ಕೆ ತೀವ್ರ ಪೆಟ್ಟಾಗಿತ್ತು. ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ಮುಂಜಾನೆ ಮೃತಪಟ್ಟಿದ್ದಾರೆ. ಡಿ.15ರಂದು ನಡೆದ ಅಪಘಾತದಲ್ಲಿ ತಿತಿಮತಿ ಹೆಬ್ಬಾಲೆ ನಿವಾಸಿ ಸಣ್ಣುವಂಡ ಜಯ(48) ಹಾಗೂ ದೇವರಪುರ ಸನತ್ (26) ಸ್ಥಳದಲ್ಲೇ ಮೃತಪಟ್ಟಿದ್ದರು. ಇದರಿಂದಾಗಿ ಅಪಘಾತದಲ್ಲಿ ಮೂವರು ಜೀವ ಕಳೆದುಕೊಂಡಂತಾಗಿದೆ.

ಡಿ.15ರಂದು ಈ ಮೂವರು ಹನುಮ ಜಯಂತಿ ಆಚರಣೆಗೆ ಸಿದ್ಧತೆ ನಡೆಸಿ ಬೈಕ್‌ನಲ್ಲಿ ಮನೆಗೆ ತೆರಳುತ್ತಿದ್ದರು. ಈ ವೇಳೆ ಗೋಣಿಕೊಪ್ಪ–ಮೈಸೂರು ಹೆದ್ದಾರಿಯ ಭದ್ರಗೋಳದಲ್ಲಿ ಬೈಕ್ ನಿಲ್ಲಿಸಿ ಮೂವರು ಮಾತನಾಡುತ್ತಿದ್ದರು. ಇದೇ ವೇಳೆ ತಿತಿಮತಿ ಕಡೆಯಿಂದ ಬಂದ ಜೀಪ್ ಮೂವರಿಗೂ ಡಿಕ್ಕಿ ಹೊಡೆದಿದೆ. ಪರಿಣಾಮ ಸಣ್ಣುವಂಡ ಜಯ ಹಾಗೂ ಸನತ್ ಸ್ಥಳದಲ್ಲೇ ಸಾವಿಗೀಡಾಗಿದ್ದರು. ತೀವ್ರವಾಗಿ ಗಾಯಗೊಂಡ ಎಂ.ಎನ್.ಹರೀಶನನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹರೀಶ್ ಮತ್ತು ಸನತ್ ಇಬ್ಬರು ಸಹೋದರರನ್ನು ಕುಟುಂಬ ಕಳೆದುಕೊಂಡಂತಾಗಿದೆ.

ಈ ಸಂಬಂಧ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಚಾರ ನಿಯಮ ಕಡ್ಡಾಯವಾಗಿ ಪಾಲಿಸಿ

ವಿರಾಜಪೇಟೆ, ಡಿ.20–ಆಟೋ ಚಾಲಕರು ಕಡ್ಡಾಯವಾಗಿ ರಸ್ತೆ ಸಂಚಾರ ನಿಯಮವನ್ನು ಪಾಲಿಸಬೇಕು ಎಂದು ವೃತ್ತ ನಿರೀಕ್ಷಕ ಅನುಪ್ ಮಾದಪ್ಪ ತಿಳಿಸಿದರು.

ವಿರಾಜಪೇಟೆ ನಗರ ಮತ್ತು ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ಆಟೋ ಮಾಲೀಕರು ಮತ್ತು ಚಾಲಕರಿಗೆ ಆಯೋಜಿಸಿದ್ದ ಸಂಚಾರ ನಿಯಮ ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಆಟೋ ಚಾಲನೆ ಸಂದರ್ಭ ಚಾಲಕರು ಮದ್ಯಪಾನ ಸೇವನೆ ಮಾಡಬಾರದು ಹಾಗೂ 8–9ನೇ ತರಗತಿ ಶಾಲಾ ಮಕ್ಕಳನ್ನು ಆಟೋಗಳಲ್ಲಿ ಕುರಿಸಿಕೊಂಡು ವೇಗವಾಗಿ ಚಾಲನೆ ಮಾಡಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಇತ್ತೀಚಿನ ದಿನಗಳಲ್ಲಿ ಕಾಫಿ ಮತ್ತು ಕಾಳುಮೆಣಸು ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿದ್ದು, ಆಟೋಗಳಲ್ಲಿ ಕಾಫಿ, ಕಾಳುಮೆಣಸು ಸಾಗಿಸುವಾಗ ಚಾಲಕರು ಎಚ್ಚರದಿಂದ ಇರಬೇಕು. ಕಳ್ಳತನದ ವಸ್ತುಗಳು ಎಂದು ಸಂಶಯ ಕಂಡು ಬಂದಲ್ಲಿ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು ಎಂದರು.

ನಗರ ಠಾಣಾಧಿಕಾರಿ ಹೆಚ್.ಎಸ್.ಪ್ರಮೋದ್ ಮಾತನಾಡಿ, ಆಟೋ ಚಾಲಕರು ಕಡ್ಡಾಯ ವಾಗಿ ಟ್ರಾಫಿಕ್ ನಿಯಮಗಳನ್ನು ಪಾಲಿಸ ಬೇಕು. ಪೊಲೀಸ್ ಠಾಣೆಯಲ್ಲಿ ವಿಟಿಪಿಎಸ್ ಕಾರ್ಡ್ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು. ಕಾರ್ಯಾಗಾರದಲ್ಲಿ ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿಗಳಾದ ಲತಾ, ವಾಣಿಶ್ರೀ, ಸಿಬ್ಬಂದಿ ಉಪಸ್ಥಿತರಿದ್ದರು.



ವಿರಾಜಪೇಟೆಯಲ್ಲಿ ನಡೆದ ಸಂಚಾರ ನಿಯಮ ಕುರಿತ ಕಾರ್ಯಾಗಾರದಲ್ಲಿ ವೃತ್ತ ನಿರೀಕ್ಷಕ ಅನುಪ್ ಮಾದಪ್ಪ ಮಾತನಾಡಿದರು.

ಸಾಮಾಜಿಕ ಭದ್ರತೆ ಯೋಜನೆ ನೋಂದಣಿ ಚುರುಕುಗೊಳಿಸಿ

ಪ್ರಗತಿ ಪರಿಶೀಲನಾ ಸಭೆಯಲ್ಲಿ ಬ್ಯಾಂಕ್ ಅಧಿಕಾರಿಗಳಿಗೆ ಡಿಸಿ ಶಿಲ್ಪನಾಗ್ ಸೂಚನೆ

ಚಾಮರಾಜನಗರ, ಡಿ.20–ಸಾಮಾಜಿಕ ಭದ್ರತೆ ಪ್ರಧಾನಮಂತ್ರಿ ಸುರಕ್ಷಾ ಹಾಗೂ ಜೀವನ್ ಜ್ಯೋತಿ ವಿಮಾ ಯೋಜನೆಯಡಿ ಸಾರ್ವಜನಿಕರು, ಸಂಘ–ಸಂಸ್ಥೆಗಳು, ಸರ್ಕಾರಿ, ಅರೆಸರ್ಕಾರಿ ನೌಕರರು ಸೇರಿದಂತೆ ಎಲ್ಲರಿಗೂ ನೋಂದಣಿ ಕಾರ್ಯ ಚುರುಕುಗೊಳಿಸಬೇಕು ಎಂದು ಬ್ಯಾಂಕ್ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ಸೂಚಿಸಿದರು.



ಚಾಮರಾಜನಗರದ ಜಿಲ್ಲಾಡಳಿತ ಭವನದಲ್ಲಿ ನಡೆದ ಪಿಎಂಎಸ್‌ಬಿವೈ ಹಾಗೂ ಪಿಎಂಜೆಜೆಬಿವೈ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಡಿಸಿ ಶಿಲ್ಪನಾಗ್ ಮಾತನಾಡಿದರು.

ನಗರದ ಜಿಲ್ಲಾಡಳಿತ ಭವನದ ಹಳೇ ಕೆಡಿಪಿ ಸಭಾಂಗಣದಲ್ಲಿ ಶುಕ್ರವಾರ ಸಾಮಾಜಿಕ ಭದ್ರತಾ ಅಭಿಯಾನದಡಿ ನಡೆದ ಪಿಎಂಎಸ್‌ಬಿವೈ ಹಾಗೂ ಪಿಎಂಜೆಜೆಬಿವೈ ಯೋಜನೆಗಳ ಅನುಷ್ಠಾನ ಕುರಿತ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಬ್ಯಾಂಕ್ ಖಾತೆ ಹೊಂದಿರುವ ಪ್ರತಿಯೊಬ್ಬರು ಬಹಳ ಅನುಕೂಲವಿರುವ ಈ ಎರಡು ಯೋಜನೆಗಳಿಗೆ ಬ್ಯಾಂಕ್ ಅಥವಾ ಅಂಚೆ ಕಚೇರಿಗಳಲ್ಲಿ ನೋಂದಣಿ ಮಾಡಿಸಬಹುದು. ಸರ್ಕಾರಿ, ಅರೆಸರ್ಕಾರಿ, ಎಲ್ಲಾ ನಗರ, ಸ್ಥಳೀಯ ಸಂಸ್ಥೆಗಳ ನೌಕರರು, ಸಿಬ್ಬಂದಿ, ಇಎಸ್ಐ, ಪಿಎಫ್ ಸೌಲಭ್ಯ ಹೊಂದಿರುವವರು ಹಾಗೂ ಇಲ್ಲದಿರುವ ಎಲ್ಲರೂ ಕಡ್ಡಾಯವಾಗಿ ಯೋಜನೆಗೆ ಒಳಪಡಬೇಕು ಎಂದು ತಿಳಿಸಿದರು.

ಪ್ರಧಾನಮಂತ್ರಿ ಸುರಕ್ಷಾ ಹಾಗೂ ಜೀವನ್ ಜ್ಯೋತಿ ವಿಮಾ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ 7.50 ಲಕ್ಷ ನೋಂದಣಿಗೆ ಗುರಿ ನೀಡಲಾಗಿದ್ದು, ಈಗಾಗಲೇ 1 ಲಕ್ಷದ 11 ಸಾವಿರ ಜನರು ನೋಂದಣಿಯಾಗಿದ್ದಾರೆ. ಇತರೆ ಜಿಲ್ಲೆಗಳ ಸರಾಸರಿ ನೋಂದಣಿ ಅನುಷ್ಠಾನದಲ್ಲಿ ಚಾಮರಾಜನಗರ ಜಿಲ್ಲೆ ಹಿನ್ನಡೆ ಹೊಂದಿದ್ದು, ಹೆಚ್ಚಿನ ನೋಂದಣಿ ಅಗತ್ಯವಿದೆ. ಈ ನಿಟ್ಟಿನಲ್ಲಿ ಎಲ್ಲಾ ಬ್ಯಾಂಕ್ ಅಧಿಕಾರಿಗಳು ಜಿಲ್ಲಾ ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಯೋಜನೆ ಶೇ.100 ರಷ್ಟು ಗುರಿ ಸಾಧನೆಗೆ ಮುಂದಾಗಬೇಕು ಎಂದು ನಿರ್ದೇಶಿಸಿದರು.

ನೋಂದಣಿ ಹೆಚ್ಚಳಕ್ಕೆ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಯೋಜನೆಗಳ ಅರಿವು ಮೂಡಿಸಿ ಶಿಬಿರ ಏರ್ಪಡಿಸಬೇಕು. ಪ್ರತಿ ಮನೆ ಮನೆಗೂ ಮಾಹಿತಿ ತಲುಪಿಸಬೇಕು. ನಗರ, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಒಂದು ದಿನದ ಆಟೋ ಪ್ರಚಾರ ಮಾಡಿಸಬೇಕು. ಎಲ್ಲಾ ಇಲಾಖೆ ಅಧಿಕಾರಿಗಳು, ತಹಸೀಲ್ದಾರ್‌ಗಳು, ತಾಪಂ ಇಓ ಮೂರು ದಿನದೊಳಗೆ ನಿಗದಿತ ಗುರಿ ಸಾಧನೆಗೆ ಕಾರ್ಯೋನ್ಮುಖರಾಗಬೇಕು ಎಂದು ಹೇಳಿದರು. ಸಭೆಯಲ್ಲಿ ಜಿಪಂ ಸಿಇಓ ಮೋನಾ ರೋತ್, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

> ಯಾವುದೇ ಬ್ಯಾಂಕ್ ಖಾತೆ ಹೊಂದಿರುವ 18 ರಿಂದ 70ರ ವಯೋಮಿತಿಯ ಎಲ್ಲರೂ ಪಿಎಂಎಸ್‌ಬಿವೈ ಯೋಜನೆಯಡಿ ವಾರ್ಷಿಕ 20 ರೂ. ಪ್ರೀಮಿಯಂ ಪಾವತಿಸಬೇಕು. ಆಕಸ್ಮಿಕವಾಗಿ ಅಪಘಾತದಿಂದ ಮರಣ ಹೊಂದಿದರೆ 2 ಲಕ್ಷ ರೂ, ಅಂಗವೈಕಲ್ಯಕ್ಕೆ 1 ಲಕ್ಷ ರೂ. ಮೊತ್ತದ ವಿಮಾ ಸುರಕ್ಷೆ ಇರಲಿದೆ. ಪಿಎಂಜೆಜೆಬಿವೈ ಯೋಜನೆಯಡಿ 18 ರಿಂದ 50 ವಯೋಮಿತಿಗೆ ವಾರ್ಷಿಕ 436 ರೂ. ಪ್ರೀಮಿಯಂ ಜಮೆಯಾದರೆ 2 ಲಕ್ಷ ರೂ. ಮೊತ್ತದ ವಿಮಾ ಸುರಕ್ಷೆ ದೊರೆಯಲಿದ್ದು, ಸಂಬಂಧಪಟ್ಟವರ ಉಳಿತಾಯ ಖಾತೆಯಿಂದ ಆಟೋ ಡೆಬಿಟ್ ಮೂಲಕ ಪ್ರೀಮಿಯಂ ಪಾವತಿಯಾಗಲಿದೆ. ಪ್ರತಿವರ್ಷ ಜೂ.1ರಿಂದ ಮುಂದಿನ ಮೇ 31ರವರೆಗೆ ಯೋಜನಾ ಅವಧಿಯಾಗಿದೆ.
> –ಸುರೇಖಾ, ಲೀಡ್ ಬ್ಯಾಂಕ್ ವ್ಯವಸ್ಥಾಪಕಿ

ಸಾಧಿಸುವ ಛಲ ಇದ್ದರೆ ಯಶಸ್ಸು; ಕ್ಯಾಪ್ಟನ್ ಸುಪ್ರೀತಾ



ಚಾಮರಾಜನಗರ, ಡಿ.20–ಸಾಧಿಸುವ ಛಲ, ಧೈರ್ಯ ಹಾಗೂ ಆತ್ಮವಿಶ್ವಾಸ ಇದ್ದರೆ ಜೀವನದಲ್ಲಿ ಯಶಸ್ಸು ನಮ್ಮದಾಗುತ್ತದೆ. ವಿದ್ಯಾರ್ಥಿಗಳಾದ ತಾವು ಕನಸ್ಸು ಮತ್ತು ಗುರಿಯೊಂದಿಗೆ ಮುನ್ನಡೆಯಬೇಕು ಎಂದು ಭಾರತೀಯ ವಾಯು ಪಡೆಯ ಪ್ರಥಮ ಮಹಿಳಾ ಕ್ಯಾಪ್ಟನ್ ಸಿ.ಟಿ.ಸುಪ್ರೀತಾ ತಿಳಿಸಿದರು.

ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ರೋಟರಿ ಸಂಸ್ಥೆ, ಜಯಶಾಮಾದೇವಿ ಜೈನ ಮಹಿಳಾ ಸಮಾಜ ಮತ್ತು ಇನ್ನರ್ ವ್ಹೀಲ್ ಸಂಸ್ಥೆಗಳ ಸಹಯೋಗದಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನನ್ನ ಈ ಸಾಧನೆಗೆ ತಂದೆ–ತಾಯಿಯರ ನೆರವು ಹಾಗೂ ಪ್ರೀತಿ ಕಾರಣವಾಗಿದೆ ಎಂದರು.

ಚಾಮರಾಜನಗರದವಳಾದ ನಾನು ಭಾರತೀಯ ವಾಯು ಪಡೆಯಲ್ಲಿ ಕ್ಯಾಪ್ಟನ್ ಆಗುತ್ತೇನೆ ಎಂದುಕೊಂಡಿರಲಿಲ್ಲ. ಆದರೆ, ಸೇನೆ ಸೇರಬೇಕೆಂಬ ಆಸೆ ಇತ್ತು ಎಲ್‌ಎಲ್‌ಬಿ ಪದವಿ ಓದಿದ್ದರು ಸಹ ನಾನು ನಿರುದ್ಯೋಗಿ ಎಂಬ ಭಾವನೆ ಇತ್ತು. ಪೆಟ್ರೋಲ್‌ಗೂ ಅಪ್ಪನನ್ನು ಕೇಳಬೇಕಾ ಎನಿಸಿದಾಗ ಆತ್ಮವಿಶ್ವಾಸದಿಂದ ಪರೀಕ್ಷೆ ಬರೆದು ಆಯ್ಕೆಯಾಗಿದೆ ಎಂದರು. ಡಿಸಿ ಶಿಲ್ಪನಾಗ್, ರೋಟರಿ ಅಧ್ಯಕ್ಷ ರಾಮಸಮುದ್ರ ನಾಗರಾಜು, ಪ್ರಾಂಶುಪಾಲ ಡಾ.ಎನ್.ಮಹದೇವಸ್ವಾಮಿ, ಜಯಶಾಮಾದೇವಿ ಜೈನ ಮಹಿಳಾ ಸಮಾಜದ ಅಧ್ಯಕ್ಷೆ ಪದ್ಮಶ್ರೀ ಬ್ರಹ್ಮೇಶ್‌ಕುಮಾರ್, ಇನ್ನರ್ ವ್ಹೀಲ್ ಅಧ್ಯಕ್ಷೆ ಪೂಜಾ ಸುಭಾಷ್, ಜೆಎಸ್‌ಎಸ್ ಪಿಆರ್‌ಓ ಆರ್.ಎಂ.ಸ್ವಾಮಿ, ರೋಟರಿ ಕಾರ್ಯ ದರ್ಶಿ ಗುರುಸ್ವಾಮಿ, ಸುಭಾಷ್, ಗಿರೀಶ್ ಕಾರ್ಯಕ್ರಮದಲ್ಲಿ ಇದ್ದರು.

ಚಾ.ನಗರದಲ್ಲಿ ಬಿಜೆಪಿ ಪ್ರತಿಭಟನೆ...



ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಬಂಧನ ಖಂಡಿಸಿ ಹಾಗೂ ಸಂಸದರ ಮೇಲೆ ರಾಹುಲ್ ಗಾಂಧಿ ಹಲ್ಲೆ ನಡೆಸಿದ್ದಾರೆ ಎಂದು ಬಿಜೆಪಿ ಮುಖಂಡರು, ಕಾರ್ಯಕರ್ತರು ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಿದರು. ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸೂರ್ಯ ಬಾಲರಾಜ್, ಮಾಜಿ ಅಧ್ಯಕ್ಷ ಪ್ರಣಯ್, ಮುಖಂಡರಾದ ಜಿ.ನಿಜಗುಣರಾಜು, ಎಸ್.ಮಹದೇವಯ್ಯ, ನಗರಸಭಾ ಸದಸ್ಯರಾದ ಚಂದ್ರಶೇಖರ್, ಶಿವು, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಅನಂದ್ ಭಗೀರಥ್, ಎಸ್.ಬಾಲಸುಬ್ರಮಣ್ಯ, ಚಂದ್ರಶೇಖರ್, ವಿರಾಟ್ ಶಿವು, ಮಂಜುನಾಥ್, ಕಾಡಹಳ್ಳಿ ಕುಮಾರ್, ನಟರಾಜು, ಕೂಸಣ್ಣ, ಶಿವಕುಮಾರ್, ಬಂಗಾರನಾಯಕ, ಮರಿಯಾಲ ಮಹೇಶ್, ವಿರೇಂದ್ರ ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ
0821–
2496522/23

ನಿವೇಶನ ಮಾರಾಟಕ್ಕಿದೆ
ನಿವೇಶನ ಸಂಖ್ಯೆ 117, 36x50 ಪೂರ್ವ ದಿಕ್ಕು (ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಶಿಕ್ಷಕರ ಬಡಾವಣೆ) (ಮೈಸೂರು ನಗರ ಪಾಲಿಕೆಗೆ ವ್ಯಾಪ್ತಿಗೆ ಒಳಪಟ್ಟಿರುತ್ತದೆ). ಡಾ॥ ರಾಜ್‌ಕುಮಾರ್ ರಸ್ತೆ, 1ನೇ ಹಂತ, ಮೈಸೂರು. ಸಂಪರ್ಕಿಸಿ:

9341299699, 9900666189

ಸೈಟ್ ಬೇಕಾಗಿದೆ
ವರುಣ, ವಾಜಮಂಗಲ, ATME ಕಾಲೇಜ್, ಬ್ಯಾಂಕರ್ಸ್ ಲೇಔಟ್, ಮಹಾಲಕ್ಷ್ಮಿ ಲೇಔಟ್ ಹಾಗೂ ಇತರೆ ಅಕ್ಕ–ಪಕ್ಕದ ಬಡಾವಣೆಗಳಲ್ಲಿ ಟಿ.ನರಸೀಪುರ ರಸ್ತೆ, ಬನ್ನೂರು ರಸ್ತೆ.

96860 71750

ಬ್ರಾಹ್ಮಣ ವರ ಬೇಕಾಗಿದೆ
ಬ್ರಾಹ್ಮಣ ವಧು, ವಯಸ್ಸು 28, ಎಸ್.ಎಸ್.ಎಲ್.ಸಿ ಕಲಿತಿರುವ/ ವಯಸ್ಸು 34, ಪಿಯುಸಿ ಕಲಿತಿರುವ/ ವಯಸ್ಸು 39, ಎಸ್.ಎಸ್.ಎಲ್.ಸಿ. ಕಲಿತಿರುವ, ವಯಸ್ಸು 42, ಪಿಯುಸಿ ಕಲಿತಿರುವ ವಧುವಿಗೆ ವರ ಬೇಕಾಗಿದೆ. ಬ್ರಾಹ್ಮಣ ವಧು–ವರರಿಗಾಗಿ ಸಂಪರ್ಕಿಸಿ. (ವಿಧವೆ, ವಿಚ್ಛೇದಿತರು ಸಂಪರ್ಕಿಸಬಹುದು)

87927 31562

SITE FOR SALE
40 x 60
TK Layout,
50 x 80
Suvarnanagara

99001 54322

ಮಾರಾಟಕ್ಕಿದೆ
75 x 50 ಸೈಟ್. ಜೊತೆಗೆ ಶೀಟಿನ ಮನೆ ನಂ.1782. 1ನೇ ರಸ್ತೆ, ಅಶೋಕ ಪುರಂ, ಮೈಸೂರು. ಪೂರ್ವ–ಪಶ್ಚಿಮ 75 ಅಡಿ, ಉತ್ತರ–ದಕ್ಷಿಣ 50ಅಡಿ, ಖುದ್ದಾಗಿ ಭೇಟಿಯಾಗುವುದು ವೆಂಕಟೇಶ್

93421 56882

WANTED
Wanted office Staff with Computer Operating skills, Tally preferred
Email: bilvashree24@gmail.com
WhatsApp

96060 62178

ಗೋಡೌನ್ ಮತ್ತು ಮಳಿಗೆ ಬಾಡಿಗೆಗೆ ದೊರೆಯುತ್ತದೆ.
ಮಾರುತಿ ಟೆಂಟ್ ಸರ್ಕಲ್ ಹತ್ತಿರ, ಮೌರ್ಯ ಆಸ್ಪತ್ರೆ ಹತ್ತಿರ, ಜನತಾನಗರ

83105 37063, 97410 51823

CHANGE OF NAME
I SANTOSH RANI W/o ARJN K KUTHNIKAR residing at 273, PADMAKALA, KERGALLI Main Road, RT NAGAR MYSURJ- 22 have changed my name to SANTOSHI ARUN KUTHNIKAR as per affidavit sworn by me before R GODAVARI, Notary, Mysuru city.

Sd/- SANTOSHI ARUN KUTHNIKAR

ವಧು ಬೇಕಾಗಿದೆ
ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಕುರುಬ ಜನಾಂಗಕ್ಕೆ ಸೇರಿದ ವರನಿಗೆ ವಧು ಬೇಕಾಗಿದೆ.

98801 53292
85539 63329

20 ಗುಂಟೆ ಜಮೀನು ಮಾರಾಟಕ್ಕಿದೆ
ಫಾರ್ಮ್ ಹೌಸ್ ಮಾಡಲು ಅಥವಾ ಇನ್ವೆಸ್ಟ್‌ಮೆಂಟ್‌ಗೆ ಮೈಸೂರಿನಿಂದ 35 ಕಿ.ಮೀ ಹಾಗೂ ಊಟಿ ರಸ್ತೆಯಿಂದ 5 ಕಿ.ಮೀ ಬೆಲೆ : 25 ಲಕ್ಷ

87221 23435

WANTED
Girl for Office Work
Qualification : Degree,
Language : Kannada, English, Hindi
Knowledge : Computer, Accountant and Tally. Contact

78922 96304

SITE FOR SALE
40 X 40 Corner,
Vishwamanava Enclave,
Vijayanagara 4th Stage

80508 21108

ನಿವೇಶನಗಳು ಮಾರಾಟಕ್ಕಿದೆ
ಮಾನಸಿ ನಗರ– 30 x 40
K.S.F.C ಬಡಾವಣೆ– 30 x 40
ವಿದ್ಯಾಶಂಕರ ಬಡಾವಣೆ– 30 x 40

94484 47035

ಕೆಲಸಕ್ಕೆ ಬೇಕಾಗಿದ್ದಾರೆ
ಕಂಪನಿಗಳಲ್ಲಿ, ಕಾರ್ಖಾನೆಗಳಲ್ಲಿ, ಹೋಟೆಲ್‌ಗಳಲ್ಲಿ, ಆಫೀಸ್‌ಗಳಲ್ಲಿ ಕೆಲಸ ಮಾಡಲು Helper ಗಳು ಸೆಕ್ಯೂರಿಟಿಗಳು, ಹೌಸ್‌ಕೀಪಿಂಗ್ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ. ವಿದ್ಯಾಭ್ಯಾಸ : 7th, 10th, PUC, Any Degree (B.Com) & ITI, Diploma, (ಹೆಬ್ಬಾಳ್, ಮೇಟಗಳ್ಳಿ, ಹಿನಕಲ್, ವಿಜಯನಗರ 3ನೇ ಹಂತ, ಕುವೆಂಪುನಗರ)
ES, PF ಸೌಲಭ್ಯವಿದೆ.

90364 61347, 96112 08553

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ನೈಟ್ ಶಿಫ್ಟ್ ಕೆಲಸಕ್ಕಾಗಿ ಪುರುಷರು/ ಹುಡುಗರು ಬೇಕಾಗಿದ್ದಾರೆ.
ಸಂಬಳ : 15,000/–

78997 54149

ಬಟ್ಟೆ ಅಂಗಡಿಗೆ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ

97420 76736
83100 93516

ಮಾರುವವರು ಕೊಳ್ಳುವವರು
20 X 30 ಡ್ಯುಪ್ಲೆಕ್ಸ್ ಮನೆ 72 ಲಕ್ಷ 3 ಬೆಡ್ ರೂಂ, ದಟ್ಟಗಳ್ಳಿ, ಸೈಟ್, ಹಳೇ ಮನೆ, ಹೊಸ ಮನೆ ಮಾರುವವರು ಕೊಳ್ಳುವವರು ಸಂಪರ್ಕಿಸಿ

99450 42875

ವಧು ಬೇಕಾಗಿದೆ
ಮೈಸೂರಿನಲ್ಲಿ ವಾಸವಿರುವ 42 ವರ್ಷದ ತಂದೆ ತಾಯಿ ಇಲ್ಲದ ವೀರಶೈವ ಲಿಂಗಾಯತ ವರನಿಗೆ ವೀರಶೈವ ಲಿಂಗಾಯತ ವಧು ಬೇಕಾಗಿದೆ.

99456 46919

30x40 WEST FACE, SRIRAMPURA, PREETHI LAYOUT
65 LAKHS

88612 20989

50x80 NORTH FACE, KBL Silicon City
3750 Per Sq.Ft.

88612 20989

SITES for SALE
JP Nagar Ring Road
30x40,34Lakhs
Near Gurur Bus Stop, Ramabainagar,Mysore.
(Corporation limits with E Katha)
DTCP approved 1.5 Kms from JP Nagar Ring Road

8660105902

ಜಮೀನು ಮಾರಾಟಕ್ಕಿದೆ
ಮೈಸೂರಿನ ಕುವೆಂಪು ನಗರದಿಂದ ಕೇವಲ 6 ಕಿಲೋಮೀಟರ್ ದೂರದಲ್ಲಿರುವ ಪೆರಿಫೆರಲ್ ರಿಂಗ್ ರೋಡ್‌ಗೆ ಹೊಂದಿಕೊಂಡಿರುವ ಲೇಔಟ್‌ಗೆ ಸೂಕ್ತವಾದ 8.5 ಎಕರೆ ಜಮೀನು ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ ಸಂಪರ್ಕಿಸಿ: ಡಾ.ಗುರುಪ್ರಸಾದ್

9036284426

ಬೇಕಾಗಿದ್ದಾರೆ
ಕೃಷಿ ಕೆಲಸಕ್ಕೆ ಬೇಕಾಗಿದ್ದಾರೆ.
4 Wheel ಚಾಲಕರಿಗೆ ಆದ್ಯತೆ.
ಸ್ಥಳ : ನಂಜನಗೂಡು.

70265 15156

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ ಕಂಪನಿ, Office Showroom & ಕಂಪನಿಗಳಿಗೆ 7th, 10th, PUC, ITI, Diploma, Any Degree Pass/Fail ಆದವರಿಗೆ Helpers, Packing, Security, Driving, Data entry, Admin, Back-end HR ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. (ESI+PF+OT) ಸೇರಿ. ಸಂಬಳ ರೂ.16,500/– ರಿಂದ 48,000/–

63641 03418
98864 88434

ಸೈಟ್ ಮಾರಾಟಕ್ಕಿದೆ
ಬಸವೇಶ್ವರ ಲೇಔಟ್‌ನ ವಿಜಯನಗರ 4ನೇ ಹಂತದಲ್ಲಿರುವ ಮುಡಾ ಅಪ್ರೂವ್ಡ್ ವೆಸ್ಟ್‌ಫೇಸ್ (West Face)ನ 40 X 70 ಅಡಿ ಸೈಟ್ ಮಾರಾಟಕ್ಕಿದೆ. Sq.Ft. ದರ ರೂ.4100/– ನೆಗೋಷಿಯಬಲ್

87627 05887
80502 57887

ಹೊಸ ಮನೆಗಳು ಮಾರಾಟಕ್ಕೆ
30 X 40 Ground Floor, First Floor ಉತ್ತರ ದಿಕ್ಕು, Near Ring Road, J.P.Nagara, Mysuru.
ಬೆಲೆ : 1.45 ಲಕ್ಷ.

81050 80074
88842 92074

ಡ್ರೈವರ್ ಬೇಕಾಗಿದ್ದಾರೆ
ಹಿನಕಲ್ ನಲ್ಲಿರುವ ಮೆಟಲ್ ಸ್ಟೋರಿನ ಟಾಟಾ ಏಸ್ ಗೆ ಡ್ರೈವರ್ ಬೇಕಾಗಿದ್ದಾರೆ.

82173 50595
93421 18940

ಬೇಕಾಗಿದ್ದಾರೆ
ಕುಶಾಲನಗರದಲ್ಲಿರುವ ಪ್ರಖ್ಯಾತ ಸಸ್ಯಾಹಾರಿ ಹೋಟೆಲ್ ಗೆ ಕೆಲಸಗಾರರು ಬೇಕಾಗಿದ್ದಾರೆ ಕ್ಲೀನರ್ –3, ಕ್ಯಾಪ್ಟನ್ –2. ಪಾತ್ರೆ ವಾಷಿಂಗ್ –4, ಕಾಫಿ ಟೀ ಮೇಕರ್–2 ಕೂಡಲೇ ಸಂಪರ್ಕಿಸಿ

83174 54665

ಬೇಕಾಗಿದ್ದಾರೆ
ಫುಡ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕಾಗಿ ಪುರುಷರು ಬೇಕಾಗಿದ್ದಾರೆ. ವಯಸ್ಸು 18 ರಿಂದ 45, ಸಂಬಳ ESI, PF ಕಳೆದು 17000/– ಸಿಗುತ್ತದೆ. Week off ಹಾಗೂ Shift ಗಳು ಇರುತ್ತದೆ. ಆಸಕ್ತಿಯುಳ್ಳವರು ಬೆಳಗ್ಗೆ 9 ಗಂಟೆಗೆ ಬಂದು ಸಂಪರ್ಕಿಸಿ.
ಸ್ಥಳ : CIPET ಕಾಲೇಜ್ ಹತ್ತಿರ, ಮೇಟಗಳ್ಳಿ, ಮೈಸೂರು

99868 74574

SITE FOR SALE
50X80 3 Sites for Sale North Face, 40 Feet Road, Roopanagara, attached to SBM Layout, Price : Rs.4000/- Per Sq.Ft.

87922 35466
88846 16461

ನಿವೇಶನ ಮಾರಾಟಕ್ಕಿದೆ
40 X 60 ಪೂರ್ವ, ಹುಲಗಾದ್ರಿ ಬಡಾವಣೆ, MUDA ಬೆಲೆ : 42 ಲಕ್ಷ, 50X80 ಉತ್ತರ ದಿಕ್ಕು, ವಿಜಯನಗರ 4ನೇ ಹಂತ, 2ನೇ ಫೇಸ್, ಬೆಲೆ : 6500

73492 73845

ವಧು–ವರಾನ್ವೇಷಣೆ
ಒಕ್ಕಲಿಗ, ಕುರುಬ, ಲಿಂಗಾಯತ, ನಾಯಕ, ಎಸ್.ಸಿ ಮತ್ತು ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)

93431 75000

Commercial Site for Sale
In KBL Gardania, 40 X 60 South Face, 60 Feet Road, attached to Vijayanagara 4th Stage.
Price Rs.4500/- Per Sq.Ft.

88846 16461
87922 35466

ವಾಸ್ತು ಪ್ರಕಾರ ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇ ಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.

98808 13586
63608 84930

ಬೇಕಾಗಿದ್ದಾರೆ
ಶ್ರೀ ಛಾಯಾದೇವಿ ಅನಾಥಾಶ್ರಮ, ಜಯನಗರ, ಮೈಸೂರು ಇಲ್ಲಿ 6 ರಿಂದ 12 ವರ್ಷದ ಮಕ್ಕಳನ್ನು ನೋಡಿಕೊಳ್ಳಲು ರಾತ್ರಿಯ ವೇಳೆಯಲ್ಲಿ (ಸಂಜೆ 4 ರಿಂದ ಬೆಳಗ್ಗೆ 9)ಮಹಿಳಾ ವಾರ್ಡನ್ ಕೆಲಸಕ್ಕೆ ಬೇಕಾಗಿದ್ದಾರೆ.

84317 50240
94821 63177

SITE FOR SALE
East Facing Corner Site
8.7 Mtrs x 12 Mtrs (1124 Sq.Ft.)
MUDA Khata (e-Khata)
Rs.3500 per Sq.Ft, Slightly Negotiable, Direct Owner

93421 23373

SITE FOR SALE
30x40 ಮನೆ ಮಾರಾಟಕ್ಕೆ
30x50 ಸೈಟ್ ಮಾರಾಟಕ್ಕೆ
Commercial Site
20X40 ಮನೆ ಮಾರಾಟಕ್ಕೆ ಇದೆ.

90087 11654

ಸುವರ್ಣಯಾತ್ರಾ
ಶ್ರೀಲಂಕಾ ಪ್ರವಾಸ 8 ದಿನಗಳು 18/01/2025
ನೇಪಾಳ ಪ್ರವಾಸ 9 ದಿನಗಳು 18/01/2025
ಅಂಡಮಾನ್ ಪ್ರವಾಸ 7 ದಿನಗಳು 6/01/2025
ರಾಜಸ್ಥಾನ ಪ್ರವಾಸ 9 ದಿನಗಳು 6/2/2025

63601 46483
86602 33673

ವಧು–ವರರ ಅನ್ವೇಷಣೆ
ಬಲಮುರಿ ಗಣಪತಿ ದೇವಸ್ಥಾನದ ಎದುರು, ತ್ರಿವೇಣಿ ಸರ್ಕಲ್ ಹತ್ತಿರ, ರಾಮಕೃಷ್ಣನಗರ, ತಕ್ಷಿನಗರ, ಮೈಸೂರು
ಕ್ರಿಶ್ಚಿಯನ್, ಎಸ್.ಸಿ, ಎಸ್.ಟಿ, ಲಿಂಗಾಯತ್, ಕುರುಬ, ಮರಾಠರು ಮತ್ತು ಎಲ್ಲಾ ಜನಾಂಗದ ವಧು–ವರರ ಮಾಹಿತಿ ಮತ್ತು ಅನ್ವೇಷಣೆಗೆ ನಮ್ಮನ್ನು ಸಂಪರ್ಕಿಸಿ.
ವಿಜಯಕುಮಾರ್ : 9844396822
ಎಂ.ಮಹೇಂದ್ರಕುಮಾರ್ : 94482 47647, 91645 96155

ಸೈಟ್ ಬೇಕಾಗಿದೆ
ವರುಣ, ಬಸವೇಶ್ವರ ಲೇಔಟ್, JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತ್ತಾ–ಮುತ್ತಾ ಇರುವ ಲೇಔಟ್‌ಗಳಲ್ಲಿ

98444 36672

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಸ್ಥಳ : ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ.

63647 48485

WANTED
ಆಫೀಸ್ ಅಸಿಸ್ಟೆಂಟ್ ಹುಡುಗರು ಬೇಕಾಗಿದ್ದಾರೆ
ಐಟಿಐ ಎಲೆಕ್ಟ್ರಿಕಲ್ಸ್ / ಪಿಯುಸಿ ಆದವರಿಗೆ ಆದ್ಯತೆ
ದ್ವಿಚಕ್ರ ವಾಹನ ಹೊಂದಿರಬೇಕು
ವಯಸ್ಸು 18–25 ವರ್ಷ
ಸರಸ್ವತಿಪುರಂ, ಮೈಸೂರು

98808 28999

WANTED
Deed Writer (Kannada & English)
ಪತ್ರ ಬರಹಗಾರರು (Female)
Licence not required
MYSORE PROPERTIES
Hootagalli.

9448958332

INVESTOR ಬೇಕಾಗಿದ್ದಾರೆ
Leading Food Products Business ಅಭಿವೃದ್ಧಿ ಪಡಿಸಲು 50 ಲಕ್ಷಗಳವರೆಗೆ Funds ಬೇಕಾಗಿದೆ. 20% ಡಿವಿಡೆಂಡ್ & ಸೂಕ್ತ ಭದ್ರತೆಯೊಂದಿಗೆ ಕನಿಷ್ಠ 2 ಲಕ್ಷದಿಂದ 5 ಲಕ್ಷದವರೆಗೆ Invest ಮಾಡುವವರು ಸಂಪರ್ಕಿಸಿರಿ

7019012485



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru

9845175443

ಬೇಕಾಗಿದ್ದಾರೆ
ಮೈಸೂರಿನ ಟ್ರಾವೆಲ್ಸ್ ಕಂಪನಿಗೆ ಕ್ಯಾಬ್ ಡ್ರೈವರ್ಸ್ ಬೇಕಾಗಿದ್ದಾರೆ
ಸಂಪರ್ಕಿಸಿ:

98806 86345

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

ಟ್ಯಾಂಕ್ ಮತ್ತು ಸೋಲಾರ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.

Mob: 9008711654

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನೀಡುತ್ತೇವೆ. ಒಂದು ಗ್ರಾಂ ಚಿನ್ನಕ್ಕೆ ರೂ. 7600 (24 CT)

Mob: 9108146123

R S CONSTRUCTION
ENGINEERS & CONTRACTORS
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,80,000/– ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ. ಇಂದೇ ಸಂಪರ್ಕಿಸಿ

9538575009
7019151884

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:

6364079244

BUNGALOW for SALE at NIVEDITANAGAR
4 Bedroom Duplex, 50x60,MUDA,12 years Old,East Facing,
PRICE - 2.98 CR
Behind Bharath Petrol Pump
Contact Owner.Brokers Excuse

8296493739

MUDA APPROVED SITE FOR SALE
ಗದ್ದಿಗೆ ರಸ್ತೆಯಲ್ಲಿರುವ ಸೆಂಟ್ ಫ್ರಾನ್ಸಿಸ್ ಸ್ಕೂಲ್ ಹಿಂಭಾಗದಲ್ಲಿರುವ, ಸುವರ್ಣನಗರ ಬಡಾವಣೆಯ ಪಕ್ಕದಲ್ಲಿರುವ "ಸಾಸ್ವಿ" ಬಡಾವಣೆಯಲ್ಲಿ 30x40, 30x43 ಅಳತೆಯ ಸೈಟುಗಳುಮಾರಾಟಕ್ಕಿವೆ. ಬೆಲೆ : 23 ಲಕ್ಷ, ನೆಗೋಷಿಯಬಲ್

94838 62050

MAHENDRA DEVELOPERS
is looking for a Dynamic and dedicated persons for
MARKETING EXECUTIVES - 2
SITE ENGINEERS - 2
COOK - 1. Contact:

8884001233, 9620546347

MUDA APPROVED SITE FOR SALE
Vajamangala, Nagawala, Hunsuru, Devagalli, Uttanahalli
Contact no:

8884001233 / 9620546347

WANTED
North - West Corner Site in Mysore City.
Contact:

8884001233, 9620546347

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804

ಇವರು ಕೊಳ್ಳೇಗಾಲದ ಜ್ಯೋತಿ, ಭೂತರಾಯ ಅಥರ್ವಣದ ಶಕ್ತಿಯಿಂದ ... ಯಾವುದೇ ಸಮಸ್ಯೆಗಳಿಗೆ ... ಪರಿಹಾರ ಮಾಡಿಕೊಡುತ್ತಾರೆ. [illegible]
ವಿಳಾಸ: [illegible]

ಕೇರಳ ಕೊಳ್ಳೇಗಾಲದ ಶ್ರೀ ಭದ್ರಕಾಳಿ ಶ್ರೀ ಭಗವತಿ ಜ್ಯೋತಿಷ್ಯರು
ಪಂಡಿತ್॥ ಕುಮಾರ್ ಗುರುನಂದನ್

9972290933

[illegible]

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob: 8618373596

ಕೇರಳ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ ಕೆ.ಎನ್.ಪಣಿಕ್ಕರ್ (ಕೇರಳ)

90369 84793

[illegible]

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob: 7996497954

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob: 8861401315

House for sale
20/40 EAST
3 BHK & Own Borewell
MUDA with Clear Documents
Police layout 2nd Stage

Call: 9380284276

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

7204494854

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನೆ ದೇವಿ ಆರಾಧಕರು
ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ, ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೇ ಇಲ್ಲ. ಫೋನಿನ ಮೂಲಕ ಕೇವಲ 3 ದಿನದಲ್ಲಿ ಪರಿಹಾರ

Mob: 9663466548

ಬೋಳು ತಲೆಯ ಸಮಸ್ಯೆಯೇ?


ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಸಿಪಾಯಿ ಪ್ರಾಪರ್ಟೀಸ್
1. ವಿಜಯನಗರ ಸ್ಟೆಪ್ ಲೇಔಟ್‌ನಲ್ಲಿ 40 ಅಡಿ ರಸ್ತೆಯಲ್ಲಿ 30X40 ಅಳತೆಯ ನಾರ್ತ್‌ಫೇಸ್ ಸೈಟ್ ಮಾರಾಟಕ್ಕಿದೆ. ಬೆಲೆ : 28 ಲಕ್ಷ, ನೆಗೋಷಿಯಬಲ್
2. ಇಲವಾಲ ಬಸ್ ನಿಲ್ದಾಣದ ಹಿಂಭಾಗದಲ್ಲಿರುವ ಬಸವಸಾರ 2ನೇ ಹಂತದಲ್ಲಿ 60 ಅಡಿ ರಸ್ತೆಯಲ್ಲಿ 40X60 ಅಳತೆಯ ಸೈಟುಗಳು ಮಾರಾಟಕ್ಕಿವೆ. ಬೆಲೆ : 54 ಲಕ್ಷ, ನೆಗೋಷಿಯಬಲ್.
ನಂಜುಂಡಸ್ವಾಮಿ ಹೆಚ್.ಎಸ್. ಮಾಜಿ ಸೈನಿಕರು

9483862050, 7829779070

7 BHK (G+2) HOUSE FOR RENT
Suitable for :
PLAYHOME, BANK, DIAGNOSTICS NURSING HOME, etc.
Bogadhi 2nd Stage, Opp Nirmithi Kendra, MYSORE

Ph : 9845377292

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು ವಯೋಮಿತಿ : 50 ವರ್ಷದೊಳಗೆ ಸಂಬಳ: 17500/–26 Days 8Hours ESI,PF ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ

9620777819
9620667819

ಮನೆ ಮಾರಾಟಕ್ಕಿದೆ
30 x 50, N/F
St. ಥಾಮಸ್ ಶಾಲೆಯ ಹತ್ತಿರ ವಿದ್ಯಾರಣ್ಯಪುರಂ.

8050481049
9964807081

ತಕ್ಷಣ ಬೇಕಾಗಿದ್ದಾರೆ
ಸಂಜೆ 5ರಿಂದ ರಾತ್ರಿ 10ರವರೆಗೆ ಸ್ಯಾಂಡ್‌ವಿಚ್ ಮಾಡಲು ಜ್ಯೂಸ್ ಮಾಡಲು 30ರಿಂದ 40 ವರ್ಷದವರು ಮಾತ್ರ, ಕುವೆಂಪುನಗರ ಸುತ್ತಮುತ್ತ ಇರುವವರು ಸಂಪರ್ಕಿಸಿ:

9448054151

SBIT TRAVELS
Group Tours
Dubai 5 Days
20, 21,31 Jan | 01,06,10,24 Feb | 05, 09,13, 21Mar
Bali 6 Days
09,15,21 Jan | 3,20,25 Feb | 4,11,18,25 Mar
Thailand 5 Days
11,22,26 Jan | 03,14,19 Feb | 07,09,19 Mar

9343524127
(Saraswathipuram, Mysuru)

ಫ್ಲ್ಯಾಟ್ ಭೋಗ್ಯಕ್ಕೆ ಇದೆ
2 ಬಿಹೆಚ್‌ಕೆ,
ವಿಜಯನಗರ 1ನೇ ಹಂತ, ಮೈಸೂರು ಬೆಲೆ: ರೂ. 15 ಲಕ್ಷ, ಸಂಪರ್ಕಿಸಿ

8762705887
9986664688

ಮನೆ ಭೋಗ್ಯಕ್ಕೆ ಇದೆ
30x45, 3 ಬಿಹೆಚ್‌ಕೆ ನಾರ್ಥ್ ಫೇಸ್, ಕಾರ್ನರ್ ಹೊಸ ಮನೆ, ಪ್ರಶಾಂತ್ ನಗರ, 1ನೇ ಫೇಸ್, ದಡದಹಳ್ಳಿ, ಮೈಸೂರು. (14 ಲಕ್ಷ) ಸಂಪರ್ಕಿಸಿ:

8050257887
8762705887

ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
(ಸಂಬಳ 10000)
Field Executives ಬೇಕಾಗಿದ್ದಾರೆ
(ಸಂಬಳ 15000)
Team Manager ಬೇಕಾಗಿದ್ದಾರೆ
(ಸಂಬಳ 17000)
ಸ್ಥಳ ಚಾಮುಂಡಿಪುರಂ ಮತ್ತು ಎನ್ ಆರ್ ಮೊಹಲ್ಲ

Mob.No. 8150005111

ಮೈಸೂರು ಮಿತ್ರ – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ಅಂಬೇಡ್ಕರ್ ಬಗ್ಗೆ ಅವಹೇಳನಕಾರಿ ಹೇಳಿಕೆ

ಸಂಪುಟದಿಂದ ಅಮಿತ್ ಶಾ ವಜಾಕ್ಕೆ ಆಗ್ರಹಿಸಿ ಪ್ರತಿಭಟನೆ





ಡಾ.ಬಿ.ಆರ್.ಅಂಬೇಡ್ಕರ್ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಕೇಂದ್ರ ಗೃಹ ಸಚಿವ ಅಮಿತಾ ಶಾ ವಿರುದ್ಧ ತಿ.ನರಸೀಪುರ ಹಾಗೂ ನಂಜನಗೂಡಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ತಿ.ನರಸೀಪುರ/ನಂಜನಗೂಡು, ಡಿ.20– ಡಾ.ಬಿ.ಆರ್.ಅಂಬೇಡ್ಕರ್ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತಾ ಶಾ ಅವರನ್ನು ಸಂಪುಟದಿಂದ ವಜಾಗೊಳಿಸುವಂತೆ ಆಗ್ರಹಿಸಿ ತಿ. ನರಸೀಪುರ ಹಾಗೂ ನಂಜನಗೂಡಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ತಿ.ನರಸೀಪುರ: ಅಂಬೇಡ್ಕರ್ ಬಗ್ಗೆ ಹಗುರವಾಗಿ ಮಾತನಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಸಚಿವ ಸಂಪುಟದ ವಜಾಗೊಳಿಸಿ, ದೇಶದ್ರೋಹ ಕಾಯ್ದೆಯಡಿ ಬಂಧಿಸುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಪಟ್ಟಣದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಅಂಬೇಡ್ಕರ್ ಭಾವಚಿತ್ರ ಹಿಡಿದು ರಾಷ್ಟ್ರೀಯ ಹೆದ್ದಾರಿ ಕೊಳ್ಳೇಗಾಲ ಜಂಕ್ಷನ್‌ನಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಅಮಿತ್ ಶಾ ವಿರುದ್ಧ ಘೋಷಣೆ ಕೂಗಿ ಮೆರವಣಿಗೆಯಲ್ಲಿ ತಾಲೂಕು ಕಚೇರಿಗೆ ತೆರಳಿ ಧರಣಿ ನಡೆಸಿದರು. ಅಲ್ಲದೇ ಚಿತ್ರಮಂದಿರ ವೃತ್ತ ಹಾಗೂ ಖಾಸಗಿ ಬಸ್ ನಿಲ್ದಾಣಗಳಲ್ಲಿ ಅಮಿತ್ ಶಾ ಭಾವಚಿತ್ರಕ್ಕೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಅಂಬೇಡ್ಕರ್ ಅವರು ಸಮಾನತೆ, ಸಹಬಾಳ್ವೆ, ಭ್ರಾತೃತ್ವ, ಜಾತ್ಯತೀತ ಹಾಗೂ ಧರ್ಮ ನಿರಪೇಕ್ಷ ಸಂವಿಧಾನವನ್ನು ದೇಶಕ್ಕೆ ನೀಡಿದ್ದಾರೆ. ಸಂವಿಧಾನ ಮತ್ತು ಅಂಬೇಡ್ಕರ್ ಬಗ್ಗೆ ಅಸಹನೆ ಮತ್ತು ದ್ವೇಷ ಹೊಂದಿರುವ ಬಿಜೆಪಿ ಹಾಗೂ ಸಂಘ ಪರಿವಾರದ ನಡವಳಿಕೆ ಅಮಿತ್ ಶಾ ಮೂಲಕ ವ್ಯಕ್ತವಾಗಿದೆ. ಸಂವಿಧಾನ ಬದಲಿಸುವ ಮೊದಲ ಹಂತದಲ್ಲಿ ಪ್ರಾಯೋಗಿಕವಾಗಿ ಕೇಂದ್ರ ಸಚಿವ ಹಗುರ ಮಾತುಗಳನ್ನು ಆಡಿದ್ದಾರೆ. ಇದನ್ನು ದೇಶದ ಸಮಸ್ತ ಶೋಷಿತ ಸಮುದಾಯಗಳು ಸಹಿಸಲು ಸಾಧ್ಯವಿಲ್ಲ. ರಾಷ್ಟ್ರಪತಿಗಳು ಕೂಡಲೇ ಅಮಿತ್ ಶಾ ಅವರನ್ನು ಸಚಿವ ಹಾಗೂ ಸಂಸದ ಸ್ಥಾನದಿಂದ ವಜಾಗೊಳಿಸಿ ದೇಶದ್ರೋಹ ಕಾಯ್ದೆಯಡಿ ಬಂಧಿಸಲು ಕ್ರಮ ಕೈಗೊಳ್ಳಬೇಕು. ತಪ್ಪಿದ್ದಲ್ಲಿ ದೇಶದಾದ್ಯಂತ ಹೋರಾಟ ತೀವ್ರಗೊಳಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜಿಲ್ಲಾ ದಸಂಸ ಜಿಲ್ಲಾ ಸಂಚಾಲಕ ಸಿ.ಉಮಾಮಹದೇವ, ಸೋಮಣ್ಣ, ತಾಲೂಕು ಸಂಚಾಲಕ ರಾಜು, ಸೋಮಶೇಖರ್, ಹೋಬಳಿ ಸಂಚಾಲಕ ಆನಂದ್ ಮಾತನಾಡಿ ಕಿಡಿಕಾರಿದರು. ನಂತರ ರಾಷ್ಟ್ರಪತಿಗಳಿಗೆ ಸಲ್ಲಿಸಲು ಉದ್ದೇಶಿಸಿದ್ದ ಮನವಿ ಪತ್ರವನ್ನು ಶಿರಸ್ತೇದಾರ್ ಮಂಜುಳಾ ಅವರಿಗೆ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ತಾಪಂ ಮಾಜಿ ಸದಸ್ಯ ರಾಮಲಿಂಗಯ್ಯ, ಕೃಷ್ಣ, ಗಿರಿಯಯ್ಯ, ವಕೀಲೆಯರಾದ ಅಶ್ವಿನಿ, ಲಾವಣ್ಯ, ಮುಖಂಡರಾದ ಬಸವರಾಜು, ಸಿ.ಪುಟ್ಟಮಲ್ಲಯ್ಯ, ರಜನಿ, ಉಮೇಶ್, ನಾಗರಾಜಮೂರ್ತಿ, ಶಿವಯ್ಯ, ನಾಗೇಶ್, ಸುರೇಶ್, ರಂಗರಾಮು, ಸಿದ್ದರಾಜು, ಶಿವಕುಮಾರ್, ಶಶಿಕುಮಾರ್, ಲಕ್ಷ್ಮಣ್, ಸೋಮಣ್ಣ, ಸಿದ್ದು, ದಕ್ಷಿಣಮೂರ್ತಿ, ಸಿದ್ದರಾಜು, ಕುಮಾರ, ಎಂ.ಬಿ. ಲಿಂಗರಾಜು, ಮಹೇಶ್, ರಾಜು, ವೆಂಕಟೇಶ್, ರಾಜು, ಸೋಮಣ್ಣ, ಹೊನ್ನಯ್ಯ, ನಾಗರಾಜು, ಲಕ್ಷ್ಮಣ್, ಮಹದೇವ್, ಕೃಷ್ಣ, ಶಿವು, ಮುರುಳಿ, ಶಿವನಂಜ, ಶಿವಣ್ಣ ಶಾಂತಕುಮಾರ್, ಶಂಕರಮೂರ್ತಿ, ಮಲ್ಲಯ್ಯ, ರವಿ, ಶಿವಕುಮಾರ್, ಲಿಂಗರಾಜು, ಶ್ರೀನಿವಾಸ್, ರಾಜೇಶ್, ನಂಜುಂಡಯ್ಯ ಇತರರಿದ್ದರು.

ನಂಜನಗೂಡು: ನಗರದ ಹುಲ್ಲಹಳ್ಳಿ ವೃತ್ತದ ಬಳಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿ ತಡೆದು, ಮಾನವ ಸರಪಳಿ ನಿರ್ಮಿಸಿ, ಅಮಿತ್ ಶಾ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಶಾಸಕ ಕೇಶವಮೂರ್ತಿ ಮಾತನಾಡಿ, ಅಮಿತ್ ಶಾ ಅವರು ದೇಶದ ರಕ್ಷಣಾ ಮಂತ್ರಿಯಾಗಿ ಎಲ್ಲಾ ಜನರಿಗೂ ರಕ್ಷಣೆ ನೀಡುವ ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು ಅಂಬೇಡ್ಕರ್ ಅವರ ಹೆಸರನ್ನು ಪದೇ ಪದೆ ಬಳಸುವುದು ಕೆಲವರಿಗೆ ಶೋಕಿಯಾಗಿದೆ. ಅಂಬೇಡ್ಕರ್ ಹೆಸರನ್ನು ಬಳಸಿದಷ್ಟು ದೇವರ ಹೆಸರನ್ನು ಬಳಸಿದ್ದರೆ ಇಷ್ಟೊತ್ತಿಗೆ 7 ಜನ್ಮದವರಿಗೆ ಸ್ವರ್ಗ ಸಿಗುತ್ತಿತ್ತು ಎಂದು ಹೇಳಿಕೆ ನೀಡುವ ಮೂಲಕ ಅಂಬೇಡ್ಕರ್ ಅವರನ್ನು ಅವಮಾನಿಸಿದ್ದಾರೆ. ಸಂವಿಧಾನದ ಅಡಿ ಅವರು ಗೃಹ ಸಚಿವರಾಗಿದ್ದಾರೆ ಎಂಬುದನ್ನು ಮರೆತಿರುವಂತಿದೆ. ಅಂಬೇಡ್ಕರ್ ಚಿಂತನೆ ನಮಗೆ ದಾರಿದೀಪ, ದೇಶದ ಮಹಿಳೆಯರು, ಶೋಷಿತರು, ಅಸ್ಪೃಶ್ಯರನ್ನು ರಕ್ಷಣೆ ಮಾಡುತ್ತಿರುವ ಏಕೈಕ ಶಕ್ತಿ ಎಂದರೆ ಅದು ಅಂಬೇಡ್ಕರ್ ಸಂವಿಧಾನ ಮಾತ್ರ ಅಂಬೇಡ್ಕರ್ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವುದು ಅವರ ಮನಸ್ಥಿತಿ ತೋರಿಸುತ್ತದೆ. ಆದ್ದರಿಂದ ಈ ಕೂಡಲೇ ಅವರನ್ನು ಸಂಪುಟದಿಂದ ವಜಾಗೊಳಿಸಿ ಅವರನ್ನು ಗಡಿಪಾರು ಮಾಡಬೇಕೆಂದು ಆಗ್ರಹಿಸಿದರು.

ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ. ಶಂಕರ್ ಮಾತನಾಡಿದರು. ಇದೇ ವೇಳೆ ಉಪ ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಜಿಪಂ ಮಾಜಿ ಸದಸ್ಯರಾದ ಕೆ.ಮಾರುತಿ, ಪುಷ್ಪ, ಲತಾ, ಮುಖಂಡರಾದ ದೊರೆಸ್ವಾಮಿ, ವಿಜಯ್ ಕುಮಾರ್, ಮುದ್ದುಮಾದಶೆಟ್ಟಿ, ಶ್ರೀನಿವಾಸಮೂರ್ತಿ, ರವಿಪ್ರಕಾಶ್, ಶಿವಣ್ಣ, ರಂಗದಾಸ್, ಅಶೋಕ್, ನಾಗರಾಜು, ಜಯರಾಮು, ರಾಜೇಶ, ತಗಡೂರು ನಾಯಕ, ಅಜ್ಗರ್, ನಗರಸಭಾ ಸದಸ್ಯರಾದ ಪ್ರದೀಪ್, ಎಸ್.ಪಿ. ಮಹೇಶ್, ಗಂಗಾಧರ್, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ತಾಪಂ ಮಾಜಿ ಸದಸ್ಯ ಕೆ.ಮೂಗಶೆಟ್ಟಿ, ಕೆಪಿಸಿಸಿ ಸದಸ್ಯ ಅಕ್ಬರ್ ಅಲಿ ಸೇರಿದಂತೆ ಕಾರ್ಯಕರ್ತರು ಉಪಸ್ಥಿತರಿದ್ದರು.

ವಕೀಲರಿಂದ ಪ್ರತಿಭಟನೆ

ನಂಜನಗೂಡು: ಅಂಬೇಡ್ಕರ್ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿರುವ ಅವಹೇಳನಕಾರಿ ಹೇಳಿಕೆ ಖಂಡಿಸಿ ನಂಜನಗೂಡು ವಕೀಲರ ಸಂಘದ ಸದಸ್ಯರು ನ್ಯಾಯಾಲಯದ ಕಲಾಪದಿಂದ ಹೊರಗುಳಿದು ಪ್ರತಿಭಟನೆ ನಡೆಸಿದರು.

ಸ್ವಯಂ ಪ್ರೇರಿತವಾಗಿ ನ್ಯಾಯಾಲಯದ ಕಲಾಪದಿಂದ ಹೊರಗುಳಿದ ವಕೀಲರು, ನ್ಯಾಯಾಲಯದ ಆವರಣದಿಂದ ಹುಲ್ಲಹಳ್ಳಿ ವೃತ್ತದವರೆಗೆ ಮೆರವಣಿಗೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ ಮಾತನಾಡಿ, ಅಂಬೇಡ್ಕರ್ ಅವರನ್ನು ಇಡೀ ವಿಶ್ವವೇ ಗೌರವಿಸುವ ಜೊತೆಗೆ ಜ್ಞಾನದ ಸಂಕೇತ ಎಂದು ಪೂಜಿಸುತ್ತಿದೆ. ಆದರೆ ಕೀಳು ಮನಸ್ಥಿತಿಯುಳ್ಳ ಅಮಿತ್ ಷಾ ಅವರು ಅಂಬೇಡ್ಕರ್ ಅವರನ್ನು ಅವಮಾನಿಸಿರುವುದು ಖಂಡನೀಯ. ಆದ್ದರಿಂದ ಕೂಡಲೇ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಿ, ಗಡಿಪಾರು ಮಾಡಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ವಕೀಲರಾದ ಮುರುಳಿ, ಸೋಮಶೇಖರ್, ಸೋಮಯ್ಯ, ಸುನೀಲ್ ಕುಮಾರ್, ಮಲ್ಲಿಕಾರ್ಜುನ, ಶಿವಾನಂದ, ಚಿನ್ನಸ್ವಾಮಿ, ಶ್ರೀಕಂಠ, ಗಣೇಶ್, ಸೇರಿದಂತೆ ವಕೀಲರ ಸಂಘದ ಪದಾಧಿಕಾರಿಗಳು ಇದ್ದರು.



ವಕೀಲರ ಕೋರ್ಟ್ ಕಲಾಪ ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು.

ಉದ್ದೂರು ಕಾವಲ್ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ನೂತನ ಅಧ್ಯಕ್ಷೆ ಪದ್ಮಮ್ಮ, ಉಪಾಧ್ಯಕ್ಷೆ ಶಾಂತಿ ಅವರನ್ನು ಮುಖಂಡರು ಸನ್ಮಾನಿಸಿದರು.

ಹುಣಸೂರು, ಡಿ.20– ತಾಲೂಕಿನ ಉದ್ದೂರು ಕಾವಲ್ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಪದ್ಮಮ್ಮ, ಉಪಾಧ್ಯಕ್ಷೆಯಾಗಿ ಶಾಂತಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ಮುಬಾರಕ್ ಬಾನು ಹಾಗೂ ಉಪಾಧ್ಯಕ್ಷೆ ಪದ್ಮಮ್ಮ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಪದ್ಮಮ್ಮ, ಉಪಾಧ್ಯಕ್ಷ ಸ್ಥಾನಕ್ಕೆ ಶಾಂತಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಿಡಿಪಿಓ ಹರೀಶ್ ಪ್ರಕಟಿಸಿದರು. ಪಿಡಿಓ ಅರುಣ್ ಕಾರ್ಯದರ್ಶಿ ಇದ್ದರು.

ಹುಡಾ ಅಧ್ಯಕ್ಷ ಹೆಚ್.ಪಿ.ಅಮರ್‌ನಾಥ್ ಮಾತನಾಡಿ, ಉದ್ದೂರು ಕಾವಲ್ ಗ್ರಾಪಂ ಕಾಂಗ್ರೆಸ್ ಭದ್ರಕೋಟೆ. ಈ ಬಾರಿ ಗ್ರಾಪಂ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದ್ದೇವೆ. ಉಳಿದಿರುವ 13 ತಿಂಗಳ ಅವಧಿಯಲ್ಲಿ ನೂತನ ಅಧ್ಯಕ್ಷೆ, ಉಪಾಧ್ಯಕ್ಷೆ ಸದಸ್ಯರ ಸಹಕಾರದಿಂದ ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಸಲಹೆ ನೀಡಿದರು.

ನೂತನ ಅಧ್ಯಕ್ಷೆ ಪದ್ಮಮ್ಮ ಮಾತನಾಡಿ, ನಾನು ಅಧ್ಯಕ್ಷೆಯಾಗಲು ಸಹಕರಿಸಿದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಹಾಗೂ ಎಲ್ಲಾ ಸದಸ್ಯರ ಸಹಕಾರ ಪಡೆದು ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು. ಚುನಾವಣೆಯಲ್ಲಿ ಮಾಜಿ ಅಧ್ಯಕ್ಷರಾದ ವೀರಭದ್ರಸ್ವಾಮಿ, ನಂದೀಶ್, ಮುಬಾರಕ್ ಬಾನು, ಸದಸ್ಯರಾದ ಗೋವಿಂದಶೆಟ್ಟಿ, ರಾಮುಬೋವಿ, ಮನುಕುಮಾರ್, ಮೀನಾ, ರತ್ನಮ್ಮ, ಶೋಭಾ, ಪವಿತ್ರ, ಗೌರಮ್ಮ, ವಿಜೇಂದ್ರಕುಮಾರ್, ಆಲ್ತಾಫ್ ಷರೀಫ್ ಸೇರಿದಂತೆ ಎಲ್ಲಾ ಸದಸ್ಯರು ಭಾಗವಹಿಸಿದ್ದರು.

ಈ ವೇಳೆ ತಾಪಂ ಮಾಜಿ ಸದಸ್ಯರಾದ ಪ್ರಭಾಕರ್, ದೇವರಾಜ್, ಅಜ್ಗರ್ ಪಾಷ, ಮುಖಂಡರಾದ ಪ್ರಸನ್ನ, ಪುಟ್ಟಸ್ವಾಮಿ, ಚಿಕ್ಕಣ್ಣೇಗೌಡ, ಜವರನಾಯಕ, ಶಂಕರ್ ನಾಯಕ, ವಿಠಲ್, ಧರ್ಮಾಪುರ ಗ್ರಾಪಂ ಅಧ್ಯಕ್ಷ ವಿ.ಮಹದೇವ್ ಇನ್ನಿತರರಿದ್ದರು.

ಕೆ.ಆರ್.ನಗರದಲ್ಲಿ ಕ್ಯಾಲೆಂಡರ್ ಬಿಡುಗಡೆ



ಕೆ.ಆರ್.ನಗರದಲ್ಲಿ ಶರತ್ ಕಣ್ಣಿನ ಆಸ್ಪತ್ರೆಯ ನೂತನ ವರ್ಷದ ಕ್ಯಾಲೆಂಡರ್ ಅನ್ನು ನವನಗರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್ ಬಿಡುಗಡೆಗೊಳಿಸಿದರು. ಈ ವೇಳೆ ಆಸ್ಪತ್ರೆ ಮಾಲೀಕ ಡಾ.ಶರತ್, ತಂಬಾಕು ಮಾರುಕಟ್ಟೆ ನಿವೃತ್ತ ಅಧೀಕ್ಷಕ ಕೆ.ಎನ್.ದಿನೇಶ್ ನಂಜಪ್ಪ, ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ನಗರ ಕಾಂಗ್ರೆಸ್ ಅಧ್ಯಕ್ಷ ಎಂ.ಜೆ.ರಮೇಶ್, ಮುಖಂಡರಾದ ಕೇಶವ್, ಸುರೇಶ್, ಶಮಂತ್, ಪುಟ್ಟರಾಜು, ನಾರಾಯಣ್ ಮತ್ತಿತರರಿದ್ದರು.

ಬೀದಿ ನಾಯಿಗಳ ದಾಳಿ: ಮಗುವಿಗೆ ಗಂಭೀರ ಗಾಯ





ಜಯಪುರ, ಡಿ.20– ಬೀದಿ ನಾಯಿಗಳ ದಾಳಿಯಿಂದ ಮಗು ಗಂಭೀರವಾಗಿ ಗಾಯಗೊಂಡಿದೆ. ಈ ಘಟನೆ ಮೈಸೂರು ತಾಲೂಕಿನ ಜಯಪುರ ಗ್ರಾಮದಲ್ಲಿ ಶುಕ್ರವಾರ ನಡೆದಿದೆ.

ಜಯಪುರ ಗ್ರಾಪಂ ವ್ಯಾಪ್ತಿಯ ಬರಡನಪುರ ಗ್ರಾಮದ ಗುರುಸ್ವಾಮಿ ಅವರ ಪುತ್ರಿ ತ್ರಿಷಿಕಾ(3) ಗಂಭೀರವಾಗಿ ಗಾಯಗೊಂಡಿದ್ದು, ಈಕೆ ಜಯಪುರದ ಅನ್ನಪೂರ್ಣೇಶ್ವರಿ ಶಾಲೆಯಲ್ಲಿ ಯುಕೆಜಿ ವ್ಯಾಸಂಗ ಮಾಡುತ್ತಿದ್ದು, ಶಾಲೆಯಿಂದ ಮನೆಗೆ ತೆರಳುವ ಮಾರ್ಗಮಧ್ಯ ಗುಜ್ಜಮ್ಮ ತಾಯಿ ದೇವಾಲಯದ ಹಿಂಭಾಗದ ರಸ್ತೆಯಲ್ಲಿ ನಾಯಿಗಳ ಹಿಂಡು ದಾಳಿ ನಡೆಸಿ ಮುಖ, ಕೈ ಸೇರಿದಂತೆ ದೇಹದ ವಿವಿಧ ಭಾಗಗಳಿಗೆ ಕಚ್ಚಿ ಗಾಯಗೊಳಿಸಿವೆ. ರಾಕ್ಷಸಿ ಸ್ವರೂದ ನಾಯಿಗಳ ದಾಳಿ ಕಂಡು ಸ್ಥಳೀಯರು ಅವುಗಳ ಓಡಿಸಲು ಮುಂದಾಗಿದ್ದಾರೆ. ಆಗ ಅವರ ಮೇಲೂ ದಾಳಿಗೆ ಮುಂದಾಗಿವೆ. ಬಳಿಕ ಕಲ್ಲು ತೂರಿ ನಾಯಿಗಳನ್ನು ಓಡಿಸಿದ ಗ್ರಾಮಸ್ಥರು ತಕ್ಷಣ ಮಗುವನ್ನು ಮೈಸೂರು ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಬರಡನಪುರ ಗ್ರಾಮದ ಮುಖಂಡ ಬಿ.ಡಿ ಬಸವಣ್ಣ ಮಾತನಾಡಿ, ಜಯಪುರ ಗ್ರಾಪಂ ಸುತ್ತಮುತ್ತಲ ಗ್ರಾಮಗಳಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದೆ. ಈಗಾಗಲೇ ಬೀದಿ ನಾಯಿಗಳ ಹಾವಳಿ ನಿಯಂತ್ರಿಸುವಂತೆ ಗ್ರಾಪಂ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಇದೀಗ ಮಗು ಮೇಲೆ ದಾಳಿ ನಡೆಸಿ ಗಂಭೀರವಾಗಿ ಗಾಯಗೊಳಿಸಿದ್ದು, ಇದಕ್ಕೆ ಗ್ರಾಪಂ ಅಧಿಕಾರಿಗಳ ಬೇಜವಾಬ್ದಾರಿತನವೇ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಯಪುರ ವ್ಯಾಪ್ತಿಯ ಸುತ್ತಮುತ್ತಲಿನ ಗ್ರಾಮಗಳಲ್ಲಿ ಹೆಚ್ಚಾಗಿರುವ ಬೀದಿ ನಾಯಿಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಹಿಡಿಯುವ ಮೂಲಕ ಮಕ್ಕಳಿಗೆ, ಸಾರ್ವಜನಿಕರಿಗೆ ರಕ್ಷಣೆ ನೀಡಬೇಕು ಎಂದು ಜಯಪುರ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಮಹದೇವ ನಿಧನ



ತಿ.ನರಸೀಪುರ, ಡಿ.20– ಪಟ್ಟಣದ ಭೈರಾಪುರ ಹಿರಿಯ ಮುಖಂಡ ಹಾಗೂ ತಾಪಂ ಮಾಜಿ ಸದಸ್ಯ ಬಿ.ಎಲ್. ಮಹದೇವ(63) ಗುರುವಾರ ನಿಧನರಾದರು. ಮೃತರು ಪತ್ನಿ ಸತ್ಯ, ಪುತ್ರ, ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿ ದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಭೈರಾಪುರ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕುರಿಹುಂಡಿ ಗ್ರಾಪಂಗೆ ಗೌತಮಿ ನೂತನ ಅಧ್ಯಕ್ಷೆ



ಗ್ರಾಪಂ ನೂತನ ಅಧ್ಯಕ್ಷೆಯಾಗಿ ಗೌತಮಿ ಆಯ್ಕೆಯಾಗಿದ್ದಾರೆ.

ಮಲ್ಕುಂಡಿ, ಡಿ.20– ನಂಜನಗೂಡು ತಾಲೂಕಿನ ಕುರಿಹುಂಡಿ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಜಿ.ಗೌತಮಿ ಆನಂದ್ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ನಾಗಮಣಿ ಅವರ ನಿಧನದಿಂದ ತೆರವಾದ ಸ್ಥಾನಕ್ಕೆ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿ ಕೆ.ಎಂ.ವಿದ್ಯಾಶ್ರೀ, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಜಿ.ಗೌತಮಿ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಜಿ.ಗೌತಮಿ 10 ಮತಗಳನ್ನು ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರೆ, ಪ್ರತಿಸ್ಪರ್ಧಿ ಕೆ.ಎಂ.ವಿದ್ಯಾಶ್ರೀ 7 ಮತಗಳನ್ನು ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿ ತೋಟಗಾರಿಕೆ ಸಹಾಯಕ ನಿರ್ದೇಶಕ ಚಂದ್ರು ನೂತನ ಅಧ್ಯಕ್ಷರ ಆಯ್ಕೆಯನ್ನು ಘೋಷಿಸಿದರು.

ನೂತನ ಅಧ್ಯಕ್ಷೆ ಜಿ.ಗೌತಮಿ ಮಾತನಾಡಿ, ಸದಸ್ಯರು ನನ್ನ ಮೇಲೆ ನಂಬಿಕೆ ಇಟ್ಟು ಅಧ್ಯಕ್ಷರಾಗಿ ಆಯ್ಕೆ ಮಾಡಿದ್ದಾರೆ. ಅವರ ನಂಬಿಕೆಗೆ ಚ್ಯುತಿ ಬಾರದಂತೆ ಎಲ್ಲರ ಸಹಕಾರ ಪಡೆದು ಗ್ರಾಪಂ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನಡೆಸುವ ಮೂಲಕ ಗ್ರಾಪಂ ಅನ್ನು ಮಾದರಿ ಗ್ರಾಪಂ ಆಗಿ ರೂಪಿಸಲು ಶ್ರಮಿಸುತ್ತೇನೆ ಎಂದರು.

ಗ್ರಾಪಂ ಸದಸ್ಯ ನಂಜುಂಡಸ್ವಾಮಿ ಮಾತನಾಡಿ, ಕ್ಷೇತ್ರದಲ್ಲಿ ಶಾಸಕ ದರ್ಶನ್ ಉತ್ತಮ ಕೆಲಸ ಮಾಡುತ್ತಿದ್ದಾರೆ. ಈಗಾಗಲೇ ಕ್ಷೇತ್ರದ ಅಭಿವೃದ್ಧಿಗೆ 25 ಕೋಟಿ ಅನುದಾನ ತಂದು ಗ್ರಾಮೀಣ ಭಾಗದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಕ್ಷೇತ್ರದ ಅಭಿವೃದ್ಧಿಗಾಗಿ ಹೆಚ್ಚಿನ ಒತ್ತು ನೀಡುತ್ತಿದ್ದಾರೆ ಎಂದರು.

ಸದಸ್ಯರಾದ ರಮೇಶ್, ರುದ್ರಮ್ಮ, ಶೈಲಾ, ರತ್ನಮ್ಮ, ಮಣಿ, ಲತಾ, ಮಂಜುನಾಯಕ, ಮುಖಂಡರಾದ ತಮ್ಮಣ್ಣೇಗೌಡ, ಸೂರ್ಯ ಕುಮಾರ್, ಅಜಯ್, ಸೋಮೇಶ್, ಸಣ್ಣೇಗೌಡ, ಸೋಮೇಶ್, ನಾಗೇಂದ್ರ, ಗ್ರಾಪಂ ಮಾಜಿ ಉಪಾಧ್ಯಕ್ಷ ಆನಂದ್, ವೆಂಕಟೇಶ್, ಶಿವಣ್ಣ, ಪಿಎಸಿಎಸ್ ಅಧ್ಯಕ್ಷ ಮಂಜುನಾಥ್, ರಾಮೇಗೌಡ, ಬಿರೇಗೌಡ, ಶಂಕರ್ ಸೇರಿದಂತೆ ಇತರರಿದ್ದರು.

ವಿಕಲಚೇತನರು ಸಮಾಜದ ಮುಖ್ಯವಾಹಿನಿಗೆ ಬರಬೇಕು

ವಿಕಲಚೇತನರ ಕಲ್ಯಾಣಾಧಿಕಾರಿ ಶಂಕರಗೌಡ ಪಾಟೀಲ್



ಕನ್ನಡ ಸಹಾಯಕ ಪ್ರಾಧ್ಯಾಪಕ ಡಾ.ಪಿ.ವಿ.ನಾಗರಾಜು ಅವರನ್ನು ಸನ್ಮಾನಿಸಲಾಯಿತು.

ಹೆಚ್.ಡಿ.ಕೋಟೆ, ಡಿ.20– ವೈವಿಧ್ಯತೆಯಿಂದ ಕೂಡಿದ ಭಾರತದಲ್ಲಿ ವಿಕಲಚೇತನರು ತಮ್ಮ ಪ್ರತಿಭೆ ಪ್ರದರ್ಶನದ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ವಿಕಲಚೇತನರ ಕಲ್ಯಾಣಾಧಿಕಾರಿ ಶಂಕರಗೌಡ ಪಾಟೀಲ್ ತಿಳಿಸಿದರು.

ಪಟ್ಟಣದ ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ಜೀವನ ಜ್ಯೋತಿ ವಿಶೇಷಚೇತನರ ಕ್ಷೇಮಾಭಿವೃದ್ಧಿ ಒಕ್ಕೂಟ ಹೆಚ್.ಡಿ.ಕೋಟೆ, ಶ್ರೀಚಿಕ್ಕದೇವಮ್ಮ ವಿಶೇಷಚೇತನರ ಕ್ಷೇಮಾಭಿವೃದ್ಧಿ ಒಕ್ಕೂಟ ಸರಗೂರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಮೈಸೂರು ಮತ್ತು ಸ್ಥಳೀಯ ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲಿ ನಡೆದ ಅಂತಾರಾಷ್ಟ್ರೀಯ ವಿಶೇಷಚೇತನರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಶೇಷಚೇತನರು ಸಾಮಾನ್ಯ ಜನರಂತೆ ಸಮಾಜದ ಮುಖ್ಯವಾಹಿನಿಗೆ ಬರಬೇಕು. ಸ್ವಾವಲಂಬಿ ಬದುಕು ನಡೆಸಬೇಕು. ಆದ್ದರಿಂದ ವಿಶೇಷಚೇತನರ ಸಲಕರಣೆಗಳು, ಶೈಕ್ಷಣಿಕ, ಆರ್ಥಿಕವಾಗಿ ಅವರಿಗೆ ಅಗತ್ಯವಿರುವ ಎಲ್ಲವನ್ನು ಸಮುದಾಯ ಒದಗಿಸಿ ಕೊಡಲು ಮುಂದಾಗಬೇಕು. ವಿಶೇಷಚೇತನರಿಗೆ ಸರ್ಕಾರ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ. ಅದನ್ನ ಸದುಪಯೋಗಪಡಿಸಿಕೊಂಡು ಸಮಾಜದಲ್ಲಿ ಸಾಧನೆ ಮಾಡಿ ಸಾಧಕರಾಗಬೇಕು ಎಂದು ತಿಳಿಸಿದರು.

ಪಡುವಲ ಶ್ರೀವಿರಕ್ತ ಮಠ ಬಿಡುಗಲು ಮಹದೇವಸ್ವಾಮೀಜಿ ಆಶೀರ್ವಚನ ನೀಡಿ ಮಾತನಾಡಿ, ನಾವು ವಿಕಲಚೇತನರು. ನಮ್ಮಿಂದ ಸಾಧನೆ ಮಾಡಲು ಸಾಧ್ಯವಿಲ್ಲ. ನಾವು ಜೀವನ ನಡೆಸುವುದು ಕಷ್ಟ ಎಂದು ಖಿನ್ನತೆಗೆ ಒಳಗಾಗದೇ ನಾವು ಕೂಡ ಸಮಾಜದಲ್ಲಿ ಉನ್ನತ ಮಟ್ಟಕ್ಕೆ ಬೆಳೆದು ಉತ್ತಮ ವ್ಯಕ್ತಿಯಾಗಿ ಬದುಕಬೇಕು ಎಂಬ ಛಲ ನಿಮ್ಮಲ್ಲಿರಬೇಕು ಎಂದರು.

ಮೈಸೂರು ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕ ಡಾ.ಪಿ.ವಿ. ನಾಗರಾಜು ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮಾನವ ಸಂಪನ್ಮೂಲ ವಿಭಾಗದ ಹಿರಿಯ ವ್ಯವಸ್ಥಾಪಕಿ ಸಿ.ಜೆ. ಬೀನಾ, ಸರಗೂರು ಪಪಂ ಅಧ್ಯಕ್ಷೆ ರಾಧಿಕಾ, ಲಯನ್ಸ್ ಕ್ಲಬ್ ಅಧ್ಯಕ್ಷ ಭಾಸ್ಕರ್, ಸರಗೂರು ವರ್ತಕರ ಸಂಘದ ಅಧ್ಯಕ್ಷ ಶ್ರೀನಿವಾಸ್, ಜಯರಾಜು, ಮಹದೇವಯ್ಯ, ನಾಗರಾಜು, ಶ್ರೀಧರ್, ಸದಶಿವ, ಎಂ.ಟಿ.ರಮೇಶ್, ಮಮತಾ, ಪೂರ್ಣಿಮಾ, ದೀಪಶ್ರೀ, ಸಂಜನ, ಚಂದ್ರು, ಸಿದ್ದಪ್ಪ, ನಾಗೇಂದ್ರ, ಶಿವಲಿಂಗ, ಚಾಮನಾಯಕ, ಗಣೇಶ್, ವೀರಭದ್ರ, ಪುಟ್ಟರಾಜು, ವಿಶೇಷಚೇತನರು ಹೆಚ್ಚಿನ ಸಂಖ್ಯೆಯಲ್ಲಿದ್ದರು.

ಆಂಬ್ಯುಲೆನ್ಸ್ ಉಗುಳುವ ದಟ್ಟ ಹೊಗೆ ನೋಡಿದರೆ ಶಾಕ್ ಗ್ಯಾರಂಟಿ

ಕ್ರಮ ಕೈಗೊಳ್ಳಲು ಪೊಲೀಸರ ಅಸಹಾಯಕತೆ



ಮೈಸೂರಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದ ಬಳಿ ದಟ್ಟ ಹೊಗೆ ಹೊರ ಸೂಸುತ್ತಾ ಸಾಗಿದ ಆಂಬ್ಯುಲೆನ್ಸ್

ಮೈಸೂರು, ಡಿ.20(ಬಿಎಲ್‌ಯು)– ಎಮಿಷನ್ ಟೆಸ್ಟ್ ಮಾಡಿಸದ ಆಂಬ್ಯುಲೆನ್ಸ್ ರಸ್ತೆಯೇ ಕಾಣಿಸದಂತೆ ದಟ್ಟ ಹೊಗೆ ಉಗುಳುತ್ತಾ ಹೋಗುವುದನ್ನು ನೋಡಿ ಸಂಚಾರ ವಿಭಾಗದ ಪೊಲೀಸರು ಅಸಹಾಯಕತೆ ವ್ಯಕ್ತಪಡಿಸಿದ ಪ್ರಸಂಗ ಮೈಸೂರಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಇಂದು ಕಂಡು ಬಂತು.

ಡಾ.ಅಂಬೇಡ್ಕರ್ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಖಂಡಿಸಿ ಬಿಜೆಪಿ ಕಾರ್ಯಕರ್ತರು ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಪ್ರತಿಭಟನೆ ನಡೆಸುವಾಗ ಡಿಸಿಪಿ, ಇನ್ಸ್‌ಪೆಕ್ಟರ್ ಸೇರಿದಂತೆ ನೂರಾರು ಪೊಲೀಸರು ಬಂದೋಬಸ್ತ್ ಕರ್ತವ್ಯದಲ್ಲಿದ್ದರು.

ಈ ವೇಳೆ ಹುಣಸೂರು ರಸ್ತೆಯಿಂದ ಸೈರನ್ ಹಾಕುತ್ತಾ ಬಂದ ಆಂಬ್ಯುಲೆನ್ಸ್ ರಸ್ತೆಯೇ ಕಾಣದಂತೆ ದಟ್ಟ ಹೊಗೆ ಹೊರ ಸೂಸುತ್ತಿತ್ತು. ಹೊಗೆ ರಸ್ತೆಯನ್ನೆಲ್ಲಾ ಆವರಿಸಿದ್ದ ಕಾರಣ ಮುಂದೆ ಹೋಗುತ್ತಿದ್ದ ಆಂಬ್ಯುಲೆನ್ಸ್ ಕೂಡ ಕಾಣಿಸುತ್ತಿರಲಿಲ್ಲ.

ಈ ಬಗ್ಗೆ ಹಿರಿಯ ಪೊಲೀಸ್ ಅಧಿಕಾರಿಗಳ ಪ್ರತಿಕ್ರಿಯೆ ಕೇಳಿದಾಗ, ಆಂಬ್ಯುಲೆನ್ಸ್‌ಗಳು ಯಾವಾಗ ನೋಡಿದರೂ ಸೈರನ್ ಕೂಗುತ್ತಾ ರೋಗಿಗಳನ್ನು ಹೊತ್ತು ಹೋಗುವುದರಿಂದ ನಾವು ತಡೆದು ನಿಲ್ಲಿಸಿ ದಂಡ ವಿಧಿಸಲು ಸಾಧ್ಯವಾಗುತ್ತಿಲ್ಲ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಪರಿಸರದ ಮೇಲೆ ದುಷ್ಪರಿಣಾಮ ಬೀರುವುದರಿಂದ ಆಂಬ್ಯುಲೆನ್ಸ್ ಚಾಲಕ ಅಥವಾ ಮಾಲೀಕರು ಎಮಿಷನ್ ಟೆಸ್ಟ್ ಮಾಡಿಸಬೇಕು. ಈ ಮೂಲಕ ವಾಹನದ ತಾಂತ್ರಿಕ ದೋಷ ಸರಿಪಡಿಸಿಕೊಳ್ಳಬೇಕು.

ಆಂಬ್ಯುಲೆನ್ಸ್‌ಗಳೇ ಹೀಗೆ ದಟ್ಟ ಹೊಗೆ ಉಗುಳಿದರೆ ಪರಿಸರ ಮಾಲಿನ್ಯದಿಂದ ಅನಾರೋಗ್ಯಕ್ಕೆ ಒಳಗಾಗುವ ರೋಗಿಗಳನ್ನು ಆಸ್ಪತ್ರೆಗೆ ಕರೆದೊಯ್ಯುವ ಪರಿಸ್ಥಿತಿ ಎದುರಾಗುತ್ತದೆ.

ಮೈಸೂರಿನ ಕೆಎಸ್‌ಆರ್‌ಟಿಸಿ ಬಸ್, ಲಾರಿ ಹಾಗೂ ಆಟೋಗಳಂತೂ ಭಾರೀ ಶಬ್ಧ ಮಾಡುತ್ತಾ ದಟ್ಟ ಉಗುಳುತ್ತಿವೆ. ಅಷ್ಟೇ ಅಲ್ಲದೆ ಹಲವು ಕಾರು, ದ್ವಿಚಕ್ರ ವಾಹನಗಳು ಕೂಡ ರಸ್ತೆ ಕಾಣದಂತೆ ಕಪ್ಪು ಹೊಗೆ ಹೊರಸೂಸುತ್ತದೆ.

ಪ್ರತಿಯೊಂದು ವಾಹನವೂ ವರ್ಷಕ್ಕೊಮ್ಮೆ ಎಮಿಷನ್ ಟೆಸ್ಟ್ ಮಾಡಿಸಿಕೊಳ್ಳಬೇಕೆಂಬ ನಿಯಮವಿದೆ. ಆದರೆ ಬಹಳಷ್ಟು ವಾಹನಗಳು ಎಮಿಷನ್ ಟೆಸ್ಟ್ ಮಾಡಿಸುವುದಿಲ್ಲ. ಇದರಿಂದ ವಾಹನಗಳು ದಟ್ಟ ಹೊಗೆ ಉಗುಳುತ್ತಾ ಸಾಗುವ ದೃಶ್ಯ ಸಾಮಾನ್ಯವಾಗಿದೆ.

ಎಮಿಷನ್ ಟೆಸ್ಟ್ ಮಾಡಿಸದ ವಾಹನಗಳ ವಿರುದ್ಧ ಆರ್‌ಟಿಓ ಹಾಗೂ ಪೊಲೀಸರು ಆಗಾಗ್ಗೆ ತಪಾಸಣೆ ಮಾಡಬೇಕು. ಆಗ ಮಾತ್ರ ಇದಕ್ಕೆ ಕಡಿವಾಣ ಹಾಕಲು ಸಾಧ್ಯ. ಇಲ್ಲದಿದ್ದರೆ ಪರಿಸರ ಮಾಲಿನ್ಯ ಉಂಟಾಗಿ ಶ್ವಾಸಕೋಶದ ಕ್ಯಾನ್ಸರ್ ಸೇರಿದಂತೆ ಹಲವು ರೋಗಗಳು ಕಾಡುತ್ತದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಪುಷ್ಪ–2 (ಕ)	3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಭೈರತಿ ರಣಗಲ್(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಪುಷ್ಪ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಪುಷ್ಪ–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ವಿಡುದಲೈ (ತ)	4 ಪ್ರದರ್ಶನಗಳು
ಸಂಗಂ	
ಪುಷ್ಪ–2 (ಕ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಪ್ರಭಾ	
ಪುಷ್ಪ–2 (ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಯುಐ (2024) (ಕ): ಬೆ.9.30ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12.10ಕ್ಕೆ, ಮ.2.35ಕ್ಕೆ, ಸಂ.5ಕ್ಕೆ, ರಾ.7.25ಕ್ಕೆ, ಮಾರ್ಕೋ (ಮ): ರಾ.9.55ಕ್ಕೆ.
ಸ್ಕ್ರೀನ್ 2	ಯುಐ (2024) (ಕ): ಬೆ.9ಕ್ಕೆ, ಪುಷ್ಪಾ 2 (ತೆ): ಮ.12.05ಕ್ಕೆ, ವಿಡುತಲೈ 2 (ತ): ಮ.3.55ಕ್ಕೆ, ರಾ.10.05ಕ್ಕೆ, ವನ್ವಾಸ್ (ಹಿಂ): ರಾ.7ಕ್ಕೆ
ಸ್ಕ್ರೀನ್ 3	ಇಡಿ ಎಕ್ಸ್ಟ್ರಾ ಡಿಸೆಂಟ್ (ಮ): ಬೆ.9.50ಕ್ಕೆ, ಪುಷ್ಪಾ 2 (ಕ): ಮ.12.15ಕ್ಕೆ, ಸಂ.6.10ಕ್ಕೆ, ಹರಿದಾಸರ ದಿನಚರಿ (ಕ): ಸಂ.4.05ಕ್ಕೆ, ಬಚ್ಚಲ ಮಲ್ಲಿ (ತೆ): ರಾ.10.05ಕ್ಕೆ,
ಸ್ಕ್ರೀನ್ 4	ಯುಐ (2024) (ಕ): ಬೆ.8.30ಕ್ಕೆ, ಬೆ.11.10ಕ್ಕೆ, ಮ.1.50ಕ್ಕೆ, ಸಂ.4.30.ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಅಮರನ್ (ಕ): ಬೆ.10.30ಕ್ಕೆ, ರಾ.7.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಧೀರ ಭಗತ್ ರಾಯ್ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಭೈರತಿ ರಣಗಲ್ (ಕ): ಬೆ.10.40ಕ್ಕೆ, ಪುಷ್ಪಾ 2 (ಕ): ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಪುಷ್ಪಾ 2 (ಕ): ಬೆ.11.30ಕ್ಕೆ, ರಾ.7.45ಕ್ಕೆ, ಪುಷ್ಪಾ 2 (ತೆ): ಸಂ.4ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಪುಷ್ಪಾ 2 (ಕ): ಮ.2.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶೈಕ್ಷಣಿಕ ಪ್ರವಾಸಕ್ಕೆ ತೆರಳಿದ್ದ ಬಸ್ ಪಲ್ಟಿ; 34 ವಿದ್ಯಾರ್ಥಿಗಳಿಗೆ ಗಾಯ!



ಕಾರವಾರ, ಡಿ.20– ಶೈಕ್ಷಣಿಕ ಪ್ರವಾಸಕ್ಕೆ ತೆರಳಿದ್ದ ಬಸ್ ಪಲ್ಟಿಯಾಗಿ 34 ವಿದ್ಯಾರ್ಥಿಗಳಿಗೆ ಗಾಯವಾಗಿರುವ ಘಟನೆ ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದಿದೆ.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಆರೋಳ್ಳಿ ಕ್ರಾಸ್ ಬಳಿ ಈ ಘಟನೆ ನಡೆದಿದ್ದು. ಘಟನೆಯಲ್ಲಿ ಶಿಕ್ಷಕರು–ವಿದ್ಯಾರ್ಥಿಗಳು ಸೇರಿ ಸುಮಾರು 34 ಮಂದಿಗೆ ಗಂಭೀರ ಗಾಯವಾಗಿದೆ.

ಮೂಲಗಳ ಪ್ರಕಾರ ಕೋಲಾರ ಜಿಲ್ಲೆಯ, ಮಾಲೂರಿನ ಮಾಸ್ತಿ ಹಳ್ಳಿಯ ಕರ್ನಾಟಕ ಪ್ರೌಢ ಶಾಲೆಯ ವಿದ್ಯಾರ್ಥಿಗಳು, ಉತ್ತರ ಕನ್ನಡ ಜಿಲ್ಲೆಯ ಪ್ರವಾಸಕ್ಕೆ ತೆರಳಿದ್ದರು. ಈ ಪ್ರವಾಸದಲ್ಲಿ ಸುಮಾರು ಶಿಕ್ಷಕರು ಮತ್ತು ಸಿಬ್ಬಂದಿ ಜೊತೆ 40 ಜನ ವಿದ್ಯಾರ್ಥಿಗಳಿದ್ದರು.

ಬಸ್ ಹೊನ್ನಾವರ ತಾಲೂಕಿನ ಗೇರುಸೊಪ್ಪ ಬಳಿಯ ಆರೋಳ್ಳಿ ಕ್ರಾಸ್ ಬಳಿ ಚಲಿಸುತ್ತಿದ್ದಾಗ ಪಲ್ಟಿಯಾಗಿದೆ. ಈ ಘಟನೆಯಲ್ಲಿ 34 ವಿದ್ಯಾರ್ಥಿಗಳು ಗಾಯಗೊಂಡಿದ್ದು, ಈ ಪೈಕಿ ನಾಲ್ವರು ವಿದ್ಯಾರ್ಥಿಗಳು ಗಂಭೀರವಾಗಿ ಗಾಯಗೊಂಡಿದ್ದಾರೆ. ಗಂಭೀರವಾಗಿ ಗಾಯಗೊಂಡಿರುವ 4 ವಿದ್ಯಾರ್ಥಿಗಳನ್ನು ಮಣಿಪಾಲ್ ಆಸ್ಪತ್ರೆಗೆ ರವಾನೆ ಮಾಡಲಾಗಿದೆ ಎಂದು ತಿಳಿದು ಬಂದಿದೆ.

ಇನ್ನು ಉಳಿದ 34 ಜನ ವಿದ್ಯಾರ್ಥಿಗಳಿಗೆ ಸಣ್ಣ ಪುಟ್ಟ ಗಾಯವಾಗಿದ್ದು. ಈ ವಿದ್ಯಾರ್ಥಿಗಳನ್ನು ಹೊನ್ನಾವರದ ತಾಲೂಕು ಆಸ್ಪತ್ರೆಗೆ ದಾಖಲು ಮಾಡಿದ್ದಾರೆ. ಹೊನ್ನಾವರ ಪೊಲೀಸ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕನ್ನಡ ರಾಜ್ಯೋತ್ಸವ



ಮೈಸೂರಿನ ಜೈ ಭುವನೇಶ್ವರಿ ಕನ್ನಡ ಕಲಾ ಸಮಿತಿ ವತಿಯಿಂದ ಆಯೋಜಿಸಲಾಗಿದ್ದ 35ನೇ ವಾರ್ಷಿಕೋತ್ಸವ ಮತ್ತು 69ನೇ ಕನ್ನಡ ರಾಜ್ಯೋತ್ಸವವನ್ನು ಮಹಮದ್ ದೂಬೇ ಉದ್ಘಾಟಿಸಿದರು. ಚಿತ್ರದಲ್ಲಿ ಸಮಿತಿ ಅಧ್ಯಕ್ಷ ಮಂಜುನಾಥ್ (ಮಿಲ್ಕ್ ಮಂಜು), ಸಮಾಜ ಸೇವಕ ಡಾ.ಶ್ರೀಕಾಂತ ಸುಂದರೇಶ್, ಡಾ.ಗಿರೀಶ್, ನಾಗೇಶ್, ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣೇಗೌಡ, ಯೋಗೇಶ್, ಉಪಾಧ್ಯಕ್ಷ ನಾಗರಾಜು, ಮಂಜುನಾಥ್, ಸರ್ದಾರ್ ಮಹೇಶ್, ಡಾ.ರಾಜ್ ಸಂಘದ ಅಧ್ಯಕ್ಷ ಎಂ.ರಾಮೇಗೌಡ, ಮೋಹನ್ ಕುಮಾರ್‌ಗೌಡ, ಮೋಹನ್‌ಕುಮಾರ್, ಶಶಿಕಿರಣ್, ರಂಗಪ್ಪಗೌಡ ಉಪಸ್ಥಿತರಿದ್ದರು.

ಸ್ನೇಹಮಯಿ ಕೃಷ್ಣ ಕಾನೂನು ಹೋರಾಟಕ್ಕೆ ಹಣ ಎಲ್ಲಿಂದ ಬರುತ್ತಿದೆ?

● ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಗಂಭೀರ ಪ್ರಶ್ನೆ ● ಬೆಂಗಳೂರಲ್ಲಿ ಆತನಿಗೆ ಉಳಿಯಲು ವ್ಯವಸ್ಥೆ ಮಾಡುವವರ್‍ಯಾರು; ನಮಗೆಲ್ಲಾ ತಿಳಿದಿದೆ!



ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಡಿ.20(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಪತ್ನಿಯ ವಿಚಾರವಾಗಿ ತಪ್ಪು ಮಾಹಿತಿ ನೀಡುತ್ತಿರುವ ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಹಿಂದಿನ ಶಕ್ತಿ, ವ್ಯಕ್ತಿ ಯಾರು? ಯಾರೆಲ್ಲ ಬೆಂಬಲ ನೀಡುತ್ತಿದ್ದಾರೆ ಎಂದು ನಮಗೆ ತಿಳಿದಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಕಿಡಿಕಾರಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾದಲ್ಲಿ ಸಿಎಂ ಸಿದ್ದರಾಮಯ್ಯ ಅವರ ಪತ್ನಿ ಪಡೆದಿರುವ ನಿವೇಶನ ಕಾನೂನುಬದ್ಧವಾಗಿಯೇ ಇದೆ. ಆದರೂ ಬಿಜೆಪಿ ಹಾಗೂ ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಸುಳ್ಳು ಆರೋಪ ಮಾಡುತ್ತಲೇ ಇದ್ದಾರೆ. ಸ್ನೇಹಮಯಿ ಕೃಷ್ಣ ಅವರು ಇಬ್ಬರು ವ್ಯಕ್ತಿಗಳು ಆಮಿಷ ಒಡ್ಡಲು ಬಂದಿದ್ದರು ಎಂದು ಆರೋಪ ಮಾಡಿದ್ದಾರೆ. ಲೋಕಾಯುಕ್ತಕ್ಕೂ ದೂರು ನೀಡಿದ್ದಾರೆ. ಸಿದ್ದರಾಮಯ್ಯ ಅವರ ಪತ್ನಿ ಯಾವುದೇ ಕಾರಣಕ್ಕೂ ಅಂತಹ ಮಟ್ಟಕ್ಕೆ ಇಳಿಯುವವರಲ್ಲ ಎಂದು ಪ್ರತಿಪಾದಿಸಿದರು.

ಆಮಿಷಕ್ಕೆ ಒಳಗಾಗದಿದ್ದರೆ ಸ್ನೇಹಮಯಿ ಕೃಷ್ಣ ಪುತ್ರ ಏಕೆ ಹರ್ಷ ಮತ್ತು ಶ್ರೀನಿಧಿ ಜೊತೆ ಹೋದರು. ಕೃಷ್ಣ ನೀಡಿರುವ ಸಿಸಿ ಟಿವಿ ಫುಟೇಜ್ 10.30ರಲ್ಲಿ ದಾಖಲಾದ ದೃಶ್ಯಗಳಾಗಿವೆ. ಇಡೀ ದಿನದ ಫುಟೇಜ್ ಕೊಡಬೇಕು. ನಮ್ಮ ಬಳಿಯೂ ಇರುವ ವಿಡಿಯೋವನ್ನು ಪೊಲೀಸರಿಗೆ ನೀಡುತ್ತೇವೆ. ಸ್ನೇಹಮಯಿ ಕೃಷ್ಣ ಯಾರ ಆಮಿಷಕ್ಕೆ ಒಳಗಾಗಿಲ್ವಾ, ನ್ಯಾಯಾಲಯದ ಹೋರಾಟಕ್ಕೆ ಹಣ ಎಲ್ಲಿಂದ ಬರುತ್ತದೆ, ಬೆಂಗಳೂರಲ್ಲಿ ಪ್ರತ್ಯೇಕ ರೂಂ ಕೊಟ್ಟಿದ್ದು ಯಾರು, ದೊಡ್ಡ ಹೋಟೆಲ್‌ನಲ್ಲಿ ಉಳಿಯಲು ವ್ಯವಸ್ಥೆ ಮಾಡಿರುವುದು ಯಾರು ಎಂಬುದು ಗೊತ್ತಿದೆ. ದೆಹಲಿ ಭೇಟಿ ಬಗ್ಗೆಯೂ ತಿಳಿದಿದೆ ಎಂದರು.

ಮುಡಾವನ್ನು ಬಿಡಿಎ ಮಾದರಿಯಲ್ಲಿ ಮಾಡಲು ವಿಧೇಯಕ ಮಂಡನೆ ಸ್ವಾಗತಾರ್ಹ. ಮುಡಾಗೆ ಹೊಸ ಸ್ವರೂಪ ನೀಡುವ ಅಗತ್ಯವಿದೆ ಎಂದು ಲಕ್ಷ್ಮಣ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಮುಖಂಡರಾದ ಎಂ.ಶಿವಣ್ಣ, ಹೇಮಂತ್, ಮಾಧ್ಯಮ ವಕ್ತಾರ ಮಹೇಶ್ ಇನ್ನಿತರರು ಇದ್ದರು.

ಪಕ್ಷದ ರಾಷ್ಟ್ರಾಧ್ಯಕ್ಷರಿಂದ ಹಿಡಿದು ಬೂತ್ ಅಧ್ಯಕ್ಷರವರೆಗೂ

ಸಮಾನ ಗೌರವ ನೀಡುವ ಪರಂಪರೆ ಬಿಜೆಪಿಯಲ್ಲಿದೆ

ಪಕ್ಷದ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ



ಪಕ್ಷದ ನೂತನ ಬೂತ್ ಮಟ್ಟದ ಪದಾಧಿಕಾರಿಗಳಿಗೆ ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಪಕ್ಷದ ಧ್ವಜ ನೀಡಿ ಅಭಿನಂದಿಸಿದರು.

ಮೈಸೂರು, ಡಿ.20(ಪಿಎಂ)– ಬಿಜೆಪಿಯಲ್ಲಿ ಪಕ್ಷದ ರಾಷ್ಟ್ರಾಧ್ಯಕ್ಷರಿಂದ ಹಿಡಿದು ಬೂತ್ ಅಧ್ಯಕ್ಷರವರೆಗೂ ಸಮಾನ ಗೌರವ ನೀಡುವ ಪರಂಪರೆ ಇದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ತಿಳಿಸಿದರು.

ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ವರುಣಾ ವಿಧಾನಸಭಾ ಕ್ಷೇತ್ರದ ಗರ್ಗೇಶ್ವರಿ ಮಹಾಶಕ್ತಿ ಕೇಂದ್ರದ ರಂಗನಾಥಪುರ ಬೂತ್ ನಂ.5ರಲ್ಲಿ ಸಂಘಟನಾ ಪರ್ವ 2024ರಡಿ ಸದರಿ ಬೂತ್‌ನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಆಯ್ಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಷ್ಟ್ರಾಧ್ಯಕ್ಷರು, ರಾಜ್ಯಾಧ್ಯಕ್ಷರು, ಜಿಲ್ಲಾಧ್ಯಕ್ಷರು, ಮಂಡಲ ಅಧ್ಯಕ್ಷರು ಹಾಗೂ ಬೂತ್ ಅಧ್ಯಕ್ಷರು ಸೇರಿದಂತೆ ಎಲ್ಲರಿಗೂ ಸಮಾನ ಗೌರವ ನೀಡುವ ಉನ್ನತ ಪರಂಪರೆಯನ್ನು ಬಿಜೆಪಿ ನಡೆಸಿಕೊಂಡು ಬರುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರು ದೆಹಲಿಯಿಂದ ಬೂತ್‌ಮಟ್ಟದವರೆಗೂ ಪಕ್ಷ ಸಂಘಟಿಸುವ ಬಗೆಯನ್ನು ಅರಿತಿದ್ದಾರೆ. ಜೊತೆಗೆ ಪದಾಧಿಕಾರಿಗಳನ್ನು ಹೇಗೆ ಗೌರವಿಸಬೇಕು ಹಾಗೂ ಕೇಂದ್ರದ ಅನುದಾನವನ್ನು ಗ್ರಾಮೀಣ ವ್ಯಾಪ್ತಿಗೆ ಹೇಗೆ ತಲುಪಿಸಬೇಕೆಂಬುದನ್ನೂ ಅವರು ಬಲ್ಲವರಾಗಿದ್ದಾರೆ ಎಂದು ಹೇಳಿದರು.

ಪಕ್ಷ ಸಂಘಟನೆಯಲ್ಲಿ ಮೋದಿಯವರ ಮಾರ್ಗದರ್ಶನ ಮಹತ್ವದ್ದಾಗಿದೆ. ಅದೇ ರೀತಿ ರಾಜ್ಯದಲ್ಲೂ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯಕ್ಕೆ ನೀಡಿದ ಕೊಡುಗೆಗಳು ಅನನ್ಯ. ಹುಟ್ಟು ಹೋರಾಟಗಾರರಾದ ಅವರು ತಮ್ಮ ಅಧಿಕಾರವಾಧಿಯಲ್ಲಿ ನೀಡಿದ ಭಾಗ್ಯಲಕ್ಷ್ಮೀ ಯೋಜನೆಯ ಫಲವನ್ನು ಹೆಣ್ಣು ಮಕ್ಕಳು ಈಗಲೂ ಪಡೆಯುತ್ತಿದ್ದಾರೆ. ಇದರ ಸಂಪೂರ್ಣ ಶ್ರೇಯಸ್ಸು ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ ಎಂದರು.

ಯಡಿಯೂರಪ್ಪ ಅವರಂತೆಯೇ ಹೋರಾಟದ ಮನೋಭಾವ ಹೊಂದಿರುವ ನಮ್ಮ ನಾಯಕರೂ ಆದ ಶಾಸಕರು ಹಾಗೂ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಾವು ಅಧ್ಯಕ್ಷರಾದ ಕ್ಷಣದಿಂದ ವಿಶ್ರಾಂತಿ ಪಡೆಯದೇ ಪಕ್ಷ ಸಂಘಟಿಸಲು ಹಗಲಿರುಳು ಶ್ರಮಿಸುತ್ತಿದ್ದಾರೆ. ಹಲವಾರು ಚುನಾವಣೆಗಳಲ್ಲಿ ಅತ್ಯುತ್ತಮವಾಗಿ ತೊಡಗಿಸಿಕೊಂಡ, ಅವರು ಕಳೆದ ಲೋಕಸಭಾ ಚುನಾವಣೆಯಲ್ಲಿ ಇಡೀ ರಾಜ್ಯದಲ್ಲಿ ಹೆಚ್ಚಿನ ಸಂಸದರನ್ನು ಗೆಲ್ಲಿಸುವ ಮೂಲಕ ಪ್ರಧಾನಿ ಮೋದಿಯವರ ಕೈ ಬಲಪಡಿಸಿದ್ದಾರೆ ಎಂದರಲ್ಲದೆ, ಬೂತ್ ಕಮಿಟಿಯಲ್ಲಿ 13 ಮಂದಿಯನ್ನು ಆಯ್ಕೆ ಮಾಡಿದ್ದು, ಸಂಘಟನಾ ದೃಷ್ಟಿಯಿಂದ ಕಮಿಟಿಯು ಪ್ರತಿ ತಿಂಗಳು ಸಭೆ ಮಾಡಬೇಕೆಂದು ಸಲಹೆ ನೀಡಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಡವಾಡಿ ಮಹೇಶ್ ಮಾತನಾಡಿ, ಬೂತ್ ಮಟ್ಟದಲ್ಲಿ ಹಲವಾರು ಕಾರ್ಯಕ್ರಮ ಗಳನ್ನು ನಾವು ಹಮ್ಮಿಕೊಳ್ಳುತ್ತಿದ್ದು, ಇದರಿಂದ ಪಕ್ಷಕ್ಕೆ ಮುಂದಿನ ದಿನಗಳಲ್ಲಿ ಪ್ರಯೋಜನವಾಗಲಿದೆ. ಬೂತ್ ಅಧ್ಯಕ್ಷರು ಪ್ರತಿ ತಿಂಗಳು ಸಭೆಗಳನ್ನು ಹಮ್ಮಿಕೊಳ್ಳುವ ಮೂಲಕ ಸಂಘಟನೆಗೆ ಒತ್ತು ನೀಡಬೇಕು. ಮೋದಿಯವರ ಕಾರ್ಯಕ್ರಮಗಳನ್ನು ಮನೆಮನೆಗೆ ತಲುಪಿಸುವ ಕಾರ್ಯವನ್ನು ಬೂತ್ ಅಧ್ಯಕ್ಷರು, ಪದಾಧಿಕಾರಿಗಳು ಮಾಡಬೇಕೆಂದು ತಿಳಿಸಿದರು.

ಪಕ್ಷದ ಜಿಲ್ಲಾ ಕಾರ್ಯಾಲಯ ಕಾರ್ಯದರ್ಶಿ ಪಾಪಣ್ಣ, ವರುಣಾ ವಿಧಾನಸಭಾ ಕ್ಷೇತ್ರದ ಪಕ್ಷದ ಪ್ರಧಾನ ಕಾರ್ಯದರ್ಶಿ ವೆಂಕಟರಮಣಶೆಟ್ಟಿ, ಬೂತ್‌ನ ನೂತನ ಪದಾಧಿಕಾರಿಗಳಾದ ಅಧ್ಯಕ್ಷ ಸಿದ್ದರಾಜು, ಕಾರ್ಯದರ್ಶಿ ಪ್ರದೀಪ್, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಶಂಕರ್, ಮುಖಂಡರಾದ ಕೃಷ್ಣ, ಬಸವಣ್ಣ, ಸಿದ್ದಶೆಟ್ಟಿ, ಯೋಗೇಶ್, ಮನು, ಮಲ್ಲೇಶ್, ದರ್ಶನ್, ರಾಮಾಚಾರಿ, ಪ್ರಸಾದ್ ಮತ್ತಿತರರು ಹಾಜರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.20– ಡಿ.21 ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ತುರ್ತು ನಿರ್ವಹಣಾ ಕಾಮಗಾರಿ ನಿಮಿತ್ತ ದೇವಲಾಪುರ, ಚಿಕ್ಕೇಗೌಡನಹುಂಡಿ, ಹಡಜನ, ಮಾರಶೆಟ್ಟಿಹಳ್ಳಿ, ಟಿ.ಎಂ ಹುಂಡಿ, ರಾಜ್ ಅಂಡ್ ರಾಜ್ ಬಡಾವಣೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಹಾಸ್ಟೆಲ್‌ಗಳ ಸೌಲಭ್ಯ ಬಳಸಿಕೊಂಡು ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಸಾಧನೆ ಮಾಡಬೇಕು

ಜಿಪಂ ಮುಖ್ಯ ಯೋಜನಾಧಿಕಾರಿ ಕೆ.ಬಿ.ಪ್ರಭುಸ್ವಾಮಿ ಸಲಹೆ



ಮೈಸೂರಿನ ಹಳ್ಳಿ ಬೋಗಾಧಿಯಲ್ಲಿರುವ ನೂತನವಾಗಿ ನಿರ್ಮಿಸಿರುವ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಜಿ.ಪಂ. ಮುಖ್ಯಯೋಜನಾಧಿಕಾರಿ ಕೆ.ಬಿ.ಪ್ರಭುಸ್ವಾಮಿ ಅವರು ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಮೈಸೂರು, ಡಿ.20(ಎಂಟಿವೈ)– ವಿದ್ಯಾರ್ಥಿ ನಿಯಗಳಲ್ಲಿರುವ ಸೌಲಭ್ಯ ಬಳಸಿಕೊಂಡು ವಿದ್ಯಾರ್ಥಿಗಳು ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡುವ ಮೂಲಕ ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳುವಂತೆ ಎಂದು ಜಿಪಂ ಮುಖ್ಯಯೋಜನಾಧಿಕಾರಿ ಕೆ.ಬಿ.ಪ್ರಭುಸ್ವಾಮಿ ಸಲಹೆ ನೀಡಿದ್ದಾರೆ.

ಮೈಸೂರಿನ ಹಳ್ಳಿ ಬೋಗಾಧಿಯಲ್ಲಿ ನೂತನವಾಗಿ ನಿರ್ಮಿಸಿರುವ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಸರ್ಕಾರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ಬಡ ಹಾಗೂ ಗ್ರಾಮೀಣ ಭಾಗದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಒದಗಿಸುತ್ತಿದೆ. ಮೈಸೂರಿನ ಹಳ್ಳಿ ಬೋಗಾಧಿಯಲ್ಲಿ ನಿರ್ಮಿಸಿರುವ ವಿದ್ಯಾರ್ಥಿನಿಲಯಕ್ಕೆ ದಾಖಲಾಗುವ ವಿದ್ಯಾರ್ಥಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಲು ಗಮನ ಕೇಂದ್ರೀಕರಿಸಬೇಕು ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಿ ರಾಜ್ಯದಲ್ಲಿ 150 ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳನ್ನು ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿ ಆನ್‌ಲೈನ್ ಮೂಲಕ ಉದ್ಘಾಟಿಸಿದ್ದಾರೆ. ಮೈಸೂರು ಜಿಲ್ಲೆಗೆ 14 ಹಾಸ್ಟೆಲ್‌ಗಳು ಮಂಜೂರಾಗಿದ್ದು ವಿದ್ಯಾರ್ಥಿಗಳು ಸರ್ಕಾರದ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಂಡು ಜೀವನದಲ್ಲಿ ಗುರಿ ತಲುಪಬೇಕು ಎಂದು ತಿಳಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರಾಘವೇಂದ್ರ ಮಾತನಾಡಿ, ಮುಖ್ಯಮಂತ್ರಿಗಳು ಮೈಸೂರಿನವರೇ ಆಗಿರುವುದರಿಂದ ಜಿಲ್ಲೆಗೆ 14 ಹಾಸ್ಟೆಲ್‌ಗಳನ್ನು ಕೊಟ್ಟಿದ್ದಾರೆ. ವಿದ್ಯಾರ್ಥಿಗಳಿಗೆ ಹಂತ ಹಂತವಾಗಿ ಎಲ್ಲಾ ಸೌಲಭ್ಯಗಳನ್ನು ಮಾಡಿಕೊಡುತ್ತೇವೆ. ಎಲ್ಲರೂ ಚೆನ್ನಾಗಿ ಓದಬೇಕು. ತಂದೆ, ತಾಯಿಗೆ ಒಳ್ಳೆಯ ಹೆಸರು ತರುವುದರೊಂದಿಗೆ ತಾವು ಇರುವ ಹಾಸ್ಟೆಲ್‌ಗಳಿಗೂ ಒಳ್ಳೆ ಹೆಸರು ತರುವಂತೆ ಸಲಹೆ ನೀಡಿದರು. ಎಂದರು. ಈ ಸಂದರ್ಭದಲ್ಲಿ ತಾಲೂಕು ಕಲ್ಯಾಣಾಧಿಕಾರಿ ಚಂದ್ರಕಲಾ, ನಿಲಯಪಾಲಕ ಜಗದೀಶ್ ಜಿ.ಕೋರಿ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಇದುವರೆಗೆ ಶಿಷ್ಟ ಸಾಹಿತ್ಯ ನೀಡದೇ ಇರುವ ಸಂಸ್ಕೃತಿ ಆಯಾಮವನ್ನು ಜನಪದ ಸಾಹಿತ್ಯ ನೀಡುತ್ತಿದೆ

ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಡಿ.ವಿ.ಪರಶಿವಮೂರ್ತಿ ಅಭಿಮತ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ತೆಲುಗು ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವತಿಯಿಂದ ಆಯೋಜಿಸಿದ್ದ 'ಜನಪದ ಐತಿಹ್ಯಗಳು– ಅವಶ್ಯಕತೆ' ಕುರಿತ ಅಂತರರಾಷ್ಟ್ರೀಯ ಸಮ್ಮೇಳನವನ್ನು ಹಂಪಿ ಕನ್ನಡ ವಿಶ್ವದ್ಯಾಲಯ ಕುಲಪತಿ ಡಿ.ವಿ.ಪರಶಿವಮೂರ್ತಿ ಉದ್ಘಾಟಿಸಿದರು.

ಮೈಸೂರು, ಡಿ.20(ಎಂಟಿವೈ)– ಇದುವರೆಗೂ ಶಿಷ್ಟ ಸಾಹಿತ್ಯ ನೀಡದಿರುವ ಅನೇಕ ಸಂಸ್ಕೃತಿ ಆಯಾಮಗಳನ್ನು ಜನಪದ ಸಾಹಿತ್ಯ ನೀಡುತ್ತಿದ್ದು, ಈಗ ಸಂಶೋಧನೆಯ ದೃಷ್ಟಿಕೋನ ಬದಲಾಗುತ್ತಿರುವುದರಿಂದ ಜನಪದರ ಐತಿಹ್ಯಗಳೂ ಚರಿತ್ರೆಗೆ ಮೂಲ ಆಕಾರಗಳಾಗಿ ಹೊರಹೊಮ್ಮಿವೆ ಎಂದು ಹಂಪಿ ಕನ್ನಡ ವಿಶ್ವದ್ಯಾಲಯ ಕುಲಪತಿ ಪ್ರೊ. ಡಿ.ವಿ. ಪರಶಿವಮೂರ್ತಿ ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ತೆಲುಗು ಅಧ್ಯಯನ ಮತ್ತು ಸಂಶೋಧನಾ ವಿಭಾಗ ಶುಕ್ರವಾರ ಆಯೋಜಿಸಿದ್ದ 'ಜನಪದ ಐತಿಹ್ಯಗಳು– ಅವಶ್ಯಕತೆ' ಕುರಿತ ಅಂತರರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಕ್ಷರಸ್ಥ ಸಮಾಜ ನೀಡಲಾಗದ ಜ್ಞಾನವನ್ನು ಅನಕ್ಷರಸ್ಥ ಸಮಾಜ ನೀಡುತ್ತಿದೆ. ಜನಪದರು ಬಾಯಿಂದ ಬಾಯಿಗೆ ಪಸರಿಸಿದ ಜ್ಞಾನ ಭಂಡಾರ ಎನಿಸಿದ ಐತಿಹ್ಯಗಳು ಸಂಶೋಧನೆಗೆ ಮಹತ್ತರವಾದ ಮೂಲವಾಗಿದೆ. ನಮ್ಮ ಅಧ್ಯಯನಕ್ಕೆ ಜನಪದವೇ ಆಕಾರವಾಗಬೇಕಾಗಿತ್ತು. ಆದರೆ, ಅಲ್ಲಿ ಕಲ್ಪನೆಗಳು ಹೆಚ್ಚಿವೆ ಎಂಬ ಕಾರಣಕ್ಕೆ ಅದನ್ನು ಕಡೆಗಣಿಸಲಾಗಿತ್ತು. ಇದೀಗ ಮತ್ತೆ ಜನಪದ ಐತಿಹ್ಯಗಳು ಮಹತ್ವ ಪಡೆದುಕೊಳ್ಳುತ್ತಿವೆ. ಆ ಮೂಲಕ ಜನಪದರ ಐತಿಹ್ಯಗಳೂ ಚರಿತ್ರೆಗೆ ಮೂಲ ಆಕಾರಗಳಾಗಿವೆ ಎಂದರು.

ಐತಿಹ್ಯಕ್ಕೂ ಜನರ ಮನಸ್ಸಿಗೂ ನಿಕಟ ಸಂಬಂಧವಿರುತ್ತದೆ. ಐತಿಹಾಸಿಕ ಘಟನೆಗಳ ನಿರೂಪಣೆಯಾಗಿ ಕಾಣಬಹುದು. ಐತಿಹ್ಯಗಳ ಅಧ್ಯಯನವೆಂದರೆ ಮನುಷ್ಯನ ಮನಸ್ಸಿನ ಆಲೋಚನೆಗಳ ಅಧ್ಯಯನ ಎಂಬ ವಾದವಿದೆ. ಆದರೆ, ಕನ್ನಡದಲ್ಲಿ ಐತಿಹ್ಯಗಳ ಕುರಿತು ವಿಶೇಷ ಅಧ್ಯಯನ ನಡೆದಿಲ್ಲ. ಜನಪದ ತಜ್ಞರು ಪೂರ್ಣ ಪ್ರಮಾಣದಲ್ಲಿ ಸಂಶೋಧನೆ ಮಾಡಿಲ್ಲ. ಐತಿಹ್ಯಗಳೆಂದರೆ ಕಟ್ಟುಕಥೆ ಎಂಬ ಮಾತು ಸರಿಯಲ್ಲ. ಆ ಸಂದರ್ಭದ ಅನೇಕ ವಿಚಾರಗಳನ್ನು ಜನಪದರು ಐತಿಹ್ಯದ ಮೂಲಕ ನಮಗೆ ನೀಡಿದ್ದಾರೆ ಎಂದು ತಿಳಿಸಿದರು.

ಇದೇ ವೇಳೆ ತೆಲುಗು ಅಧ್ಯಯನ ಕೇಂದ್ರದ ಡೀನ್ ಪ್ರೊ.ಎಂ.ರಾಮನಾಥಂ ನಾಯುಡು ಮಾತನಾಡಿ, ಜನಪದ ಐತಿಹ್ಯಗಳಲ್ಲಿ ಸ್ಥಾನಿಕ ಮತ್ತು ಸಂಚಾರಿ ಐತಿಹ್ಯವೆಂಬ ಎರಡು ವಿಧಗಳಿದ್ದು, ಈ ಐತಿಹ್ಯಗಳು ಜನರಲ್ಲಿ ನಂಬಿಕೆಯನ್ನು ಬಿತ್ತುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇದನ್ನು ಸಂಶೋಧನಾ ದೃಷ್ಟಿಯಲ್ಲಿ ಗಮನಿಸಿದಾಗ ನಮಗೆ ಐತಿಹಾಸಿಕ ಸತ್ಯದ ದರ್ಶನವಾಗುತ್ತದೆ. ಸಮ್ಮೇಳನಕ್ಕೆ 300 ಮಂದಿ ನೋಂದಣಿಯಾಗಿದ್ದಾರೆ ಎಂದರು.

ಆನ್‌ಲೈನ್ ಮೂಲಕ ಅಮೆರಿಕಾದಿಂದ ವೇಮುಲ ಲೆನಿನ್ ಬಾಬು ವಿಚಾರ ಮಂಡಿಸಿದರು. ಸಮ್ಮೇಳನದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ವಹಿಸಿದ್ದರು. ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಶೈಕ್ಷಣಿಕ ಡೀನ್ ಪ್ರೊ.ಎನ್.ಲಕ್ಷ್ಮಿ, ಪರೀಕ್ಷಾಂಗ ಕುಲಸಚಿವ ಪ್ರೊ.ಹೆಚ್.ವಿಶ್ವನಾಥ್, ಹಣಕಾಸು ಅಧಿಕಾರಿ ಪ್ರೊ.ಎಸ್. ನಿರಂಜನ್ ರಾಜ್ ಉಪಸ್ಥಿತರಿದ್ದರು.

ಎರಡನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು:
ಎನ್.ರವಿ, ರತ್ನ, ಸ್ವಾಮಿ, ಪುಷ್ಪ, ಕೃಷ್ಣ, ಮನುಜ ಹಾಗೂ ಮೊಮ್ಮಕ್ಕಳು, ಕಾಮಟಗೇರಿ, ಮಂಡಿ ಮೊಹಲ್ಲಾ, ಮೈಸೂರು

ಪ್ರೇಮ
ನಿಧನ : 21.12.2022

GREAT OPPORTUNITY

Global Reach Local Excellence
Backend Sales
Related to any FMCG Companies
Experience: 2 to 5 Years (M / F)
Qualification: Any Graduate,
Excellent Communication Skills
Computer Knowledge (Strong in Excel) Job Location - Mysore
Contact: 9686501699

SITE FOR SALE

30x40 E/F Site @ Rs.17 Lakhs DTCP approved Layout, Bank Loan available, Ready to Register, Next to Marashetty halli Behind Chamundi
9538583377

ಬೇಕಾಗಿದ್ದಾರೆ

ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ.
ಸಂಬಳ: 20,000
9164946160

Sri Chamundeshwari & Sri karumariamma Temple Trust-Vidyaranyapuram Mysuru-570008
9606918639
Wanted immediately
Office Assistant-male Only
Age 40-60 Years,
Qualification: P.u.c/any Degree
Interview Date: 22.12.2024/ Time 10.00 Am To 12.30 P.m
Attend With Resume / Photo / Xerox Copy Of Aadhar Card

neem BOND PLATINUM
PLYWOOD & DOORS
@ FACTORY DEPOT RATES
10 YEARS WARRANTY*
ISO 9001:2015 Certified Company Depot
SS Build Mart® 9901291267 9845426862

12ನೇ ವರ್ಷದ ಚಿರಸ್ಮರಣೆ



ಶ್ರೀ ಕೆ.ಮಹದೇವಪ್ರಸಾದ್ (ಮಧು) ಎಂ.ಎಸ್
ಅಸಿಸ್ಟೆಂಟ್ ಮ್ಯಾನೇಜರ್, ಇ.ಐ.ಟಿ ಪ್ರೈ ಲಿ., ಬೆಂಗಳೂರು

21.12.2024ಕ್ಕೆ 12ನೇ ವರ್ಷದ ಪುಣ್ಯದಿನ ನಿನ್ನ ಆತ್ಮಕ್ಕೆ ದೇವರು ನೆಮ್ಮದಿ ಮತ್ತು ಶಾಂತಿ ಯನ್ನು ನೀಡಲೆಂದು ಪ್ರಾರ್ಥಿಸುವ ಹಾಗೂ ಸದಾ ನಿನ್ನ ನೆನಪಿನಲ್ಲಿರುವ

ತಂದೆ : ಶ್ರೀ ಜಿ.ಕೆಂಪಯ್ಯ, ನಿವೃತ್ತ ನಗರ ಹಾಗೂ ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ತಾಯಿ: ಎಸ್.ಪುಟ್ಟಗೌರಮ್ಮ, ಅಣ್ಣ, ಅತ್ತಿಗೆ ಹಾಗೂ ಮಕ್ಕಳು, ಅಕ್ಕ, ತಂಗಿಯರು, ಭಾವನವರುಗಳು ಹಾಗೂ ಬಂಧುಮಿತ್ರರು.



ಹಸಿರು ನಮ್ಮ ಉಸಿರು

GSSS INSTITUTE OF ENGINEERING AND TECHNOLOGY FOR WOMEN

GEETHA SHISHU SHIKSHANA SANGHA(R)
KRS Road, Metagalli, Mysuru - 570 016
Ph: 0821-4257304, 2581304

ONLY FEW SEATS AVAILABLE

MBA
- Marketing
- Human Resource
- Finance

With dual Specialization — For Women only

For More Information Call: 72592 56789

Dr. M. Jagannatha Shenoi, President, GSSS (R) — www.geethashishu.in — Smt. Anupama B. Pandit, Secretary, GSSS (R)

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕೆಪಿಪಿಪಿಯಲ್ಲಿ ಮಾತ್ರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಕಾವೇರಿ ಭವನ ಸಂಕೀರ್ಣ, ಗೋಕುಲಂ ನಾಲ್ಕನೇ ಹಂತ, ಯಾದವಗಿರಿ ಅಂಚೆ, ಮೈಸೂರು – 570020
Ph.0821-2515598 Email: eevccdn2@gmail.com

ಅಲ್ಪಾವಧಿ ಇ-ಟೆಂಡರ್ ಸಂಖ್ಯೆ: 07/2024-25 ದಿನಾಂಕ: 19.12.2024

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.2, ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು ಇವರು ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಿಟ್ಟ ಮೊತ್ತ 30.00 ಲಕ್ಷದಿಂದ ರೂ.50.00 ಲಕ್ಷದವರೆಗಿನ 02 ಸಂಖ್ಯೆಯ ಕಾಮಗಾರಿಗಳ ಪೈಕಿ 01 ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ (ಎರಡನೇ ಕರೆ) ಮತ್ತು 1 ಸೇವಾರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಐಟಂವಾರು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಫಾರಂಗಳಿಗೆ ಅರ್ಜಿಯನ್ನು ನಿಗಧಿತ ಇಎಂಡಿಯೊಂದಿಗೆ ಸಲ್ಲಿಸಲು ಕಡೆಯ **ದಿನಾಂಕ: 27.12.2024 ಸಂಜೆ: 4.00** ರವರೆಗೆ, ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 30.12.2024 ಸಂಜೆ: 5.30 ಗಂಟೆಗೆ.** ಗುತ್ತಿಗೆದಾರರು ಟೆಂಡರ್ ಫಾರಂಗಳನ್ನು ಕೆಪಿಪಿಪಿಯಲ್ಲಿ ಪಡೆದು ಅರ್ಜಿ ಮತ್ತು ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆಪಿಪಿಪಿ ಮುಖಾಂತರ ಸಲ್ಲಿಸಬಹುದಾಗಿರುತ್ತದೆ ಹಾಗೂ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ ವಿಳಾಸ: **www.kppp.karnataka.gov.in** ರಲ್ಲಿ ಅಥವಾ ವಿಭಾಗ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ

ಹೊರಗುತ್ತಿಗೆ ಆಧಾರದ ಮೇಲೆ Mechanic/ತಾಂತ್ರಿಕ ಸಹಾಯಕರು/Technical Assistants ಬೇಕಾಗಿದ್ದಾರೆ:

- ITI / Diploma / Apprentice Training in any trade.
- ITI ಪದವಿಯಲ್ಲಿ ಯಾವುದೇ ಕೋರ್ಸ್ ಮಾಡಿರುವ ಅಭ್ಯರ್ಥಿಗಳನ್ನು ಆಯ್ಕೆಮಾಡಲಾಗುವುದು ಹಾಗೂ DIPLOMA / APPRENTICE ತರಬೇತಿಯಲ್ಲಿ ಯಾವುದೇ ಕೋರ್ಸ್ ಮಾಡಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
- ಕೆಲಸದ ಸ್ಥಳ- ಮೈಸೂರು ಗ್ರಾಮಾಂತರ, ಮೈಸೂರು ನಗರ ಮತ್ತು ಹಾಸನ ವಿಭಾಗಗಳಿಗೆ ಬೇಕಾಗಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
0821-3588801, 9110692229, 8618943513

ಅಂತರಾಷ್ಟ್ರೀಯ ಗೃಹಬಳಕೆ ವಸ್ತುಗಳ ಅತಿದೊಡ್ಡ ಪ್ರದರ್ಶನ

ಗೃಹಶೋಭೆ

TIMING 11 Am to 9 Pm — 10 Days

ಗೃಹಶೋಭೆ ಲಿವಿಂಗ್ ಸ್ಟೈಲ್ ಎಕ್ಸಿಬಿಷನ್

Special Attraction
14th ANNUAL CAKE SHOW From MYSORE Dolphin




Prize Sponsored by
HARSHA | Arunsolar | Stone | OCEAN

ಡಿಸೆಂಬರ್ 20 ರಿಂದ 29 ರವರೆಗೆ ಮಹಾರಾಜ ಕಾಲೇಜು ಗ್ರೌಂಡ್ ಮೈಸೂರು

ENTRY Rs. 50/- Children Below 10 Years Free Entry PARKING FREE





ಉಚಿತ ಪ್ರವಾಸ @ ಗೋವಾ*
ಗೋವಾಕ್ಕೆ ಪ್ರವಾಸ 7 ಜೋಡಿಗಳಿಗೆ (ವೆಚ್ಚ ಇವುಗಳನ್ನು ಒಳಗೊಂಡಿದೆ: ಪ್ರಯಾಣ, 2 ರಾತ್ರಿಗಳ ತಂಗುವಿಕೆ & ಕ್ಯಾಸಿನೊ ಭೇಟಿ) ಲಕ್ಕಿ ಡ್ರಾ ಮೂಲಕ

ಉಚಿತ
ವಜ್ರದ ಆಭರಣಗಳನ್ನು ಖರೀದಿಸಿ ಮತ್ತು ಪ್ರತಿ ಕ್ಯಾರೆಟ್‌ಗೆ 500 ಮಿಲಿಗ್ರಾಂ ಚಿನ್ನದ ನಾಣ್ಯವನ್ನು ಉಚಿತವಾಗಿ ಪಡೆಯಿರಿ

ರಿಯಾಯಿತಿ
ರೂ.15,000
ರಿಯಾಯಿತಿ ಪ್ರತಿ ಕ್ಯಾರೆಟ್ ಮೇಲೆ

only NATURAL DIAMONDS
Natural Diamond Council

ಎಕ್ಸ್‌ಚೇಂಜ್
ನಿಮ್ಮ ಹಳೆಯ ಚಿನ್ನವನ್ನು ಅಂತರಾಷ್ಟ್ರೀಯ ಲ್ಯಾಬ್ ಪ್ರಮಾಣೀಕೃತ ವಜ್ರಗಳೊಂದಿಗೆ ಎಕ್ಸ್‌ಚೇಂಜ್ ಮಾಡಿಕೊಳ್ಳಿ ಹೆಚ್ಚಿನ ಲಾಭಗಳೊಂದಿಗೆ

ಆನ್‌ಲೈನ್‌ನಲ್ಲಿ ಶಾಪಿಂಗ್ ಮಾಡಿ:
www.josalukkasonline.com


Scan to watch

PUSH360

MYSURU: Opp. Woodlands Theatre, B.N. Road. Ph: 0821-2441012 — ಜೋಸ್ ಆಲುಕ್ಕಾಸ್

KARNATAKA I ANDHRA PRADESH I TELANGANA I TAMIL NADU I PUDUCHERRY I KERALA

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮಾನ್ ವೆಂಕಟೇಶ್ (ಮರಿಯಪ್ಪ)

(ನಿವೃತ್ತ ನೌಕರರು, ಕೆ.ಆರ್.ಆಸ್ಪತ್ರೆ)

ಇವರು ದಿ: 11.12.2024 ಬುಧವಾರ ದೈವಾದೀನರಾಗಿದ್ದು. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 21.12.2024 ಶನಿವಾರ ಬೆಳಗ್ಗೆ 10 ಗಂಟೆಗೆ **ಶ್ರೀ ಮರುಳೇಶ್ವರ ಟ್ರಸ್ಟ್, ಶಾಂತಿಧಾಮ ಆವರಣ, ಕೆ.ಜಿ.ಕೊಪ್ಪಲು, ಕುವೆಂಪುನಗರ, ಆದಿಚುಂಚನಗಿರಿ ರಸ್ತೆ, ಮೈಸೂರು** ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮೃತರ ಪತ್ನಿ ಶ್ರೀಮತಿ ಮಮತ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಮೃತರ ಸಹೋದರರು, ತಂಗಿ-ಭಾವ ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು